ವಾರ್ತೆ

# ಜನಪದ

ವಾರ್ಷಿಕ ಚಂದಾ ರೂ.25/-

ನವೆಂಬರ್ 2020




## ಕೋವಿಡ್–19

## ಭಯಬೇಡ, ಜಾಗೃತರಾಗೋಣ

For More Job News Visit: www.kpscvaani.com

For More Job News Visit: www.kpscvaani.com



# ಕೋವಿಡ್-19 ಬಿಕ್ಕಟ್ಟಿನ ಸಂದರ್ಭದಲ್ಲಿ ಮಕ್ಕಳು ಮತ್ತು ಗರ್ಭಿಣಿಯರ ಆರೈಕೆ ಹಾಗೂ ರಕ್ಷಣೆ

#TogetherAgainstCOVID-19







ಆರೋಗ್ಯ ಸಹಾಯವಾಣಿ ಸಂಖ್ಯೆ **104**

ಕೋವಿಡ್-19 ಸಮಯದಲ್ಲಿ ಕಾಳಜಿ ವಹಿಸಿ

## ಈ ಅಭ್ಯಾಸಗಳನ್ನು ರೂಢಿಸಿಕೊಳ್ಳಿ

- ನಿಯಮಿತವಾಗಿ ನಿಮ್ಮ ಕೈಗಳನ್ನು ಸಾಬೂನು ಮತ್ತು ನೀರಿನಿಂದ ತೊಳೆಯಿರಿ
- ಸೀನುವಾಗ/ಕೆಮ್ಮುವಾಗ ಕರವಸ್ತ್ರ ಬಳಸಿ ಹಾಗೂ ಆಗಾಗ್ಗೆ ಕಣ್ಣು, ಮೂಗು, ಬಾಯಿ ಮುಟ್ಟಿಕೊಳ್ಳಬೇಡಿ.
- ಸಾರ್ವಜನಿಕ ಸ್ಥಳಗಳಲ್ಲಿ ಮುಖಗವಸು ಖಡ್ಡಾಯವಾಗಿ ಧರಿಸಿ ಹಾಗೂ ಕನಿಷ್ಠ 1 ಮೀಟರ್ ಭೌತಿಕ ಅಂತರವಿರಲಿ.
- ಒಂದು ವೇಳೆ ನಿಮಗೆ ಕೆಮ್ಮು, ಜ್ವರ, ಉಸಿರಾಟದ ತೊಂದರೆ ಕಂಡುಬಂದರೆ ವೈದ್ಯರಿಗೆ ಅಥವಾ ನಿಮ್ಮ ಪ್ರದೇಶದ ಆರೋಗ್ಯ ಕಾರ್ಯಕರ್ತರಿಗೆ ವರದಿ ಮಾಡಿ ಅಥವಾ ಆರೋಗ್ಯ ಸಹಾಯವಾಣಿ ಸಂಖ್ಯೆ 104ಕ್ಕೆ ಕರೆಮಾಡಿ.

## ಸುರಕ್ಷಿತ ಗರ್ಭಧಾರಣೆ ಮತ್ತು ಹೆರಿಗೆ

- ವೇಳಾಪಟ್ಟಿಯಂತೆ ಪ್ರಸವ ಪೂರ್ವ (ಎಎನ್‌ಸಿ) ತಪಾಸಣೆ ಮಾಡಿಸಿಕೊಳ್ಳಿ
- ಸುರಕ್ಷಿತ ಹೆರಿಗೆಗೆ ಹತ್ತಿರದ ಸರ್ಕಾರಿ ಆಸ್ಪತ್ರೆ, ಸಾರಿಗೆ, ಹಣದ ವ್ಯವಸ್ಥೆ ಮಾಡಿಕೊಳ್ಳಿ ಹಾಗೂ ತಾಯಿ ಕಾರ್ಡ್ (ಎಂಸಿಪಿ) ಮತ್ತು ವೈಯಕ್ತಿಕ ಗುರುತಿನ ಚೀಟಿಗಳನ್ನು ಒಯ್ಯಿರಿ.
- ನೆನಪಿಡಿ ಆಸ್ಪತ್ರೆಯಲ್ಲಿನ ಹೆರಿಗೆ ನಿಮಗೆ ರಕ್ಷಣೆ ನೀಡುತ್ತದೆ ಮತ್ತು ಮಾತೃತ್ವ ಯೋಜನೆಗಳನ್ನು ಸಹ ಖಚಿತಪಡಿಸುತ್ತದೆ.

**ಯಾವುದೇ ಅನಾರೋಗ್ಯ ಸಂದರ್ಭದಲ್ಲಿ ನಿಮ್ಮ ಪ್ರದೇಶದ ವೈದ್ಯರು ಅಥವಾ ಆರೋಗ್ಯ ಕಾರ್ಯಕರ್ತರನ್ನು ಸಂಪರ್ಕಿಸಿ.**

## ನವಜಾತ ಶಿಶುವಿನ ಆರೈಕೆ

- ಹುಟ್ಟಿದ ಒಂದು ಗಂಟೆಯೊಳಗೆ ಸ್ತನ್ಯಪಾನ ಮಾಡಿಸಿ, ಮೊದಲ ಆರು ತಿಂಗಳು ಪ್ರತೀ ಗಂಟೆಗೊಮ್ಮೆ ಎದೆ ಹಾಲನ್ನು ಮಾತ್ರ ಕುಡಿಸಿ.
- ಶಿಶುವನ್ನು ತಾಯಿ ಮಡಿಲಲ್ಲಿ ಬೆಚ್ಚಗಿರಿಸಿ, ಮೊದಲ ಮೂರು ದಿನ ಸ್ನಾನ ಮಾಡಿಸಬೇಡಿ.
- ಮಗುವನ್ನು ಸ್ಪರ್ಶಿಸುವ ಮೊದಲು ಮತ್ತು ನಂತರ ಸಾಬೂನಿನಿಂದ ನಿಮ್ಮ ಕೈ ತೊಳೆಯಿರಿ.
- ಒಂದುವೇಳೆ ನಿಮಗೆ ಅನಾರೋಗ್ಯವಿದ್ದಲ್ಲಿ ಸ್ತನ್ಯಪಾನ ಮಾಡಿಸುವಾಗ ಮುಖಗವಸನ್ನು ಧರಿಸಿ.
- ಒಂದು ವೇಳೆ ಮಗುವಿಗೆ ಜ್ವರ, ಹಾಲು ಕುಡಿಯಲು ಸಾಧ್ಯವಾಗದಿದ್ದರೆ ನಿಮ್ಮ ಪ್ರದೇಶದ ವೈದ್ಯರು ಅಥವಾ ಆರೋಗ್ಯ ಕಾರ್ಯಕರ್ತರನ್ನು ಸಂಪರ್ಕಿಸಿ

## ಶಿಶು ಮತ್ತು ಚಿಕ್ಕ ಮಕ್ಕಳ ಆಹಾರ ಮತ್ತು ಪೋಷಣೆ

- 6 ತಿಂಗಳ ನಂತರ ಮೃದು ಆಹಾರವನ್ನು ನೀಡಿ ಹಾಗೂ 2 ವರ್ಷದವರೆಗೆ ಸ್ತನ್ಯಪಾನ ಮಾಡಿಸಿ.
- ನಿಯಮಿತ ತೂಕ ತಪಾಸಣೆಗೆ ಅಗತ್ಯ ಪೋಷಣೆಯ ಸಲಹೆಗೆ ಸ್ಥಳೀಯ ಅಂಗನವಾಡಿ ಕೇಂದ್ರ ಅಥವಾ ಆಶಾ ಕಾರ್ಯಕರ್ತೆಯನ್ನು ಭೇಟಿ ಮಾಡಿ.

**ಕೋವಿಡ್-19 ಪರಿಸ್ಥಿತಿ ಲೆಕ್ಕಿಸದೆ ಮುನ್ನೆಚ್ಚರಿಕೆಗಳೊಂದಿಗೆ ಮಗುವಿಗೆ ಹಾಲುಣಿಸುವುದು ಮುಖ್ಯವಾಗಿದೆ.**

## ಲಸಿಕಾಕರಣ

- ನಿಮ್ಮ ಮಗುವಿಗೆ ವೇಳಾಪಟ್ಟಿಯ ಪ್ರಕಾರ ಲಸಿಕೆ ನೀಡಲು ಮರೆಯದಿರಿ.
- ಪೂರ್ಣ ಲಸಿಕಾಕರಣ ರೋಗ ನಿರೋಧಕತೆಯನ್ನು ಹೆಚ್ಚಿಸಿ ನಿಮ್ಮ ಮಗುವನ್ನು ಹಲವಾರು ರೋಗಗಳಿಂದ ರಕ್ಷಿಸುತ್ತದೆ.
- ತಾಯಿ ಮತ್ತು ಮಕ್ಕಳ ರಕ್ಷಣೆ ಕಾರ್ಡ್‌ನ್ನು ಸುರಕ್ಷಿತವಾಗಿರಿಸಿ.

ನಿಮ್ಮ ಮಗುವಿನ ಸಮಯೋಚಿತ ರೋಗ ನಿರೋಧಕ ಶಕ್ತಿಗಾಗಿ ನಿಮ್ಮ ಆರೋಗ್ಯ ಸೇವಾ ಕಾರ್ಯಕರ್ತರನ್ನು, ಅಂಗನವಾಡಿ ಕಾರ್ಯಕರ್ತರನ್ನು ಅಥವಾ ಆಶಾ ಕಾರ್ಯಕರ್ತರೊಂದಿಗೆ ಸಂಪರ್ಕದಲ್ಲಿರಿ

## ಮಕ್ಕಳ ರಕ್ಷಣೆ

- ಮಕ್ಕಳು ಬಾಲಕಾರ್ಮಿಕ ಪದ್ಧತಿ, ಕಳ್ಳಸಾಗಣೆ, ಹಿಂಸೆ, ನಿಂದನೆ ಮತ್ತು ಬಾಲ್ಯ ವಿವಾಹಕ್ಕೆ ಹೆಚ್ಚು ಗುರಿಯಾಗುತಿದ್ದು ಅದರಿಂದ ರಕ್ಷಿಸಿ.
- ನಿಮ್ಮ ಮಗುವನ್ನು ಯಾವುದೇ ಅಪರಿಚಿತರೊಂದಿಗೆ ಬಿಡಬೇಡಿ ಹಾಗೂ ವೈಯಕ್ತಿಕ ಸುರಕ್ಷತೆಯನ್ನು ಮಕ್ಕಳಿಗೆ ಕಲಿಸಿ ಮತ್ತು ಪೋಷಕರೊಂದಿಗೆ ಎಲ್ಲವನ್ನು ಹಂಚಿಕೊಳ್ಳಲು ಪ್ರೋತ್ಸಾಹಿಸಿ.

**ಯಾವುದೇ ಬೆಂಬಲಕ್ಕಾಗಿ ಸ್ಥಳೀಯ ಅಧಿಕಾರಿಗಳು, ಎನ್‌ಜಿಓಗಳು, ಅಂಗನವಾಡಿ ಕಾರ್ಯಕರ್ತರು ಮತ್ತು 1098 ಮಕ್ಕಳ ಸಹಾಯವಾಣಿಯನ್ನು ಅಥವಾ ಪೊಲೀಸ್ ಸಹಾಯವಾಣಿ ಸಂಖ್ಯೆ 100ನ್ನು ಸಂಪರ್ಕಿಸಿ**

**"ನಾನು ಕೋವಿಡ್-19 ಸೇವೆಗಳಲ್ಲಿ ತೊಡಗಿರುವವರನ್ನು ಗೌರವ ಮತ್ತು ಪ್ರೀತಿಯಿಂದ ಬೆಂಬಲಿಸುತ್ತೇನೆ."**





**05** ಕೊರೊನಾ ಭಯ ಬೇಡ: ಎಚ್ಚರ ಇರಲಿ
• ಡಾ॥ ಎಸ್.ಎಂ.ತಿಮ್ಮಾಪೂರ

**12** ಸುರಕ್ಷಿತ ಆಚರಣೆಯಾಗಲಿ ದೀಪಾವಳಿ
• ಮುನಿರಾಜ.ಎಂ

**15** ಸಂಗೀತ ಸಾರ್ವಭೌಮ : ಎಸ್.ಪಿ.ಬಿ
• ಡಿ. ಪಿ. ಮುರಳೀಧರ್

**20** ಮಾದಕ ವಸ್ತು ವ್ಯಸನ ತಡೆಗೆ ಅರಿವು ಮೂಡಿಸುವುದೇ ಮಾರ್ಗ
• ಡಾ. ಎಸ್.ಬಿ. ಬಸೆಟ್ಟಿ

**25** ಕನ್ನಡದ ದಾಸಯ್ಯ: ಶಾಂತಕವಿಗಳು
• ಪಿ.ಎಸ್. ಪರ್ವತಿ

**30** ಕನ್ನಡದ ತಾಯಿ ಭುವನೇಶ್ವರಿಯ ಏಕೈಕ ದೇವಾಲಯ
• ವಿದ್ಯಾ ವಿ. ಹಾಲಭಾವಿ

**32** ಕನ್ನಡ ಭಾಷೆಯ ಉಳಿವು, ಬೆಳವಣಿಗೆ, ನಮ್ಮಿಂದಲೇ
• ಡಾ. ಗುರಲಿಂಗಪ್ಪ ಅಂಕದ

**34** ಮೈಸೂರಿನ ದೊಡ್ಡ ಗಡಿಯಾರ
• ಎಂ. ಎಸ್. ಚಂದ್ರಶೇಖರ್ ಅಯ್ಯರ್

**37** ಕೀರ್ತನೆಗಳ ಮೂಲಕ ಸಮಾಜ ಸುಧಾರಣೆ ಮಾಡಿದ ಮಹಾನ್ ಕವಿ : ಕನಕದಾಸ
• ಹೆಚ್. ಶಿವಣ್ಣ

**40** ತೋಟಗಾರಿಗೆಯಲ್ಲಿ ಯಶಸ್ಸು ಕಂಡ ನಿವೃತ್ತ ಬ್ಯಾಂಕ್ ನೌಕರ
• ಜಿ.ಚಂದ್ರಕಾಂತ

**43** ಸುಗಮ ಸಂಗೀತದ ಪ್ರಥಮ ಹರಿಕಾರ– ಪದ್ಮಚರಣ್ ಶತಮಾನೋತ್ಸವ
• ವೈ.ಕೆ. ಸಂಧ್ಯಾಶರ್ಮ

**46** ಪರಂಪರೆಯ ಹುಂಡಿ: ಲಕ್ಕುಂಡಿ
• ಡಾ. ಬಿ.ಆರ್.ಮಮತಾ

**50** ಪದಬಂಧ–11
• ವಿದ್ಯಾ ವಿ. ಹಾಲಭಾವಿ



ಪ್ರಧಾನ ಸಂಪಾದಕರು
ಡಾ॥ ಪಿ. ಎಸ್. ಹರ್ಷ, ಐಪಿಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಡಿ.ಪಿ. ಮುರಳೀಧರ್
ಜಂಟಿ ನಿರ್ದೇಶಕರು

ಕೆ. ರೋಹಿಣಿ
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜೆ. ಪೂರ್ಣಿಮ

ಪ್ರಕಾಶಕರು
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ,
ಬೆಂಗಳೂರು – 560 001
**Ph :** 080-22028103 / 22028023
**email :** varthajanapada@yahoo.co.in
www.dipr.karnataka.gov.in


ಮುದ್ರಕರು
ಅಭಿಮಾನಿ ಪಬ್ಲಿಕೇಷನ್ಸ್ ಪ್ರೈ. ಲಿ.
ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು – 560 010



ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

**For More Job News Visit: www.kpscvaani.com**

# ಓದುಗರಿಂದ...




ಅಕ್ಟೋಬರ್ ಮಾಹೆಯ ಜನಪದದಲ್ಲಿ ಡಾ. ಮಂಜುಳ ಹುಲ್ಲಹಳ್ಳಿಯವರ ಮುಳ್ಳಯ್ಯನಗಿರಿ ಲೇಖನ ಓದುವಾಗ ಅತ್ಯಂತ ಪುಳಕಿತಳಾಗಿ, ನನ್ನಷ್ಟಕ್ಕೆ ನಾನೇ ಚಂದ್ರದ್ರೋಣ ಪರ್ವತದಲ್ಲಿ ತೇಲಾಡಿದ ಅನುಭವವಾಯಿತು. ಶ್ರೀಮತಿ ಮಂಜುಳ ಅವರು ಮುಳ್ಳಯ್ಯನಗಿರಿ ಜೊತೆಗೆ ಚಂದ್ರದ್ರೋಣ ಪರ್ವತದ ಬಗ್ಗೆ ಕೂಡ ಪರಿಚಯವನ್ನು ಲೇಖನದ ಮೂಲಕ ಅತ್ಯಂತ ಸುಂದರವಾಗಿ ತಿಳಿಸಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳು.

**–ವಿಶಾಲಾಕ್ಷಿ ಎಂ, ಹಾಸನ**

ವಾರ್ತಾ ಜನಪದ ಅಕ್ಟೋಬರ್ ಸಂಚಿಕೆಯಲ್ಲಿ ಉಷಾ ವಿಶ್ವನಾಥ್ ಅವರು 'ಹಸಿದವರ ಹೊಟ್ಟೆ ತಣಿಸುವ ಕಾರ್ಯದಲ್ಲಿ ಯುವರಾಜ' ಲೇಖನ ತುಂಬಾ ಮಹತ್ವ ಪೂರ್ಣವಾಗಿದೆ. ಏಕೆಂದರೆ ಬೆಂಗಳೂರು ಒಂದರಲ್ಲೇ ಶುಭ ಸಮಾರಂಭ ಮತ್ತು ಇತರೆ ಸಮಾರಂಭಗಳಲ್ಲಿ ಪೋಲಾಗುತ್ತಿರುವ ಆಹಾರ ಪದಾರ್ಥಗಳನ್ನು ಗಮನಿಸಿದರೆ ಅತ್ಯಂತ ನೋವಾಗುತ್ತದೆ.

ಒಂದು ಅಂಕಿ ಅಂಶದ ಪ್ರಕಾರ ವರ್ಷದಲ್ಲಿ ಒಟ್ಟಾರೆ 14,000 ಟನ್ ಆಹಾರ ಪೋಲಾಗುವುದು ತಿಳಿದು ಬರುತ್ತದೆ. ಇದು ನಮ್ಮ ರಾಜಧಾನಿಯಲ್ಲಾದರೆ, ಇಡೀ ದೇಶದಲ್ಲಿ ಪೋಲಾಗುವ ಆಹಾರ ಎಷ್ಟಾಗಬಹುದು ಎಂಬುದನ್ನು ನೆನೆಸಿಕೊಂಡರೆ ಮನಸ್ಸಿಗೆ ಆಘಾತವಾಗುತ್ತದೆ.

ಹಿಂದೆ ದೇಶದಲ್ಲಿ ಬರಗಾಲ ಬಂದಾಗ ದೇಶದ ಜನತೆ ಸೋಮವಾರ ಒಂದು ಹೊತ್ತು ಊಟ ತ್ಯಜಿಸುವಂತೆ ದಿವಂಗತ ಲಾಲ್ ಬಹದ್ದೂರ್ ಶಾಸ್ತ್ರಿ ಅವರು ನಾಡಿನ ಜನತೆಗೆ ಕರೆ ಕೊಟ್ಟಿದ್ದಾರೆಂದು ತಿಳಿದು ಬರುತ್ತದೆ. ಅದೇ ಪ್ರಕಾರ ಸರ್ಕಾರಗಳು ದುಂದು ವೆಚ್ಚ ಮಾಡುವ ಸಭೆ ಸಮಾರಂಭಗಳಿಗೆ ಕಡಿವಾಣ ಹಾಕುವ ಮೂಲಕ ಸ್ವಲ್ಪ ಮಟ್ಟಿಗಾದರೂ ಇಂತಹ ಪ್ರತಿಷ್ಠೆಯ ಕಾರ್ಯಕ್ರಮಗಳಿಗೆ ಕಡಿವಾಣ ಹಾಕಬಹುದು.

**–ಸುಜಾತಾ. ಕೆ. ಸಿ, ಕೃಷ್ಣರಾಜ ನಗರ**

ಡಾ. ರವಿಪ್ರಸಾದ್ ಸಜ್ಜನ್ ಅವರು ವಾರ್ತಾ ಜನಪದದಲ್ಲಿ ಬರೆದಿರುವ **"ಹೈನುಗಾರಿಕೆಯಲ್ಲಿ ರೈತ ಮಹಿಳೆಯ ಸಾಧನೆ"** ಲೇಖನ ಓದಿದ ಬಳಿಕ ಯುವ ಕೃಷಿ ಮಹಿಳೆ ಹರಿತಾ ಚೌಧರಿಯ ಬಗ್ಗೆ ತುಂಬ ಹೆಮ್ಮೆ ಎನಿಸಿತು.

ತನ್ನ ಮನೆಯವರು ನಿರಂತರವಾಗಿ ಮಾಡಿಕೊಂಡು ಬರುತ್ತಿದ್ದ ಹೈನುಗಾರಿಕೆಯನ್ನು ಕಾರಣಾಂತರದಿಂದ ಕೈಬಿಡಲು ಪ್ರಯತ್ನಿಸುತ್ತಿರುವಾಗಲೇ ಮಗಳು ಹರಿತಾ ಚೌಧರಿ ತನ್ನ ವಿದ್ಯಾಭ್ಯಾಸಕ್ಕೆ ತಿಲಾಂಜಲಿ ನೀಡಿ ಮನೆಯವರ ಜೊತೆ ಹೈನುಗಾರಿಕೆಗೆ ಕೈ ಜೋಡಿಸಿ, ಅದರಲ್ಲಿ ಯಶಸ್ವಿಯಾಗಿರುವುದು ನಿಜಕ್ಕೂ ಶ್ಲಾಘನೀಯವೇ ಸರಿ. ಮಹಿಳೆಯರಿಗೆ ಅಂತಹ ದೈತ್ಯವಾದ ಎಮ್ಮೆಗಳನ್ನು ಸಾಕುವುದು ಕಷ್ಟವಾಗುತ್ತದೆ. ಆದಾಗ್ಯೂ ಕೂಡ ಹರಿತಾ ಅವರು ಇದರಲ್ಲಿ ಸಾಧನೆ ಮಾಡಿರುವುದು ಪ್ರಶಂಸನೀಯವಾದುದು. ಈ ಯುವ ರೈತ ಮಹಿಳೆಯ ಸಾಧನೆಯ ಬಗ್ಗೆ ಬೆಳಕು ಚೆಲ್ಲಿರುವ ಡಾ. ರವಿಪ್ರಸಾದ್ ಸಜ್ಜನ್ ಅವರು ಅಭಿನಂದನಾರ್ಹರು.

**– ರಾಜಣ್ಣ, ಮೈಸೂರು**

ಅಕ್ಟೋಬರ್ 2020 ರ ವಾರ್ತಾ ಜನಪದ ಸಂಚಿಕೆಯು ಅದ್ಭುತವಾಗಿ ಮೂಡಿಬಂದಿದೆ. ಅದರಲ್ಲೂ ವಿನೀತ್ ರಾವ್ ಅವರ "ಗಾಂಧೀಜಿಯ ಮೊದಲ ಕರಾವಳಿ ಭೇಟಿಗೆ ಶತಮಾನ" ಈ ಲೇಖನ ಮಾಹಿತಿ ಪೂರ್ಣವಾಗಿದೆ. ಯುವಜನರಿಗೆ ಲೇಖನ ಸಂಗ್ರಹ ಯೋಗ್ಯವಾಗಿದೆ. ಲೇಖಕರಿಗೆ ಹಾಗೂ ಲೇಖನ ಪ್ರಕಟಿಸಿದ ವಾರ್ತಾ ಜನಪದ ಬಳಗಕ್ಕೆ ಧನ್ಯವಾದಗಳು.

**–ನೇತಾಜಿ ಗಾಂಧಿ, ವಿಜಯಪುರ**

ಪರಿವರ್ತನೆಯತ್ತ ಶಿಕ್ಷಣ ಇಲಾಖೆಯ ಮಾಹಿತಿ, ಗಾಂಧೀಜಿಯ ಕಾಯಕ ಸಂಸ್ಕೃತಿ, ಶಾಸ್ತ್ರೀಜಿಯ ಸರಳತೆ ಹಾಗೂ ಆದರ್ಶ, ಮೈಸೂರು ಅರಮನೆಯ ಇತಿಹಾಸ, ಮುಳ್ಳಯ್ಯನಗಿರಿ ಮಾಹಿತಿ, ಅಪರೂಪದ ರಾಷ್ಟ್ರಪತಿ ಪ್ರಣವ್, ಏಕತಾಮೂರ್ತಿ ಉಪಪ್ರಧಾನಿ ಸರ್ದಾರ ವಲ್ಲಭಾಯಿ ಪಟೇಲರ ವಿಶೇಷ ಕಾರ್ಯಗಳನ್ನು ಪರಿಚಯಿಸುವುದರೊಂದಿಗೆ ಅಕ್ಟೋಬರ್ ವಾರ್ತಾ ಜನಪದ ಪತ್ರಿಕೆಯು ಸಂಪದ್ಭರಿತ ಸಂಚಿಕೆಯಾಗಿದೆ.

**–ಸುಮಂತ್ ರಾ. ತುಪ್ಪದ, ಹಾನಗಲ್ಲ**

ಕೋವಿಡ್–19 ನಿಂದ ಬಹಳಷ್ಟು ಜನರು ಸಂಕಷ್ಟಕ್ಕೆ ಒಳಗಾಗಿರುವಾಗ ಬೀದರ್ ಜಿಲ್ಲೆಯ ರೈತ ಶರಣಪ್ಪ ಬಂಪರ್ ಬೆಳೆಯನ್ನು ಪಡೆದಿರುವುದು ಹೆಮ್ಮೆಯ ವಿಚಾರ, ತಜ್ಞರ ಸಲಹೆಯಂತೆ ಜೈವಿಕ ಗೊಬ್ಬರವನ್ನು ಬಳಸುವ ಜೊತೆಗೆ ವೈಜ್ಞಾನಿಕ ಬೆಳೆ ಪದ್ಧತಿ ವಿಧಾನವನ್ನು ಅನುಸರಿಸಿ ಪಪಾಯ ಕೃಷಿಯನ್ನು ಮಾಡಿರುವುದು ಉಳಿದವರಿಗೆ ಮಾದರಿಯಾಗಲಿದೆ.

ಅದೇ ರೀತಿಯಲ್ಲಿ ಬೆಳೆಗೆ ಬರುವ ಕೀಟಗಳ ಬಾಧೆಯನ್ನು ಮೊಟ್ಟೆ ದ್ರಾವಣ ಸಿಂಪಡಿಸುವ ಮೂಲಕ ನಿವಾರಿಸಿಕೊಂಡಿರುವ ಕೊಪ್ಪಳದ ರೈತ ಮುತ್ತನಗೌಡ ಅವರ ಹೊಸ ಆವಿಷ್ಕಾರವನ್ನು ಓದಿ ಆಶ್ಚರ್ಯವಾಯಿತು.

**–ನಾಗೇಶ ನಾಯಕ, ಕೊಪ್ಪಳ**

'ವಾರ್ತಾ ಜನಪದ' ಮಾಸಿಕ ಈಗ **www.kanaja.in**ನಲ್ಲಿ ಲಭ್ಯ

ವಾರ್ಷಿಕ ಚಂದಾ ರೂ.25/–

**ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಕಡ್ಡಾಯವಾಗಿ ಸೇವಾಸಿಂಧುವಿನ ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.**

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

For More Job News Visit: www.kpscvaani.com

# ಕೊರೊನಾ ಭಯ ಬೇಡ ಎಚ್ಚರ ಇರಲಿ




ಡಾ॥ ಎಸ್.ಎಂ.ತಿಮ್ಮಾಪೂರ

**ಸಾಂಕ್ರಾಮಿಕ ರೋಗವಾದ ಕೊರೊನಾಗೆ ನಿಗದಿತ ಔಷಧಿಯನ್ನು ಕಂಡುಹಿಡಿಯುವ ತನಕವೂ ಅದು ನಮ್ಮನ್ನು ಬಿಟ್ಟು ಹೋಗುವುದಿಲ್ಲ. ಹಾಗಾಗಿ ಕೊರೊನಾಗೆ ಹೆದರಿ ಕೂರುವ ಬದಲು, ರೋಗ ಹರಡದಂತೆ ಎಚ್ಚರ ವಹಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಲೇಖನವು ಕೊರೊನಾ ಸೋಂಕಿನ ಕುರಿತು ಅರಿವು ಮೂಡಿಸಲಿದೆ.**

**ಕೋ**ವಿಡ್–19 (ಕೊರೊನಾ)ಎನ್ನುವುದು ವೈರಸ್‌ನಿಂದ ಬರುವ ಸಾಂಕ್ರಾಮಿಕ ರೋಗ. 2019ರ ಹೊಸ ಕೊರೊನಾ ವೈರಸ್ (Novel Corona Virus) ಕೊರೊನಾ ವೈರಸ್ ಕಾಯಿಲೆಗೆ (ಕೋವಿಡ್–19) ಕಾರಣವಾಗುತ್ತದೆ. ಆದ್ದರಿಂದ ಇದನ್ನು ನೊವೆಲ್ ಕೊರೊನಾ ವೈರಸ್ ಎಂದು ಕರೆಯುತ್ತಾರೆ. ಕೊರೊನಾ ವೈರಸ್ ಕಾಯಿಲೆ 2019 (COVID-19) ಅನ್ನು 2019ರ ಡಿಸೆಂಬರ್‌ನಲ್ಲಿ ಚೀನಾದ ವುಹಾನ್‌ನಲ್ಲಿ ಗುರುತಿಸಲಾಯಿತು. 2020ರ ಜನವರಿಯಲ್ಲಿ ಇದನ್ನು ಸಾರ್ವಜನಿಕ ಆರೋಗ್ಯದ ತುರ್ತು ಪರಿಸ್ಥಿತಿ (Medical Emergency of Public Health Importance) ಎಂದು ಗುರುತಿಸಿ, ಇದನ್ನು ಮಾರ್ಚ್ 11, 2020ರಂದು ವಿಶ್ವ ಆರೋಗ್ಯ ಸಂಸ್ಥೆಯಿಂದ(WHO) ಸಾಂಕ್ರಾಮಿಕ ರೋಗ (Pandemic disease) ಎಂದು ಘೋಷಿಸಲಾಯಿತು.

**ಸೋಂಕಿನ ತೀವ್ರತೆ, ಅಂಕಿ–ಅಂಶಗಳು:**

2020ರ ಸೆಪ್ಟೆಂಬರ್ 29ರ ಹೊತ್ತಿಗೆ ವಿಶ್ವದಾದ್ಯಂತ 33.2 ದಶಲಕ್ಷಕ್ಕೂ ಹೆಚ್ಚು ಪ್ರಕರಣಗಳು ವರದಿಯಾಗಿವೆ. ಪ್ರಕರಣಗಳ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆಯಿದೆ. ವಿಶ್ವದಾದ್ಯಂತ 1 ದಶಲಕ್ಷಕ್ಕೂ ಹೆಚ್ಚಿನ ಸಾವುಗಳು ಸಂಭವಿಸಿರುವುದು ಸೋಂಕಿನ ತೀವ್ರತೆಗೆ ಸಾಕ್ಷಿಯಾಗಿದೆ. ಇನ್ನು ಭಾರತದಲ್ಲಿ ಒಟ್ಟು 6.15 ದಶಲಕ್ಷ ಪ್ರಕರಣಗಳು ವರದಿಯಾಗಿದ್ದು, ವಿಶ್ವದಲ್ಲಿ 2ನೇ ಸ್ಥಾನದಲ್ಲಿದೆ. ಭಾರತದಲ್ಲಿ 1 ಲಕ್ಷ ಜನರು ಇದುವರೆಗೆ ಸೋಂಕಿಗೆ ಬಲಿಯಾಗಿದ್ದಾರೆ.

ರೋಗಲಕ್ಷಣವಿಲ್ಲದ ಹಾಗೂ ಲಕ್ಷಣವಿರುವ ಸೋಂಕಿತ ಜನರಿಂದ ಈ ಸೋಂಕು ಹರಡಬಹುದು. ಸೋಂಕಿತ ವ್ಯಕ್ತಿಗಳು



For More Job News Visit: www.kpscvaani.com

**ಒಬ್ಬ ವ್ಯಕ್ತಿಯು ಕೋವಿಡ್-19 ರೋಗಲಕ್ಷಣಗಳನ್ನು ಹೊಂದಿದ್ದರೆ, ಅಥವಾ ಖಚಿತ ಪಟ್ಟ ಕೋವಿಡ್ ರೋಗಿಯ ಸಂಪರ್ಕದಲ್ಲಿದ್ದರೆ ತಕ್ಷಣ ಆಸ್ಪತ್ರೆಗೆ ಭೇಟಿ ನೀಡಿ ವೈದ್ಯರನ್ನು ಸಂಪರ್ಕಿಸಬೇಕು. ಒಂದೊಮ್ಮೆ ತುರ್ತು ಕೋವಿಡ್-19 ಚಿಹ್ನೆಗಳು ಮತ್ತು ರೋಗಲಕ್ಷಣಗಳನ್ನು ಹೊಂದಿದ್ದರೆ, ತಕ್ಷಣವೇ ಆರೈಕೆ ಬೇಕಾಗಬಹುದು. ಉಸಿರಾಟದ ತೊಂದರೆ, ನಿರಂತರ ಎದೆ ನೋವು, ಎಚ್ಚರವಾಗಿರಲು ಅಸಮರ್ಥತೆ, ಹೊಸ ಮಾನಸಿಕ ಗೊಂದಲ, ಮುಖ ಅಥವಾ ತುಟಿಗಳು ನೀಲಿಯಾಗುವುದು ತುರ್ತು ಚಿಹ್ನೆಗಳು.**

ಮಧ್ಯಮ ಪ್ರಕರಣಗಳಲ್ಲಿ 7-12 ದಿನಗಳವರೆಗೆ ಮತ್ತು ತೀವ್ರತರವಾದ ಪ್ರಕರಣಗಳಲ್ಲಿ ಎರಡು ವಾರಗಳವರೆಗೆ ಸಾಂಕ್ರಾಮಿಕವಾಗಿದ್ದು, ಸೋಂಕನ್ನು ಇತರರಿಗೆ ಹರಡಬಹುದಾಗಿದೆ.

ಅಮೆರಿಕದ ಸೆಂಟರ್ಸ್ ಫಾರ್ ಡಿಸೀಸ್ ಕಂಟ್ರೋಲ್ ಅಂಡ್ ಪ್ರಿವೆನ್ಷನ್ (Centers for Disease Control and Prevention -CDC) ಮತ್ತು ವಿಶ್ವ ಆರೋಗ್ಯ ಸಂಸ್ಥೆ (WHO) ಸೇರಿದಂತೆ ಸಾರ್ವಜನಿಕ ಆರೋಗ್ಯ ಸಂಸ್ಥೆಗಳು ಈ ಸಾಂಕ್ರಾಮಿಕ ರೋಗವನ್ನು ಮೇಲ್ವಿಚಾರಣೆ ಮಾಡುತ್ತಿವೆ. ತಮ್ಮ ವೆಬ್ ಸೈಟ್‌ಗಳಲ್ಲಿ ಮೇಲಿಂದ ಮೇಲೆ ಈ ರೋಗದ ಕುರಿತು ಹೊಸ ಹೊಸ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡುತ್ತಿರುತ್ತವೆ. ಈ ಗುಂಪುಗಳು ರೋಗವನ್ನು ತಡೆಗಟ್ಟಲು ಮತ್ತು ಚಿಕಿತ್ಸೆ ನೀಡಲು ಮೇಲಿಂದ ಮೇಲೆ ಶಿಫಾರಸ್ಸುಗಳನ್ನು ಸಹ ನೀಡುತ್ತಿರುತ್ತವೆ.

**ರೋಗ ಲಕ್ಷಣಗಳು:**

ಕೋವಿಡ್ 19 ಸೋಂಕಿನ ಲಕ್ಷಣಗಳು ಸಾಮಾನ್ಯವಾಗಿ ವ್ಯಕ್ತಿಯು ಸೋಂಕಿಗೆ ತುತ್ತಾದ 2 ರಿಂದ 14 ದಿನಗಳ ನಂತರ ಕಾಣಿಸಿಕೊಳ್ಳಬಹುದು. ರೋಗಲಕ್ಷಣಗಳು ಸಾಮಾನ್ಯವಾಗಿ ಸೌಮ್ಯದಿಂದ ಮಧ್ಯಮ ಪ್ರಮಾಣದ್ದಾಗಿರುತ್ತವೆ. ಆದರೆ ಕೆಲವು ಜನರಲ್ಲಿ ಈ ಸೋಂಕು ತೀವ್ರ ಅನಾರೋಗ್ಯ ಮತ್ತು ಸಾವಿಗೂ ಕಾರಣವಾಗಬಹುದು.

ಜ್ವರ, ಕೆಮ್ಮು, ದಣಿವು(ಆಯಾಸ), ಉಸಿರಾಟದ ತೊಂದರೆ ಕೋವಿಡ್ 19 ಸೋಂಕಿನ ಸಾಮಾನ್ಯ ಲಕ್ಷಣಗಳು. ಆದರೆ ಕೆಲವು ಜನರಿಗೆ ಸ್ನಾಯು ನೋವು, ಸೆಳೆತ, ಶೀತ, ಗಂಟಲು ಕೆರೆತ, ಗಂಟಲು ನೋವು, ನೆಗಡಿ, ತಲೆನೋವು, ಎದೆ ನೋವು, ಕೆಂಪು ಕಣ್ಣು ( ಕಂಜಕ್ಟೈವಿಟಿಸ್), ನಾಲಿಗೆಯ ರುಚಿ ಅಥವಾ ಮೂಗಿನ ವಾಸನೆಯನ್ನು ಕಳೆದುಕೊಳ್ಳುವಂತಹ ರೋಗ ಲಕ್ಷಣಗಳೂ ಕಾಣಿಸಿಕೊಳ್ಳಬಹುದು.

ಈ ಎಲ್ಲ ರೋಗ ಲಕ್ಷಣಗಳೊಂದಿಗೆ ಚರ್ಮದ ಸಮಸ್ಯೆಗಳು, ವಾಕರಿಕೆ, ವಾಂತಿ ಮತ್ತು ಅತಿಸಾರದಂತಹ ಅತ್ಯಂತ ವಿರಳ ಲಕ್ಷಣಗಳೂ ಕೂಡ ವರದಿಯಾಗಿವೆ. 12 ವರ್ಷದೊಳಗಿನ ಚಿಕ್ಕ ಮಕ್ಕಳಲ್ಲಿ ಈ ಸೋಂಕಿನ ಲಕ್ಷಣಗಳು ಕಂಡು ಬರುವುದಿಲ್ಲ. ಒಂದೊಮ್ಮೆ ಕಂಡು ಬಂದರೂ ಕೂಡ ಅತೀ ಸೌಮ್ಯ ಪ್ರಮಾಣದ ಅಥವಾ ಕಡಿಮೆ ತೀವ್ರತೆಯ ರೋಗಲಕ್ಷಣಗಳು ಕಂಡು ಬರಬಹುದು. ಅಲ್ಲದೇ ಚಿಕ್ಕ ಮಕ್ಕಳಲ್ಲಿ ಈ ಸೋಂಕಿನಿಂದ ಮರಣದ ಪ್ರಮಾಣವೂ ಕೂಡ ತೀರಾ ಕಡಿಮೆ ಇರುತ್ತದೆ.

ಇನ್ನು ವಯಸ್ಕರಲ್ಲಿ ಕೋವಿಡ್-19 ಸೋಂಕು ಸಾಧಾರಣ ರೋಗಲಕ್ಷಣಗಳಿಂದ ಹಿಡಿದು ಮಾರಣಾಂತಿಕ ರೋಗಲಕ್ಷಣಗಳನ್ನೂ ಹೊಂದಿರಬಹುದು.

ಸೋಂಕಿನ ಆರಂಭಿಕ ಹಂತದಲ್ಲಿ ಕೆಲವರು ಅನಾರೋಗ್ಯದ ಯಾವುದೇ ಲಕ್ಷಣಗಳನ್ನು ತೋರಿಸದೇ ಇರಬಹುದು, ಆದರೆ ವೈರಸ್ ಅನ್ನು ಇತರರಿಗೆ ಹರಡಬಹುದು. ಸೌಮ್ಯ ಸಂದರ್ಭಗಳಲ್ಲಿ ಮನೆಯ ಆರೈಕೆ ಮತ್ತು ಸ್ವಯಂ-ಸಂಪರ್ಕ ತಡೆಯುವ (Home isolation) ಕ್ರಮಗಳನ್ನು ಅನುಸರಿಸಿ ಸಂಪೂರ್ಣವಾಗಿ ಚೇತರಿಸಿಕೊಳ್ಳಲು ಮತ್ತು ಇತರರಿಗೆ ವೈರಸ್ ಹರಡದಂತೆ ತಡೆಯಲು ಸಹಕಾರಿಯಾಗುತ್ತದೆ.

ಆದರೆ ಕೆಲವು ಜನರಲ್ಲಿ ರೋಗಲಕ್ಷಣಗಳು ಪ್ರಾರಂಭವಾದ ಒಂದು ವಾರದ ನಂತರ ತೀವ್ರ ಉಸಿರಾಟದ ತೊಂದರೆ ಮತ್ತು ನ್ಯುಮೋನಿಯಾದಂತಹ ಗಂಭೀರ ರೋಗಲಕ್ಷಣಗಳನ್ನು ಅನುಭವಿಸಬಹುದು. ವಯಸ್ಸಾದ ಜನರಲ್ಲಿ ಈ ಸೋಂಕು ಗಂಭೀರವಾಗಿ ಪರಿಣಮಿಸಬಹುದು, ಮತ್ತು ವಯಸ್ಸು ಹೆಚ್ಚಾದಂತೆ ಅಪಾಯವು ಹೆಚ್ಚಾಗುತ್ತದೆ. ಅಲ್ಲದೇ ದೀರ್ಘಕಾಲದ ಕಾಯಿಲೆಗಳಿಂದ ಬಳಲುತ್ತಿರುವ ಜನರೂ ಸಹ ಗಂಭೀರ ಅನಾರೋಗ್ಯದ ಅಪಾಯವನ್ನು ಹೊಂದಿರಬಹುದು. ಇಂತಹ ಸಂದರ್ಭಗಳಲ್ಲಿ ವೈದ್ಯಕೀಯ ಮಧ್ಯಸ್ತಿಕೆ ಬೇಕಾಗಬಹುದು.

ಕೋವಿಡ್-19 ನಿಂದ ಗಂಭೀರ ಕಾಯಿಲೆಯ ಅಪಾಯವನ್ನು ಹೆಚ್ಚಿಸುವ ದೀರ್ಘಕಾಲದ ವೈದ್ಯಕೀಯ ಪರಿಸ್ಥಿತಿಗಳು

- ಹೃದಯ ವೈಫಲ್ಯ, ಪರಿಧಮನಿಯ ಕಾಯಿಲೆ ಅಥವಾ ಹೃದಯ ರಕ್ತನಾಳದಂತಹ ಗಂಭೀರ ಹೃದಯ ಕಾಯಿಲೆಗಳು
- ಕ್ಯಾನ್ಸರ್
- ದೀರ್ಘಕಾಲದ ಶ್ವಾಸಕೋಶದ ಕಾಯಿಲೆ (Chronic obstructive pulmonary disease -COPD)
- ಟೈಪ್ 2 ಡಯಾಬಿಟೀಸ್
- ತೀವ್ರ ಬೊಜ್ಜು
- ದೀರ್ಘಕಾಲದ ಮೂತ್ರಪಿಂಡ ಕಾಯಿಲೆ
- ಸಿಕಲ್ ಸೆಲ್ ಕಾಯಿಲೆ
- ಅಂಗಾಂಗ ಕಸಿಗಳಿಂದ ದುರ್ಬಲಗೊಂಡ ಪ್ರತಿರಕ್ಷಣಾ ವ್ಯವಸ್ಥೆ (Weakened immune system)

ಇತರ ಕೆಲವು ಪರಿಸ್ಥಿತಿಗಳು ಗಂಭೀರ ಅನಾರೋಗ್ಯದ ಅಪಾಯವನ್ನು ಹೆಚ್ಚಿಸಬಹುದು. ಅವುಗಳೆಂದರೆ:

- ಉಬ್ಬಸ
- ಯಕೃತ್ತಿನ ರೋಗ
- ಸಿಸ್ಟಿಕ್ ಫೈಬ್ರೋಸಿಸ್ ನಂತಹ ದೀರ್ಘಕಾಲದ ಶ್ವಾಸಕೋಶದ ಕಾಯಿಲೆಗಳು
- ಮೆದುಳು ಮತ್ತು ನರಮಂಡಲದ ಪರಿಸ್ಥಿತಿಗಳು



For More Job News Visit: www.kpscvaani.com



ಕೆಲವು ಜನರಲ್ಲಿ ರೋಗಲಕ್ಷಣಗಳು ಪ್ರಾರಂಭವಾದ ಒಂದು ವಾರದ ನಂತರ ತೀವ್ರ ಉಸಿರಾಟದ ತೊಂದರೆ ಮತ್ತು ನ್ಯುಮೋನಿಯಾದಂತಹ ಗಂಭೀರ ರೋಗಲಕ್ಷಣಗಳನ್ನು ಅನುಭವಿಸಬಹುದು. ವಯಸ್ಸಾದ ಜನರಲ್ಲಿ ಈ ಸೋಂಕು ಗಂಭೀರವಾಗಿ ಪರಿಣಮಿಸಬಹುದು, ಮತ್ತು ವಯಸ್ಸು ಹೆಚ್ಚಾದಂತೆ ಅಪಾಯವು ಹೆಚ್ಚಾಗುತ್ತದೆ. ಅಲ್ಲದೇ ದೀರ್ಘಕಾಲದ ಕಾಯಿಲೆಗಳಿಂದ ಬಳಲುತ್ತಿರುವ ಜನರೂ ಸಹ ಗಂಭೀರ ಅನಾರೋಗ್ಯದ ಅಪಾಯವನ್ನು ಹೊಂದಿರಬಹುದು.

- ಅಸ್ಥಿಮಜ್ಜೆಯ ಕಸಿ (Bone marrow transplant), ಎಚ್.ಐ.ವಿ ಅಥವಾ ಕೆಲವು ಔಷಧಿಗಳಿಂದ ದುರ್ಬಲಗೊಂಡ ಪ್ರತಿರಕ್ಷಣಾ ವ್ಯವಸ್ಥೆ.
- ಟೈಪ್ 1 ಡಯಾಬಿಟಿಸ್
- ತೀವ್ರ ರಕ್ತದೊತ್ತಡ

**ವೈದ್ಯರನ್ನು ಯಾವಾಗ ಕಾಣಬೇಕು**

ಒಬ್ಬ ವ್ಯಕ್ತಿಯು ಕೋವಿಡ್-19 ರೋಗಲಕ್ಷಣಗಳನ್ನು ಹೊಂದಿದ್ದರೆ, ಅಥವಾ ಖಚಿತ ಪಟ್ಟ ಕೋವಿಡ್ ರೋಗಿಯ ಸಂಪರ್ಕದಲ್ಲಿದ್ದರೆ ತಕ್ಷಣ ಆಸ್ಪತ್ರೆಗೆ ಭೇಟಿ ನೀಡಿ ವೈದ್ಯರನ್ನು ಸಂಪರ್ಕಿಸಬೇಕು. ಒಂದೊಮ್ಮೆ ತುರ್ತು ಕೋವಿಡ್-19 ಚಿಹ್ನೆಗಳು ಮತ್ತು ರೋಗಲಕ್ಷಣಗಳನ್ನು ಹೊಂದಿದ್ದರೆ, ತಕ್ಷಣವೇ ಆರೈಕೆ ಬೇಕಾಗಬಹುದು. ಉಸಿರಾಟದ ತೊಂದರೆ, ನಿರಂತರ ಎದೆ ನೋವು, ಎಚ್ಚರವಾಗಿರಲು ಅಸಮರ್ಥತೆ, ಹೊಸ ಮಾನಸಿಕ ಗೊಂದಲ, ಮುಖ ಅಥವಾ ತುಟಿಗಳು ನೀಲಿಯಾಗುವುದು ತುರ್ತು ಚಿಹ್ನೆಗಳು.

ಒಂದೊಮ್ಮೆ ವ್ಯಕ್ತಿಯು ಕೋವಿಡ್-19 ಚಿಹ್ನೆಗಳು ಅಥವಾ ಲಕ್ಷಣಗಳನ್ನು ಹೊಂದಿದ್ದರೆ ,ವೈದ್ಯರನ್ನು ಅಥವಾ ಆಸ್ಪತ್ರೆಯನ್ನು ಸಂಪರ್ಕಿಸಬೇಕು. ವ್ಯಕ್ತಿಯು ಯಾವುದೇ ಹೃದ್ರೋಗ ಅಥವಾ ಶ್ವಾಸಕೋಶದ ಕಾಯಿಲೆಯಂತಹ ಇತರ ದೀರ್ಘಕಾಲದ ವೈದ್ಯಕೀಯ ಪರಿಸ್ಥಿತಿಗಳನ್ನು ಹೊಂದಿದ್ದರೆ ಅದನ್ನು ವೈದ್ಯರಿಗೆ ತಿಳಿಸಬೇಕು. ಸಾಂಕ್ರಾಮಿಕತೆಯ ಈ ಸಮಯದಲ್ಲಿ ತುರ್ತು ಅಗತ್ಯವಿರುವವರಿಗೆ ಆರೋಗ್ಯ ಸೇವೆಗಳು ಲಭ್ಯವಿದೆಯೇ ಎಂದು ಖಚಿತಪಡಿಸಿಕೊಳ್ಳುವುದು ಬಹಳ ಮುಖ್ಯ.

**ಸೋಂಕು ಹರಡುವ ವಿಧಾನ:**

ಈ ವೈರಸ್ ಜನರಲ್ಲಿ ಅತ್ಯಂತ ಸುಲಭವಾಗಿ ಹರಡುತ್ತದೆ, ಮತ್ತು ಅದು ಯಾವ ರೀತಿ ಹರಡುತ್ತದೆ ಎಂಬುದರ ಕುರಿತು ಹೆಚ್ಚಿನ ಮಾಹಿತಿಗಳನ್ನು ಕಂಡು ಹಿಡಿಯಲು ಸತತವಾಗಿ ಅಧ್ಯಯನಗಳು ನಡೆಯುತ್ತಲೇ ಇವೆ.

ಪ್ರಸ್ತುತ ಲಭ್ಯವಿರುವ ಅಧ್ಯಯನಗಳ ಪ್ರಕಾರ ಕೋವಿಡ್ 19 ಸೋಂಕು ಹರಡುವಿಕೆಗೆ ಕಾರಣವಾಗುವ ಪ್ರಮುಖ ಅಂಶಗಳು:




- ಕೋವಿಡ್-19 ಸೋಂಕು ಹೊಂದಿರುವ ಯಾರೊಂದಿಗಾದರೂ ಅತೀ ಹತ್ತಿರದ (6 ಅಡಿ ಅಥವಾ 2 ಮೀಟರ ಒಳಗೆ) ಸಂಪರ್ಕವನ್ನು ಹೊಂದಿದ್ದರೆ.
- ಸೋಂಕಿರುವ ವ್ಯಕ್ತಿಯು ಆರೋಗ್ಯವಂತ ವ್ಯಕ್ತಿಯ ಸಮೀಪದಲ್ಲಿ ಕೆಮ್ಮುವುದರಿಂದ ಮತ್ತು ಸೀನುವುದರಿಂದ. ಇಂತಹ ವ್ಯಕ್ತಿಯು (ಕೋವಿಡ್ ಪಾಸಿಟಿವ್) ಕೆಮ್ಮಿದಾಗ, ಸೀನಿದಾಗ ಅಥವಾ ಮಾತನಾಡಿದಾಗ ಗಾಳಿಯಲ್ಲಿ ಪಸರಿಸುವ ಉಸಿರಾಟದ ಹನಿಗಳಿಂದ (Respiratory droplets)ಈ ವೈರಸ್ ಹರಡುತ್ತದೆ. ಈ ಹನಿಗಳು ಉಸಿರಾಡುವಾಗ ಮೂಗಿನ ಮೂಲಕ ಹಾಗೂ ಮಾತನಾಡುವಾಗ ಬಾಯಿಯ ಮೂಲಕವೂ ಹರಡಬಹುದು.
- ಒಂದೊಮ್ಮೆ ಒಬ್ಬ ವ್ಯಕ್ತಿಯು ವೈರಸ್‌ನ್ನು ಒಳಗೊಂಡಿರುವ ವಸ್ತು ಅಥವಾ ಮೇಲ್ಮೈಯನ್ನು ಸ್ಪರ್ಶಿಸಿ ನಂತರ ಅವರ ಬಾಯಿ, ಮೂಗು ಅಥವಾ ಕಣ್ಣುಗಳನ್ನು ಮುಟ್ಟಿಕೊಂಡರೂ ಈ ಸೋಂಕು ಹರಡಬಹುದು.



For More Job News Visit: www.kpscvaani.com



## ರೋಗ ನಿರ್ಣಯ (Diagnosis)

ಶೀಘ್ರ ಹಾಗೂ ನಿಖರವಾದ ರೋಗ ನಿರ್ಣಯದಿಂದ ಕೋವಿಡ್-19 ಸೋಂಕಿನಿಂದ ಉಂಟಾಗುವ ಗಂಭೀರ ಪರಿಣಾಮಗಳನ್ನು ತಪ್ಪಿಸಬಹುದು, ಹಾಗೂ ಸೋಂಕಿತರ ಆರೋಗ್ಯದಲ್ಲಿ ಉತ್ತಮ ಫಲಿತಾಂಶಗಳನ್ನು ನಿರೀಕ್ಷಿಸಬಹುದು.

ಒಂದೊಮ್ಮೆ ವ್ಯಕ್ತಿಯು ಸೋಂಕಿತರ ಸಂಪರ್ಕಕ್ಕೆ ಬಂದಿದ್ದರೆ ಅಥವಾ ಸೋಂಕಿನ ಸೌಮ್ಯ ಲಕ್ಷಣಗಳನ್ನು ಹೊಂದಿದ್ದರೆ ಅಂತಹ ವ್ಯಕ್ತಿಯು ಹತ್ತಿರದ ಫೀವರ್ ಕ್ಲಿನಿಕ್ (ಜ್ವರ ತಪಾಸಣಾ ಕೇಂದ್ರ)ಗೆ ಭೇಟಿ ನೀಡಿ ಗಂಟಲು ದ್ರವದ ತಪಾಸಣೆ ಮಾಡಿಸಬೇಕು. ಕೋವಿಡ್-19 ಸೋಂಕಿನ ರೋಗನಿರ್ಣಯಕ್ಕಾಗಿ ಈ ಕೆಳಕಂಡ ಪರೀಕ್ಷೆಗಳನ್ನು ಮಾಡಿಸಲಾಗುವುದು.

### ಪಾಲಿಮರೇಸ್‌ಚೇನ್‌ರಿಆಕ್ಷನ್ (ಪಿ.ಸಿ.ಆರ್) ಟೆಸ್ಟ್: (RT-PCR)

ಇದು ಕೋವಿಡ್-19 ಸೋಂಕಿನ ರೋಗ ನಿರ್ಣಯದಲ್ಲಿ ಪ್ರಮುಖ ಪರೀಕ್ಷೆಯಾಗಿದೆ. ಇದರಲ್ಲಿ ವೈರಸ್‌ನ ಜಿನೋಮ್‌ಗಳನ್ನು ಪತ್ತೆ ಮಾಡಲಾಗುತ್ತದೆ. ಈ ಪರೀಕ್ಷೆಯನ್ನು ಮಾಡಲು ವ್ಯಕ್ತಿಯ ಮೂಗಿನಿಂದ ಅಥವಾ ಗಂಟಲಿನಿಂದ ದ್ರವವನ್ನು ಪಡೆಯಲಾಗುತ್ತದೆ. ಈ ಪರೀಕ್ಷೆಯಲ್ಲಿ ಸೋಂಕು ಪತ್ತೆ ಮಾಡುವ ನಿಖರತೆ (Sensitivity) ಅಧಿಕವಾಗಿರುತ್ತದೆ.

### ರ್ಯಾಪಿಡ್ ಆಂಟಿಜೆನ್ ಟೆಸ್ಟ್:

ಈ ಪರೀಕ್ಷೆಯಲ್ಲಿ ವೈರಸ್‌ನ ಕೆಲವು ಪ್ರೋಟೀನ್‌ಗಳನ್ನು ಪತ್ತೆ ಹಚ್ಚಲಾಗುತ್ತದೆ. ಈ ಪರೀಕ್ಷೆಯನ್ನು ಮಾಡಲು ವ್ಯಕ್ತಿಯ ಮೂಗಿನಿಂದ ಅಥವಾ ಗಂಟಲಿನಿಂದ ದ್ರವವನ್ನು ಪಡೆಯಲಾಗುತ್ತದೆ. ಈ ಪರೀಕ್ಷೆಯು ಕಡಿಮೆ ವೆಚ್ಚದ್ದಾಗಿದ್ದು, ಪರಿಣಾಮಗಳನ್ನು ಶೀಘ್ರವಾಗಿ ನೀಡಬಲ್ಲುದಾದ್ದರಿಂದ ಸಾಮೂಹಿಕವಾಗಿ ಬಹಳಷ್ಟು ಜನರ ಪರೀಕ್ಷೆ ಮಾಡುವ ಸಂದರ್ಭಗಳಲ್ಲಿ ಇದನ್ನು ಬಳಸಲಾಗುತ್ತದೆ (Mass screening). ಆದರೆ ಈ ಟೆಸ್ಟ್‌ನ ನಿಖರತೆ ಪಿ.ಸಿ.ಆರ್ ಗೆ ಹೋಲಿಸಿದರೆ ಕಡಿಮೆ ಇರುತ್ತದೆ.

## ಇತರೆ ಪರೀಕ್ಷೆಗಳು:

### ಎದೆಯ ಸಿ.ಟಿ.ಸ್ಕ್ಯಾನ್ : (HRCT-Chest)

ಈ ಪರೀಕ್ಷೆಯು ಕೋವಿಡ್-19 ರೋಗ ನಿರ್ಣಯಕ್ಕಾಗಿ ಇರುವ ಅತ್ಯಂತ ನಿಖರವಾದ ಪರೀಕ್ಷೆಯಾಗಿದೆ. ಇದರಲ್ಲಿ ವೈರಸ್‌ನಿಂದ ವ್ಯಕ್ತಿಯ ಪುಪ್ಪುಸಗಳಿಗೆ ಎಷ್ಟು ಹಾನಿಯಾಗಿದೆ ಎಂದು ಅತ್ಯಂತ ನಿಖರವಾಗಿ ಹೇಳಬಹುದು. ಇದರಲ್ಲಿ ಸಿ.ಟಿ ಸ್ಕೋರಿಂಗ್ ವ್ಯವಸ್ಥೆ ಬಳಸಲಾಗುತ್ತದೆ. ವ್ಯಕ್ತಿಯ ಎರಡೂ ಪುಪ್ಪುಸಗಳನ್ನೊಳಗೊಂಡು ಒಟ್ಟು 25 ಸಿ.ಟಿ ಅಂಕಗಳನ್ನು ನೀಡಲಾಗುತ್ತದೆ.

ಒಟ್ಟು 25 ಸ್ಕೋರ್‌ನಲ್ಲಿ

- ಸ್ಕೋರ್ 5 ಕ್ಕಿಂತ ಕಡಿಮೆ ಇದ್ದರೆ ಸೌಮ್ಯ ಪ್ರಮಾಣದ ಸೋಂಕು,
- 5 ರಿಂದ 15ರ ಸ್ಕೋರು ಮಧ್ಯಮ ಪ್ರಮಾಣದ ಸೋಂಕು
- ಸ್ಕೋರ್ 15 ಕ್ಕಿಂತ ಹೆಚ್ಚಾಗಿದ್ದರೆ ತೀವ್ರತರದ ಸೋಂಕು ಎಂದು ನಿರ್ಣಯಿಸಲಾಗುತ್ತದೆ.

ಈ ಸೋಂಕಿನ ಚಿಕಿತ್ಸೆಯನ್ನು ನಿರ್ಣಯಿಸಲೂ ಕೂಡ ಸಿ.ಟಿ.ಸ್ಕ್ಯಾನ್ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ.

### ರಕ್ತದ ಪರೀಕ್ಷೆ:

ರಕ್ತ ಪರೀಕ್ಷೆಯಲ್ಲಿ ಸಾಕಷ್ಟು ವಿಧದ ಪರೀಕ್ಷೆಗಳಿದ್ದರೂ ಕೂಡ ಸಿ ರಿಯಾಕ್ಟಿವ್ ಪ್ರೋಟಿನ್ (C Reactive Protein)ಎನ್ನುವ ಪರೀಕ್ಷೆಯು ಅತ್ಯಂತ ಪ್ರಮುಖವಾಗಿದೆ. ಕೋವಿಡ್-19 ಸೋಂಕಿನಲ್ಲಿ ಸಿ ರಿಯಾಕ್ಟಿವ್ ಪ್ರೋಟಿನ್ ಪ್ರಮಾಣದಲ್ಲಿ ಏರಿಕೆಯಾಗಿರುತ್ತದೆ.

ಸಿ.ಟಿ.ಸ್ಕ್ಯಾನ್ ಹಾಗೂ ಸಿ.ರಿಯಾಕ್ಟಿವ್ ಪ್ರೋಟೀನ್ ಈ ಎರಡೂ ಪರೀಕ್ಷೆಗಳು ಕೋವಿಡ್-19 ಸೋಂಕಿನ ರೋಗ ನಿರ್ಣಯದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತವೆ. ಹಾಗೂ



For More Job News Visit: www.kpscvaani.com






ಅತ್ಯಂತ ಶೀಘ್ರದಲ್ಲಿ ಸೋಂಕನ್ನು ಪತ್ತೆ ಮಾಡಲು ಸಹಕಾರಿಯಾಗಿವೆ. ಒಂದೊಮ್ಮೆ ಗಂಟಲು ದ್ರವದ ಮಾದರಿಯಲ್ಲಿ ಟೆಸ್ಟ್ ನೆಗೆಟಿವ್ ಬಂದರೂ ಕೂಡ ರೋಗ ಲಕ್ಷಣಗಳಿದ್ದರೆ ಮೇಲಿನ ಎರಡೂ ಟೆಸ್ಟ್‌ಗಳು ರೋಗ ನಿರ್ಣಯದಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

**ಎದೆಯ ಕ್ಷ-ಕಿರಣ (Chest X-ray)**

ರೋಗಿಗೆ ಚಿಕಿತ್ಸೆ ನೀಡುತ್ತಿರುವಾಗ ರೋಗಿಯ ಆರೋಗ್ಯವು ಗಂಭೀರವಾಗಿದ್ದರೆ ಅಂತಹ ರೋಗಿಗಳನ್ನು ಆಗಾಗ್ಗೆ ಎದೆಯ ಕ್ಷ-ಕಿರಣ ಪರೀಕ್ಷೆಗೆ ಒಳಪಡಿಸುವುದರ ಮೂಲಕ ಆರೋಗ್ಯದಲ್ಲಿ ಚೇತರಿಕೆಯಾಗಿದೆಯೇ? ಇಲ್ಲವೇ? ಎಂದು ತಿಳಿದುಕೊಳ್ಳಬಹುದು.

**ಚಿಕಿತ್ಸೆ:**

ಸೌಮ್ಯ ಪ್ರಮಾಣದ ಲಕ್ಷಣಗಳಿರುವ ಸೋಂಕಿತರು ಮನೆಯಲ್ಲಿಯೇ ಪ್ರತ್ಯೇಕವಾಗಿದ್ದು ಚಿಕಿತ್ಸೆ ಪಡೆಯಬಹುದು.

**ವಿಶ್ರಾಂತಿ:**

ಕೋವಿಡ್ -19 ಸೋಂಕಿತರು ಸಾಕಷ್ಟು ವಿಶ್ರಾಂತಿ ಪಡೆಯುವುದರಿಂದ ವೇಗವಾಗಿ ಚೇತರಿಕೆ ಕಾಣಬಹುದು. ಅನಗತ್ಯವಾಗಿ ಎಲ್ಲೂ ಓಡಾಡದೇ ವಿಶ್ರಾಂತಿ ಪಡೆಯುವುದೇ ಇದಕ್ಕೆ ಮದ್ದು.

**ಮನೆಯಲ್ಲೇ ಇರಿ:**

ಸೋಂಕಿತರು ಸಾರ್ವಜನಿಕ ಸ್ಥಳಗಳಿಗೆ ಹೋಗದೇ ಮನೆಯಲ್ಲಿಯೇ ಇರುವುದರಿಂದ ಈ ಸೋಂಕಿನಿಂದ ಶೀಘ್ರ ಚೇತರಿಸಿಕೊಳ್ಳಬಹುದು ಹಾಗೂ ಈ ಸೋಂಕನ್ನು ಇತರರಿಗೆ ಹರಡುವುದನ್ನು ತಪ್ಪಿಸಬಹುದು.

**ದ್ರವ ಪದಾರ್ಥಗಳನ್ನು ಯಥೇಚ್ಛವಾಗಿ ಸೇವಿಸಿ:**

ವ್ಯಕ್ತಿಯು ಸೋಂಕಿನಿಂದ ಬಳಲುತ್ತಿರುವಾಗ ಹೆಚ್ಚಿನ ಪ್ರಮಾಣದಲ್ಲಿ ದೇಹದಲ್ಲಿನ ನೀರನ್ನು ಕಳೆದುಕೊಳ್ಳುತ್ತಾರೆ. ನಿರ್ಜಲೀಕರಣವು ರೋಗಲಕ್ಷಣಗಳನ್ನು ಇನ್ನಷ್ಟು ಹದಗೆಡಿಸುತ್ತದೆ, ಮತ್ತು ಇತರ ಆರೋಗ್ಯ ಸಮಸ್ಯೆಗಳನ್ನು ಉಂಟು ಮಾಡುತ್ತದೆ. ಆದ್ದರಿಂದ ನೀರು ಅಥವಾ ಇತರ ದ್ರವ ಪದಾರ್ಥಗಳನ್ನು ಯಥೇಚ್ಛವಾಗಿ ಸೇವಿಸಬೇಕು.

**ನಿಗಾ ವಹಿಸಿ:**

ರೋಗಲಕ್ಷಣಗಳ ಮೇಲೆ ತೀವ್ರ ನಿಗಾ ಇಡಬೇಕು. ಲಕ್ಷಣಗಳು ಉಲ್ಬಣಗೊಂಡರೆ ವೈದ್ಯರನ್ನು ತಕ್ಷಣ ಸಂಪರ್ಕಿಸಬೇಕು. ಇತರ ಜನರಿಗೆ ಅದರಲ್ಲೂ ವಿಶೇಷವಾಗಿ 65 ವರ್ಷಕ್ಕಿಂತ ಮೇಲ್ಪಟ್ಟವರು ಹಾಗೂ ಇತರ ಆರೋಗ್ಯ ಸಮಸ್ಯೆಗಳನ್ನು ಹೊಂದಿರುವವರಿಗೆ ಸೋಂಕು ತಗುಲದಂತೆ ಕಾಳಜಿ ವಹಿಸುವುದು ಬಹಳ ಮುಖ್ಯ.

**ಮಧ್ಯಮ ಹಾಗೂ ತೀವ್ರತರದ ಲಕ್ಷಣಗಳಿರುವ ಸೋಂಕಿತರಿಗೆ:**

ಕೋವಿಡ್-19 ಒಂದು ಹೊಸ ರೋಗವಾಗಿದ್ದು, ಇದುವರೆಗೆ ಯಾವುದೇ ನಿಖರವಾದ ಔಷಧ ಅಥವಾ ಲಸಿಕೆ ಲಭ್ಯವಿಲ್ಲ. ವಿಶ್ವದಾದ್ಯಂತ ಈ ಸೋಂಕಿಗೆ ಔಷಧಿ ಹಾಗೂ ಲಸಿಕೆ ಕಂಡು ಹಿಡಿಯಲು ಸಾಕಷ್ಟು ಪ್ರಯತ್ನಗಳು ನಡೆಯುತ್ತಿವೆ. ಇತರ ವೈರಸ್‌ನಿಂದ ಉಂಟಾಗುವ ರೋಗಗಳಿಗೆ ನೀಡಲಾಗುವ ಆಂಟೀವೈರಲ್ ಔಷಧಗಳನ್ನು ಈ ಸೋಂಕಿನ ಚಿಕಿತ್ಸೆಗಾಗಿ ಬಳಸಲಾಗುತ್ತಿದೆ. ಭಾರತದಲ್ಲಿ ಕೋವಿಡ್-19 ಸೋಂಕಿತರ ಚಿಕಿತ್ಸೆಗಾಗಿ ಸರ್ಕಾರದಿಂದ ಈ ಕೆಳಕಂಡ ಔಷಧಿಗಳನ್ನು ನೀಡಲಾಗಿದೆ.

**ಹೈಡ್ರಾಕ್ಸಿಕ್ಲೋರೋಕ್ವಿನ್**
(Hydroxychloroquine Phosphate-HCQ):

ಇದು ಮಲೇರಿಯಾ ಚಿಕಿತ್ಸೆಗಾಗಿ ಭಾರತದಲ್ಲಿ ಅಭಿವೃದ್ಧಿಪಡಿಸಿದ ಔಷಧಿ. ಈ ಔಷಧವು ಕೊರೊನಾ ವೈರಸ್ ಮಾನವನ ಜೀವಕೋಶಗಳ ಮೇಲೆ ಮೆತ್ತಿಕೊಳ್ಳುವುದನ್ನು ತಡೆಯುತ್ತದೆ. ಆದ್ದರಿಂದ ಇದನ್ನು ಮುಂಜಾಗ್ರತಾ ಕ್ರಮವಾಗಿ ಆರೋಗ್ಯ ಸಿಬ್ಬಂದಿಗಳಿಗೆ ಹಾಗೂ ಇತರರಿಗೆ ನೀಡಲಾಗುತ್ತದೆ.





For More Job News Visit: www.kpscvaani.com



**ಲಸಿಕೆ:**

ಕೋವಿಡ್-19 ಎಂಬ ಸಾಂಕ್ರಾಮಿಕ ರೋಗವನ್ನು ಕೊನೆಗಾಣಿಸಲು ಲಸಿಕೆಯನ್ನು ಅಭಿವೃದ್ಧಿಪಡಿಸುವುದು ಇಂದಿನ ತುರ್ತು ಅಗತ್ಯತೆಯಾಗಿದೆ. ಈ ನಿಟ್ಟಿನಲ್ಲಿ ಹಲವಾರು ದೇಶಗಳು ಹಗಲು-ರಾತ್ರಿ ಶ್ರಮಿಸುತ್ತಿವೆಯಾದರೂ ಇದುವರೆಗೂ ಲಸಿಕೆ ಕಂಡು ಹಿಡಿಯುವುದು ಸಾಧ್ಯವಾಗಿಲ್ಲ. ಭಾರತವೂ ಕೂಡ ಲಸಿಕೆ ಅಭಿವೃದ್ಧಿ ಪಡಿಸುವತ್ತ ದಾಪುಗಾಲು ಹಾಕುತ್ತಿದ್ದು, ಹಲವಾರು ಕಂಪನಿಗಳು ಈ ನಿಟ್ಟಿನಲ್ಲಿ ಮೊದಲ ಹಂತದ ಯಶಸ್ಸನ್ನು ಕಂಡಿವೆ. ಆರೋಗ್ಯ ತಜ್ಞರು ಹೇಳುವಂತೆ 2021ರ ಮಧ್ಯದವರೆಗೆ ಲಸಿಕೆಯನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗಬಹುದು.

**ಕೋವಿಫೋರ್ (Covifor) :**

ಇದರ ಜನರಿಕ್ ಹೆಸರು "ರೆಮೆಡೆಸಿವಿರ್". ವಯಸ್ಕರು ಮತ್ತು ಮಕ್ಕಳಲ್ಲಿ ಕೋವಿಡ್-19ನ ಸಂಶಯಾಸ್ಪದ ಅಥವಾ ಖಚಿತಪಟ್ಟ ಪ್ರಕರಣಗಳ ಚಿಕಿತ್ಸೆಗಾಗಿ ಈ ಔಷಧಿಯನ್ನು ಬಳಸಲಾಗುತ್ತದೆ. ಇದು ವೈರಸ್‌ನ ಸಂಖ್ಯೆಯಲ್ಲಿ ವೃದ್ಧಿಯನ್ನು (Viral replication) ತಡೆಯುತ್ತದೆ. ಈ ಔಷಧವನ್ನು ಸರಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ನೀಡಲಾಗುತ್ತದೆ. ಪ್ರಾಯೋಗಿಕ ಹಂತದಲ್ಲಿದ್ದರೂ ಕೂಡ ಈ ಔಷಧ ಬಳಸುವುದರಿಂದ ಉತ್ತಮ ಫಲಿತಾಂಶಗಳು ಕಂಡು ಬಂದಿವೆ.

**ಮೀಥೈಲ್ ಪ್ರೆಡ್ನಿಸೋಲೋನ್ :**

ಮಧ್ಯಮ ಹಾಗೂ ತೀವ್ರತರವಾದ ಪ್ರಕರಣಗಳನ್ನು ನಿಭಾಯಿಸಲು ಈ ಔಷಧವನ್ನು ಬಳಸಲಾಗುತ್ತದೆ. ಇದು ಸೋಂಕಿನಿಂದ ಉಂಟಾಗುವ ಒಟ್ಟಾರೆ ಮರಣ ಪ್ರಮಾಣವನ್ನು ಕಡಿಮೆ ಮಾಡುತ್ತದೆ. ಮತ್ತು ಚಿಕಿತ್ಸೆಯ ಅವಿಭಾಜ್ಯ ಅಂಗವಾಗಿದೆ. ಈ ಔಷಧವು ರೋಗಲಕ್ಷಣಗಳ ತೀವ್ರತೆಯನ್ನೂ ಕಡಿಮೆ ಮಾಡುತ್ತದೆ.

**ಡೆಕ್ಸಾಮಿಥ್ಯಾಸೋನ್:**

ಇದೂ ಕೂಡ ಮೀಥೈಲ್ ಪ್ರೆಡ್ನಿಸೋಲೋನ್‌ನಂತೆಯೇ ಒಂದೇ ಗುಂಪಿಗೆ ಸೇರಿದೆ. ಇದು ಅಗ್ಗದ ದರದಲ್ಲಿ ಲಭ್ಯವಿರುವುದರಿಂದ ಹಾಗೂ ಪರಿಣಾಮಕಾರಿಯಾಗಿರುವುದರಿಂದ ಇದರ ಪ್ರಯೋಗವನ್ನೂ ಕೂಡ ಬೆಂಬಲಿಸಲಾಗುತ್ತಿದೆ.

**ಆಮ್ಲಜನಕ (ಪ್ರಾಣವಾಯು ಚಿಕಿತ್ಸೆ) :**

ಮಧ್ಯಮ ಪ್ರಮಾಣದ ಹಾಗೂ ತೀವ್ರತರದ ರೋಗಲಕ್ಷಣಗಳುಳ್ಳ ಸೋಂಕಿತರಿಗೆ ಆಸ್ಪತ್ರೆಗೆ ದಾಖಲು ಮಾಡಿ ಅವರಿಗೆ ಆಮ್ಲಜನಕದ ಸಹಾಯದಿಂದ ಚಿಕಿತ್ಸೆ ನೀಡಬೇಕಾಗುತ್ತದೆ. ಸೋಂಕಿತರ ರಕ್ತದಲ್ಲಿನ ಆಮ್ಲಜನಕದ ಪ್ರಮಾಣವನ್ನು (Spo2) ಆಧರಿಸಿ ವೈದ್ಯರು ಆಮ್ಲಜನಕ ನೀಡುವ ಪ್ರಮಾಣವನ್ನು ನಿಗದಿಪಡಿಸುತ್ತಾರೆ. ಮಧ್ಯಮ ಪ್ರಮಾಣದ ಲಕ್ಷಣಗಳುಳ್ಳ ಸೋಂಕಿತರಿಗೆ ಮಾಸ್ಕ ಮೂಲಕ ಹಾಗೂ ತೀವ್ರತರದ ಲಕ್ಷಣಗಳುಳ್ಳ ಸೋಂಕಿತರಿಗೆ ವೆಂಟೀಲೇಟರ್ ಮೂಲಕ ಅಥವಾ ಹೈ ಫ್ಲೋ ನೇಸಲ್ ಆಕ್ಸಿಜನ್‌ಥೆರಪಿ (HFNO) ಮೂಲಕ ಚಿಕಿತ್ಸೆ ನೀಡಲಾಗುತ್ತದೆ.

**ತೊಡಕುಗಳು (Complications)**

ಕೋವಿಡ್-19 ಹೊಂದಿರುವ ಹೆಚ್ಚಿನ ಜನರು ಸಾಧಾರಣದಿಂದ ಮಧ್ಯಮ ಪ್ರಮಾಣದ ರೋಗಲಕ್ಷಣಗಳನ್ನು ಹೊಂದಿದ್ದರೂ ಕೂಡ ಕೆಲವು ಜನರಲ್ಲಿ ಈ ರೋಗವು ತೀವ್ರವಾದ ತೊಡಕುಗಳಿಗೆ ಕಾರಣವಾಗಬಹುದು, ಮತ್ತು ಕೆಲವು ಜನರಲ್ಲಿ ಸಾವಿಗೂ ಕಾರಣವಾಗಬಹುದು. ವಯಸ್ಸಾದ ಜನರು (ವೃದ್ಧರು) ಅಥವಾ ದೀರ್ಘಕಾಲದ ಕಾಯಿಲೆಗಳಿಂದ ಬಳಲುತ್ತಿರುವ ಜನರು ಕೋವಿಡ್-19 ನಿಂದಾಗಿ ತೀವ್ರ ಅನಾರೋಗ್ಯಕ್ಕೆ ಒಳಗಾಗುವ ಅಪಾಯವಿರುತ್ತದೆ.

ಕೋವಿಡ್-19 ನಿಂದ ಉಂಟಾಗುವ ತೊಡಕುಗಳಲ್ಲಿ ಪ್ರಮುಖವಾದವುಗಳೆಂದರೆ,

- ನ್ಯುಮೋನಿಯಾ ಮತ್ತು ಉಸಿರಾಟದ ತೊಂದರೆ
- ಬಹು ಅಂಗಾಂಗ ವೈಫಲ್ಯ
- ಹೃದಯ ಸಮಸ್ಯೆಗಳು

**ತೀವ್ರ ಉಸಿರಾಟದ ತೊಂದರೆಯಿಂದ ಕೂಡಿದ ರೋಗಗಳ ಸಮುಚ್ಚಯ (acute respiratory distress syndrome):**

ಇದರಲ್ಲಿ ಶ್ವಾಸಕೋಶಗಳಿಗೆ ತೀವ್ರ ಪ್ರಮಾಣದ ಹಾನಿಯುಂಟಾಗುವುದರಿಂದ ಶರೀರದ ವಿವಿಧ ಅಂಗಗಳಿಗೆ ಪೂರೈಕೆಯಾಗುವ ರಕ್ತದಲ್ಲಿ ಆಮ್ಲಜನಕದ ಪ್ರಮಾಣದಲ್ಲಿ ಕೊರತೆ ಯುಂಟಾಗುತ್ತದೆ.

- ರಕ್ತ ಹೆಪ್ಪುಗಟ್ಟುವಿಕೆ: ಈ ಸೋಂಕಿನಲ್ಲಿ ರಕ್ತವುಗಟ್ಟಿಯಾಗುವುದರಿಂದ ರಕ್ತ ಹೆಪ್ಪುಗಟ್ಟುವ ಸಾಧ್ಯತೆ ಹೆಚ್ಚಾಗಿರುತ್ತದೆ. ಇದರಿಂದಾಗಿಯೇ ಈ ಸೋಂಕಿನಲ್ಲಿ ಹೃದಯ ಸ್ತಂಭನ ಅಥವಾ ಹಾರ್ಟ್‌ಅಟ್ಯಾಕ್ (ಹೃದಯದ ರಕ್ತನಾಳಗಳಲ್ಲಿ ರಕ್ತ ಹೆಪ್ಪುಗಟ್ಟಿದರೆ), ಪಾರ್ಶ್ವವಾಯು ಅಥವಾ ಲಕ್ವಾ (ಮೆದುಳಿನಲ್ಲಿ ರಕ್ತ ಹೆಪ್ಪುಗಟ್ಟಿದರೆ) ಉಂಟಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಹೀಗಾಗಿಯೇ ಒಮ್ಮಿಂದೊಮ್ಮೆಲೆ ಕೋವಿಡ್ ಸೋಂಕಿತರು ಸಾವನ್ನಪ್ಪುತ್ತಿದ್ದಾರೆ.
- ತೀವ್ರ ಮೂತ್ರಪಿಂಡದ ಗಾಯ
- ಹೆಚ್ಚುವರಿ ವೈರಾಣು ಮತ್ತು ಬ್ಯಾಕ್ಟೀರಿಯಾದ ಸೋಂಕುಗಳು



For More Job News Visit: www.kpscvaani.com

**ತಡೆಗಟ್ಟುವಿಕೆ :**

ಕೋವಿಡ್ 19 ಸೋಂಕನ್ನು ತಡೆಗಟ್ಟಲು ಯಾವುದೇ ಲಸಿಕೆ ಲಭ್ಯವಿಲ್ಲದಿದ್ದರೂ, ಸೋಂಕಿನ ಅಪಾಯವನ್ನು ಕಡಿಮೆ ಮಾಡಲು ಅನೇಕ ಕ್ರಮಗಳನ್ನು ತೆಗೆದುಕೊಳ್ಳಬಹುದು. ಕೋವಿಡ್ 19 ಸೋಂಕನ್ನು ತಪ್ಪಿಸಲು ವಿಶ್ವ ಆರೋಗ್ಯ ಸಂಸ್ಥೆ (WHO) ಮತ್ತು ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಇರುವ ಸಂಸ್ಥೆ (CDC)ಯು ಈ ಮುನ್ನೆಚ್ಚರಿಕೆಯ ಕ್ರಮಗಳನ್ನು ಅನುಸರಿಸಲು ಶಿಫಾರಸು ಮಾಡುತ್ತದೆ.

- ಬೃಹತ್ ಸಭೆ-ಸಮಾರಂಭಗಳನ್ನು ಹಾಗೂ ಜನಸಂದಣಿ ಉಂಟಾಗುವ ಸಂದರ್ಭಗಳನ್ನು ತಪ್ಪಿಸುವುದು.
- ಅನಾರೋಗ್ಯ ಅಥವಾ ರೋಗಲಕ್ಷಣಗಳನ್ನು ಹೊಂದಿರುವ ಯಾರೊಂದಿಗೂ ನಿಕಟ ಸಂಪರ್ಕ (6 ಅಡಿ ಅಥವಾ2 ಮೀಟರ್ ಒಳಗೆ) ವನ್ನು ತಪ್ಪಿಸಿ.
- ಸಾಧ್ಯವಾದಷ್ಟು ಮನೆಯಲ್ಲೇ ಇರಬೇಕು ಮತ್ತು ಪರಸ್ಪರರ ನಡುವೆ( 6 ಅಡಿ ಅಥವಾ 2 ಮೀಟರ್ ಒಳಗೆ) ಅಂತರವನ್ನು ಕಾಪಾಡಿಕೊಳ್ಳಬೇಕು, ಅದರಲ್ಲೂ ಗಂಭೀರ ಅನಾರೋಗ್ಯದ ಅಪಾಯವಿದ್ದರಂತೂ ಭೌತಿಕ ಅಂತರವನ್ನು ಕಡ್ಡಾಯವಾಗಿ ಪಾಲಿಸಲೇಬೇಕು.
- ಕೆಲವರಿಗೆ ರೋಗಲಕ್ಷಣಗಳು ಇಲ್ಲದಿದ್ದರೂ ಸಹ ಇತರರಿಗೆ ಸೋಂಕನ್ನು ಹರಡಬಹುದು.
- ಕನಿಷ್ಠ 20 ಸೆಕೆಂಡುಗಳ ಕಾಲ ಕೈಗಳನ್ನು ಸಾಬೂನು ಮತ್ತು ನೀರಿನಿಂದ ತೊಳೆಯಬೇಕು. ಅಥವಾ ಕನಿಷ್ಠ 60% ಆಲ್ಕೋಹಾಲ್ ಹೊಂದಿರುವ ಹ್ಯಾಂಡ್ ಸ್ಯಾನಿಟೈಸರ್ ಬಳಸಬೇಕು.
- ಕಿರಾಣಿ ಅಂಗಡಿಯಂತಹ ಜನಸಂದಣಿ ಇರುವ ಸಾರ್ವಜನಿಕ ಸ್ಥಳಗಳಲ್ಲಿ ಮುಖವನ್ನು ಬಟ್ಟೆಯಿಂದ ತಯಾರಿಸಿದ ಮಾಸ್ಕ್‌ನಿಂದ ಮುಚ್ಚಿಕೊಳ್ಳಬೇಕು. ಇಂತಹ ಸ್ಥಳಗಳಲ್ಲಿ ಸಾರ್ವಜನಿಕರೊಂದಿಗೆ ನಿಕಟ ಸಂಪರ್ಕವನ್ನು ತಪ್ಪಿಸುವುದು ಕಷ್ಟಸಾಧ್ಯವಾಗಿರುವುದರಿಂದ ಕಡ್ಡಾಯವಾಗಿ ಮಾಸ್ಕ್ ಬಳಸಬೇಕು. 15 ನಿಮಿಷಕ್ಕಿಂತ ಹೆಚ್ಚಿನ ಅವಧಿಯವರೆಗೆ ಸಾರ್ವಜನಿಕರೊಂದಿಗೆ ನಿಕಟ ಸಂಪರ್ಕ ಹೊಂದುವುದನ್ನು ತಪ್ಪಿಸಬೇಕು.
- ಕೆಮ್ಮುವಾಗ ಅಥವಾ ಸೀನುವಾಗ ಮೊಣಕೈ ಅಥವಾ ಟಿಶ್ಯು ಪೇಪರನಿಂದ ಬಾಯಿ ಮತ್ತು ಮೂಗನ್ನು ಮುಚ್ಚಿಕೊಳ್ಳಬೇಕು. ಬಳಸಿದ ಟಿಶ್ಯುಪೇಪರನ್ನು ಎಸೆಯಬೇಕು. ತಕ್ಷಣ ಕೈಗಳನ್ನು ತೊಳೆಯಬೇಕು.
- ಕೈ ತೊಳೆಯದೇ ಕಣ್ಣು, ಮೂಗು ಮತ್ತು ಬಾಯಿಯನ್ನು ಸ್ಪರ್ಶಿಸುವುದನ್ನು ತಪ್ಪಿಸಬೇಕು.
- ಒಂದೊಮ್ಮೆ ನೀವು ಅನಾರೋಗ್ಯದಿಂದ ಬಳಲುತ್ತಿದ್ದರೆ ಆಹಾರ ಪದಾರ್ಥಗಳನ್ನು, ಕನ್ನಡಕ, ಟವೆಲ್, ಹಾಸಿಗೆ ಮತ್ತು ಇತರ ಮನೆಯ ವಸ್ತುಗಳನ್ನು ಹಂಚಿಕೊಳ್ಳುವುದನ್ನು ತಪ್ಪಿಸಬೇಕು.
- ಪ್ರತಿದಿನ ಡೋರ್ ಹ್ಯಾಂಡಲ್‌ಗಳನ್ನು, ಲೈಟ್ ಸ್ವಿಚ್‌ಗಳನ್ನು, ಎಲೆಕ್ಟ್ರಾನಿಕ್ ಉಪಕರಣಗಳು, ಕೌಂಟರ್‌ಗಳಂತಹ ಮೇಲ್ಮೈಗಳನ್ನು ಸ್ವಚ್ಛಗೊಳಿಸಬೇಕು ಮತ್ತು ಸೋಂಕು ರಹಿತಗೊಳಿಸಬೇಕು.
- ಒಂದೊಮ್ಮೆ ಅನಾರೋಗ್ಯದಿಂದ ಬಳಲುತ್ತಿದ್ದರೆ ಸೂಕ್ತ ವೈದ್ಯಕೀಯ ಆರೈಕೆಯನ್ನು ಪಡೆಯದ ಹೊರತು ಕೆಲಸ ಮಾಡುವ ಜಾಗ ಮತ್ತು ಸಾರ್ವಜನಿಕ ಪ್ರದೇಶಗಳಿಂದ ಅಂತರವನ್ನು ಕಾಯ್ದುಕೊಳ್ಳಬೇಕು, ಅಂದರೆ ಸಾಧ್ಯವಾದಷ್ಟು ಮನೆಯಲ್ಲೇ ಇರಬೇಕು.
- ಒಂದೊಮ್ಮೆ ದೀರ್ಘಕಾಲದ ಕಾಯಿಲೆಯಿಂದ ಬಳಲುತ್ತಿದ್ದರೆ ಮತ್ತು ಗಂಭೀರ ಕಾಯಿಲೆಯ ಹೆಚ್ಚಿನ ಅಪಾಯವನ್ನು ಹೊಂದಿದ್ದರೆ ಈ ಗಂಡಾಂತರದಿಂದ ರಕ್ಷಿಸಿಕೊಳ್ಳಲು ಇತರ ಮಾರ್ಗಗಳ ಬಗ್ಗೆ ವೈದ್ಯರನ್ನು ಸಂಪರ್ಕಿಸಬೇಕು.

**ಪ್ರಯಾಣ:**

ಒಂದೊಮ್ಮೆ ನೀವು ಪ್ರಯಾಣ ಕೈಗೊಳ್ಳಲು ಯೋಜಿಸಿದ್ದರೆ, ಮೊದಲು ಸಿ.ಡಿ.ಸಿ ಮತ್ತು ವಿಶ್ವ ಆರೋಗ್ಯ ಸಂಸ್ಥೆಯ ವೆಬ್ ಸೈಟ್‌ಗಳನ್ನು ಪರಿಶೀಲಿಸಿ, ಸೂಕ್ತ ಮಾರ್ಗದರ್ಶನ ಹಾಗೂ ಸಲಹೆಗಳನ್ನು ಪಡೆಯಬೇಕು. ನೀವು ಪ್ರಯಾಣಿಸಲು ಉದ್ದೇಶಿಸಿರುವ ಸ್ಥಳದ ಆರೋಗ್ಯ ಸಲಹೆಗಾರರನ್ನೂ ಸಹ ಸಂಪರ್ಕಿಸಿ ಸೂಕ್ತ ಸಲಹೆಗಳನ್ನು ಪಡೆದುಕೊಳ್ಳಿ. ಒಂದೊಮ್ಮೆ ನೀವು ಯಾವುದಾದರೂ ದೀರ್ಘಕಾಯಿಲೆಗಳಿಂದ ಬಳಲುತ್ತಿದ್ದರೆ ಮೊದಲೇ ನಿಮ್ಮ ವೈದ್ಯರನ್ನು ಸಂಪರ್ಕಿಸಿ ಸೂಕ್ತ ಸಲಹೆ-ಸೂಚನೆಗಳನ್ನು ಪಡೆದುಕೊಳ್ಳಿ.

**ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳು:**

ಈ ಸೋಂಕಿನಿಂದಾಗಿ ಜಾಗತಿಕ ಸಾಮಾಜಿಕ ಮತ್ತು ಆರ್ಥಿಕ ಹಿಂಜರಿತ ಉಂಟಾಗಿದೆ. ಸುಮಾರು 100 ದಶ ಲಕ್ಷ ಜನರು ತೀವ್ರ ಬಡತನಕ್ಕೆ ಸಿಲುಕಿದ್ದಾರೆ. ಈ ಸೋಂಕು ಜಗತ್ತಿನಾದ್ಯಂತ ಕ್ರೀಡಾ, ಧಾರ್ಮಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮುಂದೂಡಲು ಅಥವಾ ರದ್ದುಗೊಳಿಸಲು ಕಾರಣವಾಗಿದೆ. ಶಿಕ್ಷಣ ಸಂಸ್ಥೆಗಳು ಆನ್‌ಲೈನ್ ಶಿಕ್ಷಣಕ್ಕೆ ಮುಂದಾಗಿವೆ. ಲಾಕ್‌ಡೌನ್‌ನಿಂದಾಗಿ ವ್ಯಾಪಾರ-ವಹಿವಾಟುಗಳು, ಉದ್ಯಮಗಳು ಸ್ಥಗಿತಗೊಂಡಿದ್ದರಿಂದ ನಿರುದ್ಯೋಗ ಸಮಸ್ಯೆಯೂ ತಲೆದೋರಿದೆ. ಸಭೆ-ಸಮಾರಂಭಗಳನ್ನು ನಡೆಸಲು ತಡೆಯೊಡ್ಡಿರುವುದರಿಂದ ಸಂಬಂಧಗಳು ದೂರವಾಗಿವೆ.

ಒಟ್ಟಾರೆ ಹೇಳುವುದಾದರೆ ಕೋವಿಡ್-19 ಸೋಂಕು ಬಂದ ನಂತರ ಚಿಕಿತ್ಸೆಗಾಗಿ ಪರದಾಡುವುದಕ್ಕಿಂತ ಈ ಸೋಂಕು ಬರದಂತೆ ಮುನ್ನೆಚ್ಚರಿಕೆಯ ಕ್ರಮಗಳನ್ನು ಅನುಸರಿಸುವುದು ಸೂಕ್ತ. ಇದರಿಂದ ರಕ್ಷಿಸಿಕೊಳ್ಳಲು ಇರುವ ಒಂದೇ ಒಂದು ಮಾರ್ಗವೆಂದರೆ ಅದು ಕಡ್ಡಾಯವಾಗಿ ಮಾಸ್ಕ್ ಧರಿಸುವುದು, ಸಾಮಾಜಿಕ (ಭೌತಿಕ) ಅಂತರ ಕಾಯ್ದುಕೊಳ್ಳುವುದು ಹಾಗೂ ಮೇಲಿಂದ ಮೇಲೆ ಸಾಬೂನು ಹಾಗೂ ನೀರಿನಿಂದ ಕೈ ತೊಳೆದುಕೊಳ್ಳುವುದು. ಈ ಮೂರು ಸೂತ್ರಗಳನ್ನು ಚಾಚೂ ತಪ್ಪದೇ ಪಾಲಿಸಿದರೆ ಕೊರೊನಾ ಸೋಂಕನ್ನು ಸುಲಭವಾಗಿ ಗೆಲ್ಲಬಹುದು.



For More Job News Visit: www.kpscvaani.com



# ಸುರಕ್ಷಿತ ಆಚರಣೆಯಾಗಲಿ ದೀಪಾವಳಿ

**ಕೋವಿಡ್-19 ಹಿನ್ನೆಲೆಯಲ್ಲಿ ಈ ಬಾರಿ ದೀಪಾವಳಿಯನ್ನು ಸುರಕ್ಷಿತವಾಗಿ ಮತ್ತು ಪರಿಸರ ಸ್ನೇಹಿಯಾಗಿ, ಎಲ್ಲರಿಗೂ ಮಾದರಿಯಾಗುವಂತೆ ಆಚರಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.**

ಮುನಿರಾಜ.ಎಂ

ಅಜ್ಞಾನವೆಂಬ ಕತ್ತಲನ್ನು ಹೊಡೆದೋಡಿಸಿ, ಜ್ಞಾನವೆಂಬ ಬೆಳಕನ್ನು ಬೆಳಗಿಸುವುದೇ ದೀಪಾವಳಿ ಹಬ್ಬ ಆಚರಣೆಯ ಉದ್ದೇಶವಾಗಿದೆ. ದೀಪಾವಳಿಯನ್ನು ದೇಶದಾದ್ಯಂತ ಆಚರಿಸಲಾಗುವುದಾದರೂ ಕೂಡ ಬೇರೆ ಬೇರೆ ಪ್ರಾಂತ್ಯಗಳಲ್ಲಿ ದೀಪಾವಳಿ ಹಬ್ಬ ಆಚರಣೆಯ ವಿಧಾನದಲ್ಲಿ ವ್ಯತ್ಯಾಸಗಳಿರುತ್ತವೆ. ಆದರೆ ದೀಪ ಬೆಳಗಿಸುವ ಪದ್ಧತಿ ಮಾತ್ರ ಎಲ್ಲಾ ಕಡೆ ಕಂಡು ಬರುತ್ತದೆ.

ಹಿಂದೂ ಸಂಪ್ರದಾಯದಲ್ಲಿ ಆಚರಣೆ ಮಾಡಲಾಗುವ ಪ್ರತಿಯೊಂದು ಹಬ್ಬಕ್ಕೂ ಪುರಾಣದ ಕಥೆಯೊಂದು ಇದ್ದೇ ಇರುತ್ತದೆ. ಅದೇ ರೀತಿಯಲ್ಲಿ ದೀಪಾವಳಿ ಆಚರಣೆಯನ್ನು ನರಕಾಸುರನ ವಧೆ ಮತ್ತು ಬಲಿಚಕ್ರವರ್ತಿಯನ್ನು ಬಲಿ ಪಡೆದ ದಿನಗಳ ಸ್ಮರಣಾರ್ಥ ಆಚರಿಸಲಾಗುತ್ತದೆ.

ದೀಪಾವಳಿಯು ಆರಂಭವಾಗುವುದೇ ನೀರು ತುಂಬುವ ಹಬ್ಬದೊಂದಿಗೆ. ಅಂದು ನೀರು ಕಾಯಿಸುವ ಹಂಡೆಯನ್ನು ಶುದ್ಧಮಾಡಿ, ನೀರನ್ನು ತುಂಬಿ ಗಂಗೆಗೆ ಪೂಜೆ ಸಲ್ಲಿಸಲಾಗುತ್ತದೆ. ಮರುದಿನ ಅಮಾವಾಸ್ಯೆಯಂದು ಬ್ರಾಹ್ಮ ಮುಹೂರ್ತದಲ್ಲಿ ಅಭ್ಯಂಗ ಸ್ನಾನ ಮಾಡಿ ಲಕ್ಷ್ಮಿ ಪೂಜೆಯನ್ನು ಮಾಡಲಾಗುತ್ತದೆ. ನರಕಾಸುರ ಎಂಬ ರಾಕ್ಷಸನನ್ನು ಶ್ರೀ ಕೃಷ್ಣನು ಸಂಹರಿಸಿ, ಆತನ ಸೆರೆಯಲ್ಲಿದ್ದ ಸಾವಿರಾರು ಸ್ತ್ರೀಯರನ್ನು ರಕ್ಷಿಸಿದ ದಿನದ ಸಂಭ್ರಮಾಚರಣೆಯನ್ನು ನರಕಚತುರ್ದಶಿಯಂದು ಆಚರಿಸಲಾಗುತ್ತದೆ.

ಏಳು ಚಿರಂಜೀವಿಗಳಲ್ಲಿ ಒಬ್ಬರಾಗಿದ್ದ ಬಲಿಚಕ್ರವರ್ತಿ ಮಹಾರಾಜನು ತನ್ನ ಪ್ರಜೆಗಳನ್ನು ತುಂಬಾ ಸಂತೋಷದಿಂದ ಇರುವಂತೆ ನೋಡಿ ಕೊಂಡಿರುತ್ತಾನೆ. ಹಾಗಾಗಿ ಪ್ರಜೆಗಳು ಬಲಿಚಕ್ರವರ್ತಿಯನ್ನು ದೇವರಿಗಿಂತ ಹೆಚ್ಚಾಗಿ ಪ್ರೀತಿಸುತ್ತಿರುತ್ತಾರೆ. ಇದರಿಂದ ಬಲಿಮಹಾರಾಜನು ಅಹಂಕಾರದಲ್ಲಿ ಮೆರೆಯುತ್ತಾನೆ. ಅವನ ಅಹಂಕಾರವನ್ನು ಇಳಿಸಲು ವಿಷ್ಣು ವಾಮನ ಅವತಾರದಲ್ಲಿ ಬಂದು ಮೂರು ಹೆಜ್ಜೆಯಷ್ಟು ಜಾಗ ನೀಡುವಂತೆ ಬಲಿಚಕ್ರವರ್ತಿಯನ್ನು ಕೇಳುತ್ತಾನೆ. ಅದಕ್ಕೆ ಬಲಿ ಮಹಾರಾಜ ಮೂರು ಹೆಜ್ಜೆ ಜಾಗ ಕೊಡಲು ಒಪ್ಪುತ್ತಾನೆ. ಅದರಂತೆ ವಿಷ್ಣು ಒಂದು ಹೆಜ್ಜೆಯಲ್ಲಿ ಬಲಿಚಕ್ರವರ್ತಿಯ ಇಡಿ ಸಾಮ್ರಾಜ್ಯವನ್ನು ಎರಡನೇ ಹೆಜ್ಜೆಯಲ್ಲಿ ಆಕಾಶವನ್ನು ಅಳೆಯುತ್ತಾನೆ. ಆದರೆ ಮೂರನೇ ಹೆಜ್ಜೆ ಇಡಲು ಜಾಗವಿಲ್ಲದಂತಾಗುತ್ತದೆ. ಆಗ ಬಲಿಯು ತನ್ನ ತಲೆಯ ಮೇಲೆಯೇ ಪಾದವನ್ನು ಇಡುವಂತೆ ತಿಳಿಸುತ್ತಾನೆ. ಆ ಮೂಲಕ ಬಲಿ ಮಹಾರಾಜನು ಪಾತಾಳವನ್ನು ಸೇರುತ್ತಾನೆ. ಆಗ ತನ್ನ ತಪ್ಪಿನ ಅರಿವಾಗಿ ವಿಷ್ಣುವಿನಲ್ಲಿ ತನ್ನ ಅಹಂಕಾರವನ್ನು ಮನ್ನಿಸುವಂತೆ ಮತ್ತು ವರ್ಷಕ್ಕೆ ಒಂದು ದಿನ ನನ್ನ ಜನರನ್ನು ನೋಡಿ ಬರಲು ಅನುಮತಿ ನೀಡುವಂತೆ ಕೋರುತ್ತಾನೆ. ಹಾಗಾಗಿ ಬಲಿಪಾಡ್ಯಮಿ ದಿನದಂದು ಬಲಿ



For More Job News Visit: www.kpscvaani.com

**ಹಬ್ಬದ ಆಚರಣೆ ಎಂದರೆ ಸಾಮಾನ್ಯವಾಗಿ ಎಲ್ಲರೂ ಒಟ್ಟುಗೂಡುತ್ತೇವೆ. ಅದರಲ್ಲೂ ದೀಪಾವಳಿ ಆಚರಣೆಯಲ್ಲಿ ಜನರು ಸೇರುವುದು ಹೆಚ್ಚು. ಆದರೆ ಈ ಬಾರಿ ಕೋವಿಡ್–19 ಇರುವುದರಿಂದ ಎಲ್ಲರೂ ಜಾಗರೂಕತೆಯಿಂದ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳಬೇಕಾಗಿದೆ. ಆದ್ದರಿಂದ ಈ ವರ್ಷ ದೀಪಾವಳಿ ಹಬ್ಬವನ್ನು ಮನೆಯಲ್ಲೇ ದೀಪ ಬೆಳಗಿಸುವ ಮೂಲಕ ಮಾತ್ರ ಆಚರಣೆ ಮಾಡುವುದು ಒಳ್ಳೆಯದು.**

ಮಹಾರಾಜರು ನಮ್ಮನ್ನು ನೋಡಲು ಬರುವರೆಂದು ಹೊಸ ಬಟ್ಟೆ ತೊಟ್ಟು ಹಬ್ಬದೂಟವನ್ನು ಮಾಡಿ ಸಂಭ್ರಮಾಚರಣೆಯನ್ನು ಮಾಡಲಾಗುತ್ತದೆ.

ಆದರೆ ಇತ್ತೀಚಿನ ದಿನಗಳಲ್ಲಿ ಸಾಂಪ್ರದಾಯಿಕವಾಗಿ ಹಬ್ಬದ ಆಚರಣೆಯನ್ನು ಮಾಡುವುದಕ್ಕಿಂತ ಪಟಾಕಿ ಹಚ್ಚುವುದು ಪ್ರಮುಖವಾಗುತ್ತಿದೆ. ದೀಪವನ್ನು ಹಚ್ಚಿ ದೀಪಾವಳಿ ಹಬ್ಬವನ್ನು ಆಚರಣೆ ಮಾಡುವುದೇನೋ ಸರಿ. ಆದರೆ ಪಟಾಕಿಯನ್ನು ಹಚ್ಚಿ ಶಬ್ದ ಮಾಲಿನ್ಯ, ವಾಯು ಮಾಲಿನ್ಯ ಮತ್ತು ಪರಿಸರ ಮಾಲಿನ್ಯವನ್ನು ಹಾಳು ಮಾಡುವುದು ಸರಿಯಲ್ಲ. ಶಬ್ದ ಮಾಲಿನ್ಯದಿಂದ ವಯೋವೃದ್ಧರು, ರೋಗಿಗಳು, ಮಕ್ಕಳು, ಪಕ್ಷಿ–ಪ್ರಾಣಿಗಳಿಗೆ ತುಂಬಾ ತೊಂದರೆಯಾಗುತ್ತದೆ. ಬೀದಿ ನಾಯಿಗಳು ಶ್ರವಣ ದೋಷಕ್ಕೆ ಒಳಗಾಗುತ್ತವೆ.

ಅಸ್ತಮಾ, ಶ್ವಾಸಕೋಶ ಕಾಯಿಲೆಯನ್ನು ಹೊಂದಿರುವವರಿಗೆ ಪಟಾಕಿಯಿಂದಾಗುವ ವಾಯು ಮಾಲಿನ್ಯವು ಅವರ ಆರೋಗ್ಯವನ್ನು ಮತ್ತಷ್ಟು ಹದಗೆಡಿಸುತ್ತದೆ. ಈ ಮೂರು ದಿನಗಳ ಕಾಲ ಪಟಾಕಿ ಸುಡುವುದರಿಂದ ಪರಿಸರದಲ್ಲಿ ಘನ ತ್ಯಾಜ್ಯವು ಹೆಚ್ಚುತ್ತದೆ.

ಪಟಾಕಿಗಳನ್ನು ಸಿಡಿಸುವುದರಿಂದ ಅದರಲ್ಲಿರುವ ಕಾರ್ಬನ್ ಮಾನಾಕ್ಸೈಡ್ ಪರಿಸರದಲ್ಲಿ ಹರಡಿಕೊಂಡು ವಯಸ್ಸಾದವರಿಗೆ ಕಿವಿ ಕೇಳಿಸದಂತಾಗುತ್ತದೆ. ಕಣ್ಣುಗಳು ಮಂಜಾಗುವುದು, ಕಣ್ಣು ಮತ್ತು ಮೂಗಿನಲ್ಲಿ ನಂಜಾಗುವುದು, ಅಸ್ತಮಾ ಹಾಗೂ ಹೆಚ್ಚಾಗಿ ಉಸಿರಾಟ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ.

ಪಟಾಕಿ ಸುಡುವುದು ಎಂದರೆ ಒಂದು ರೀತಿಯಲ್ಲಿ ಹಣವನ್ನು ಸುಟ್ಟಂತೆ. ರಾಜ್ಯದಲ್ಲಿ ಪ್ರಕೃತಿ ವಿಕೋಪಗಳು ಸಾಲು ಸಾಲಾಗಿ ಬಂದು ಅಪ್ಪಳಿಸುತ್ತಿರುವುದಲ್ಲದೆ, ಕೋವಿಡ್–19 ನಿಂದಾಗಿ ದೇಶವು ಆರ್ಥಿಕ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಅನವಶ್ಯಕವಾಗಿ ಪಟಾಕಿಯನ್ನು ಹಚ್ಚಿ ದುಂದುವೆಚ್ಚ ಮಾಡದೇ ಸಂಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಮೂಲಕ ಅವರ ಬಾಳಲ್ಲಿ ಬೆಳಕನ್ನು ಮೂಡಿಸಿ ದೀಪಾವಳಿ ಹಬ್ಬವನ್ನು ಆಚರಿಸುವ ಬಗ್ಗೆ ಸ್ವಲ್ಪ ಯೋಚಿಸಿ.

ಆದರೂ ಮಕ್ಕಳು ಹಠಮಾಡಿದರೆ ಶಬ್ದ ಮಾಡುವ ಪಟಾಕಿಗಳನ್ನು ಕೊಡಿಸುವ ಬದಲು ಬೆಳಕನ್ನು ಚೆಲ್ಲುವ, ಮತ್ತು ಕಡಿಮೆ ಹೊಗೆ ಬಿಡುವ ಪಟಾಕಿಗಳನ್ನು ಕೊಡಿಸಿ. ಆದರೆ ಮಕ್ಕಳು ಹಬ್ಬದ ಆಚರಣೆಯ ಸಂಭ್ರಮದಲ್ಲಿ ಸಾಮಾಜಿಕ ಅಂತರವನ್ನು ಮರೆಯದಂತೆ ನೋಡಿಕೊಳ್ಳಬೇಕು. ಮಕ್ಕಳು ಪಟಾಕಿ ಹಚ್ಚುವಾಗ ದೊಡ್ಡವರು ಜೊತೆಯಲ್ಲಿ ಇರುವುದು ಒಳ್ಳೆಯದು. ಪಟಾಕಿ ಹಚ್ಚುವಾಗ ಬೆಂಕಿ ನಂದಿಸಲು ಪಕ್ಕದಲ್ಲೇ ನೀರು ಹಾಗೂ ಮರಳನ್ನು ಇಟ್ಟುಕೊಳ್ಳಬೇಕು. ದೀಪ ಅಥವಾ



ಪಟಾಕಿ ಹಚ್ಚುವ ಸಂದರ್ಭದಲ್ಲಿ ಕಾಟನ್ ಬಟ್ಟೆಗಳನ್ನು ಧರಿಸುವ ಜೊತೆಗೆ ಕಣ್ಣಿಗೆ ಕನ್ನಡಕ ಹಾಕಿಕೊಳ್ಳುವುದು ಕ್ಷೇಮ.

ಹಬ್ಬದ ಆಚರಣೆ ಎಂದರೆ ಸಾಮಾನ್ಯವಾಗಿ ಎಲ್ಲರೂ ಒಟ್ಟುಗೂಡುತ್ತೇವೆ. ಅದರಲ್ಲೂ ದೀಪಾವಳಿ ಆಚರಣೆಯಲ್ಲಿ ಜನರು ಸೇರುವುದು ಹೆಚ್ಚು. ಆದರೆ ಈ ಬಾರಿ ಕೋವಿಡ್–19 ಇರುವುದರಿಂದ ಎಲ್ಲರೂ ಜಾಗರೂಕತೆಯಿಂದ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳಬೇಕಾಗಿದೆ. ಆದ್ದರಿಂದ ಈ ವರ್ಷ ದೀಪಾವಳಿ ಹಬ್ಬವನ್ನು ಮನೆಯಲ್ಲೇ ದೀಪ ಬೆಳಗಿಸುವ ಮೂಲಕ ಮಾತ್ರ ಆಚರಣೆ ಮಾಡುವುದು ಒಳ್ಳೆಯದು.

ಪ್ರತಿ ವರ್ಷ ಪಟಾಕಿ ಸಿಡಿಸುವುದರಿಂದ 19 ರಷ್ಟು ಮಂದಿ ಮಕ್ಕಳ ಕಣ್ಣಿಗೆ ಹಾಗೂ ಶೇ 30 ರಷ್ಟು ಮಂದಿ ಕೈಗೆ ಹಾನಿ ಮಾಡಿಕೊಳ್ಳುತ್ತಾರೆ. 2018 ರಲ್ಲಿ 118 ಮಂದಿ ಮತ್ತು 2019 ರಲ್ಲಿ 110 ಮಂದಿ ದೀಪಾವಳಿ ಹಬ್ಬದ ಆಚರಣೆಯಿಂದ ಕಣ್ಣಿನ ದೃಷ್ಟಿಯನ್ನು ಕಳೆದುಕೊಂಡಿದ್ದಾರೆ. ಆದರೆ ಇಂದಿನ ಕೋವಿಡ್–19 ಪರಿಸ್ಥಿತಿಯಿಂದಾಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ದೊರಕುವುದು ಕಷ್ಟವಾಗುತ್ತಿದೆ. ಆದ್ದರಿಂದ ಪಟಾಕಿ ಸಿಡಿಸಿ ಪೆಟ್ಟು ಮಾಡಿಕೊಂಡು ಆಸ್ಪತ್ರೆಗಾಗಿ ಅಲೆಯುವ ಅವಸ್ಥೆ ಬರದಂತೆ ನೋಡಿಕೊಳ್ಳುವುದು ಮುಖ್ಯ.

ಇನ್ನು ಹಬ್ಬ ಎಂದ ಮೇಲೆ ಹಬ್ಬಕ್ಕಾಗಿ ಹೊಸ ಬಟ್ಟೆ, ಸಿಹಿ, ಪೂಜಾ ಸಾಮಗ್ರಿಗಳು, ಅಡುಗೆ ಪದಾರ್ಥಗಳು ಮುಂತಾದವುಗಳನ್ನು ಖರೀದಿಸಬೇಕಾಗುತ್ತದೆ. ಕೋವಿಡ್–19 ನಿಂದಾಗಿ ಹೊರಗೆ ಜನಜಂಗುಳಿಯಲ್ಲಿ ಸೇರುವುದು ಅಷ್ಟು ಸೂಕ್ತವಲ್ಲ. ಜನ ಸೇರುವಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗ ವೇಗವಾಗಿ ಹರಡುತ್ತದೆ. ಆದ್ದರಿಂದ ಹಬ್ಬಕ್ಕೆ ಬೇಕಾಗುವ ಎಲ್ಲಾ ವಸ್ತುಗಳನ್ನು ಆನ್‌ಲೈನ್ ಮೂಲಕವೇ ತರಿಸಿಕೊಳ್ಳುವುದು ಸೂಕ್ತ.

ದೀಪಾವಳಿ ಎಂದರೆ ದೀಪಗಳ ಸಾಲು. ದೀಪ ಎಂದರೆ ಬೆಳಕು. ಬೆಳಕು ಇಲ್ಲದಿದ್ದರೆ ನಾವು ಜಗತ್ತಿನಲ್ಲಿ ಏನನ್ನೂ ಕಾಣಲಾರೆವು. ಜಗತ್ತು ನಮಗೆ ಕಾಣಬೇಕಾದರೆ ಬೆಳಕು ಬೇಕು. ಮನೆಯ ಹಿರಿಯರು ತಮ್ಮ ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ಸರಿಯಾಗಿ ನಿಭಾಯಿಸಿದರೆ ದೀಪಾವಳಿಯನ್ನು ಸಂತಸ, ಸಂಭ್ರಮದಿಂದ ಆಚರಣೆ ಮಾಡಬಹುದು. ಆದ್ದರಿಂದ ಹಾನಿಕಾರಕ ಪಟಾಕಿಗಳಿಂದ ಆದಷ್ಟು ದೂರವಿದ್ದು, ಬೆಳಕಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುವ ಮೂಲಕ ಈ ವರ್ಷದ ದೀಪಾವಳಿಯನ್ನು ಅರ್ಥಪೂರ್ಣವಾಗಿ ಆಚರಿಸೋಣ. ■



For More Job News Visit: www.kpscvaani.com

# ಕೋವಿಡ್-19



ನನ್ನ ರಕ್ಷಣೆ
ನನ್ನ ಜವಾಬ್ದಾರಿ
**ಮಾಸ್ಕ್**
ಧರಿಸಲು ನಾನು
ಪ್ರತಿಜ್ಞೆ ಮಾಡುತ್ತೇನೆ

ಕೋವಿಡ್-19 ವೈದ್ಯಕೀಯ ಸಹಾಯಕ್ಕಾಗಿ ಆಪ್ತಮಿತ್ರ ಸಹಾಯವಾಣಿ **14410** ಗೆ ಕರೆ ಮಾಡಿ

#KarnatakaFightsCorona

ಎಲ್ಲರಿಗೂ ಆರೋಗ್ಯ ಎಲ್ಲೆಡೆಯೂ ಆರೋಗ್ಯ

For More Job News Visit: www.kpscvaani.com



## ಸಂಗೀತ ಸಾರ್ವಭೌಮ

# ಎಸ್.ಪಿ.ಬಿ.

ಡಿ. ಪಿ. ಮುರಳೀಧರ್

> ಐದು ದಶಕಗಳ ಹಾಡುಗಳಿಂದ ಬಾಲು ಅವರು ಮುಂದಿನ ಐದು ಶತಮಾನಗಳು ನಮ್ಮೊಡನೆಯೇ ಇರುತ್ತಾರೆ

**ಆ**ಗಸದ ಎತ್ತರಕ್ಕೂ ಮೀರಿದ ಪ್ರತಿಭೆ ! ಸಾಗರಕ್ಕಿಂತಲೂ ವಿಸ್ತಾರವಾದ ಸಾಧನೆ !!

ಇದು ಸ್ವರಲೋಕದ ಸರದಾರ ಹಾಗೂ ಸಂಗೀತ ಸಾರ್ವಭೌಮ ಎಂದೇ ಕರೆಸಿಕೊಳ್ಳುತ್ತಿದ್ದ ಶ್ರೀಪತಿ ಪಂಡಿತಾರಾಧ್ಯುಲ ಬಾಲಸುಬ್ರಮಣ್ಯಂ ಅವರ ಕಿರು ಪರಿಚಯ.

ಹೌದು ! ಎಸ್. ಪಿ. ಬಾಲಸುಬ್ರಮಣ್ಯಂ ಎಂಬ ಹೆಸರನ್ನು ಕೇಳದ ಭಾರತೀಯರೇ ಇಲ್ಲ ! ಅಷ್ಟೇ ಅಲ್ಲ ! ನಮ್ಮ ದೇಶದಲ್ಲಿ ಎಸ್. ಪಿ. ಬಾಲಸುಬ್ರಮಣ್ಯಂ ಅವರ ಧ್ವನಿಯನ್ನು ಆಲಿಸದ ವ್ಯಕ್ತಿಯೇ ಇಲ್ಲ ಎಂಬ ಮಾತು ಅತಿಶಯೋಕ್ತಿ ಅಲ್ಲ.

ಕಳೆದ ಐದು ದಶಕಗಳಿಂದಲೂ ದಕ್ಷಿಣ ಭಾರತದ ಎಲ್ಲಾ ಆಕಾಶವಾಣಿ ಕೇಂದ್ರಗಳಲ್ಲಿ ಪ್ರತಿ ಮುಂಜಾನೆ ಪ್ರಸಾರವಾಗುವ ಭಕ್ತಿ ಗೀತೆಗಳು ಇರಬಹುದು. ನಂತರ, ಬಿತ್ತರವಾಗುವ ದೇವರ ನಾಮಗಳು ಇರಬಹುದು. ತದ ನಂತರ, ಮೂಡಿಬರುವ ಭಾವ ಗೀತೆಗಳು ಇರಬಹುದು. ಇವೆಲ್ಲದರ ನಂತರ, ಹೊರ ಹೊಮ್ಮುವ ಚಿತ್ರಗೀತೆಗಳು ಇರಬಹುದು. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಪ್ರಸಾರವಾಗುವ ಕನಿಷ್ಠ



For More Job News Visit: www.kpscvaani.com



ಒಂದು ಹಾಡಾದರೂ ಎಸ್. ಪಿ. ಬಾಲಸುಬ್ರಮಣ್ಯಂ ಅವರ ಸಿರಿಕಂಠದಲ್ಲಿ ಮೊಳಗಿದ ಗೀತೆಯೇ ಆಗಿರುತ್ತಿತ್ತು ಎಂಬುದಕ್ಕೆ ಎಲ್ಲಾ ವಯೋಮಾನದ ಕೋಟ್ಯಾಂತರ ಶ್ರೋತೃಗಳೇ ಸಾಕ್ಷಿ.

**ಬಂಧುಗಳ ಪಾಲಿಗೆ ಮಣಿ**

ಅಂದಿನ ಮದ್ರಾಸ್ ಪ್ರೆಸಿಡೆನ್ಸಿಯ ಭಾಗವಾಗಿದ್ದ ಇಂದಿನ ಆಂಧ್ರ ಪ್ರದೇಶದ ನೆಲ್ಲೂರಿನಲ್ಲಿ ಹರಿಕಥ ವಿದ್ವಾನ್ ಎಸ್. ಪಿ. ಸಾಂಭಮೂರ್ತಿ ಹಾಗೂ ಶಕುಂತಲಮ್ಮ ಅವರ ಸುಪುತ್ರರಾಗಿ 1946 ರ ಜೂನ್ 4 ರಂದು ಜನಿಸಿದ ಎಸ್. ಪಿ. ಬಾಲಸುಬ್ರಮಣ್ಯಂ ಅವರು ಇಬ್ಬರು ಸಹೋದರರು ಹಾಗೂ ಐವರು ಸಹೋದರಿಯರ ನಡುವೆ ಅವಿಭಕ್ತ ಕುಟುಂಬದಲ್ಲಿ ಬೆಳೆದು ಬೆಳಗಿದವರು. ಎಸ್. ಪಿ. ಬಾಲಸುಬ್ರಮಣ್ಯಂ ಅವರನ್ನು ಬಹುತೇಕರು ಬಾಲು ಎಂದು ಕರೆದರೂ, ಬಂಧು–ಮಿತ್ರರ ಪಾಲಿಗೆ ಮಣಿ ಎಂದೇ ಜನಪ್ರಿಯರಾಗಿದ್ದರು. ಇಂಜಿನಿಯರ್ ಆಗಬೇಕೆಂಬ ತಮ್ಮ ಕನಸಿಗೆ ವಿಷಮಶೀತ ಜ್ವರ ಧಕ್ಕೆ ತಂದಿತಾದರೂ ಇಂಜಿನಿಯರಿಂಗ್‌ಗೆ ಸಮಾನಾಂತರ ಪದವಿಯಾದ ಅಸೋಸಿಯೇಟ್ ಮೆಂಬರ್ ಆಫ್ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ( ಎ ಎಂ ಐ ಇ ) ಪದವಿಯನ್ನು ಬಾಲು ಪಡೆದರು.

ಅಲ್ಲದೆ, ತಮ್ಮ ವ್ಯಾಸಂಗದ ಸಂದರ್ಭದಲ್ಲಿ, 1964 ರಲ್ಲಿ ಮದರಾಸಿನಲ್ಲಿ ನಡೆದ ತೆಲುಗು ಸಾಂಸ್ಕೃತಿಕ ಸಂಘದಲ್ಲಿ ಉದಯೋನ್ಮುಖ ಗಾಯಕರ ಸ್ಪರ್ಧಾ ಕಾರ್ಯಕ್ರಮದಲ್ಲಿ ಪ್ರಥಮ ಬಹುಮಾನ ಪಡೆದು ಎಲ್ಲರ ಗಮನ ಸೆಳೆದರು. ಆ ಕಾರ್ಯಕ್ರಮದಲ್ಲಿ ತೀರ್ಪುಗಾರರಾಗಿ ಪಾಲ್ಗೊಂಡಿದ್ದವರು ಸುಪ್ರಸಿದ್ಧ ಗಾಯಕ ಘಂಟಸಾಲ ವೆಂಕಟೇಶ್ವರ ರಾವ್ ಹಾಗೂ ಹೆಸರಾಂತ ಸಂಗೀತ ನಿರ್ದೇಶಕ ಎಸ್. ಪಿ. ಕೋದಂಡಪಾಣಿ. ಈ ಕಾರ್ಯಕ್ರಮವು ಬಾಲು ಅವರ ಬಾಳಿನ ಭಾಗ್ಯದ ಬಾಗಿಲು ತೆರೆಯುವಂತೆ ಮಾಡಿತು ಎಂದು ಬಣ್ಣಿಸಬಹುದು.

**ಚಿತ್ರಜಗತ್ತಿಗೆ ಪ್ರವೇಶ**

ಎಸ್. ಪಿ. ಕೋದಂಡಪಾಣಿ ಅವರ ಸಂಗೀತ ನಿರ್ದೇಶನದಲ್ಲಿ 1966 ರ ಡಿಸೆಂಬರ್ 15 ರಂದು ಮರ್ಯಾದಾ ರಾಮನ್ನ ತೆಲುಗು ಚಿತ್ರಕ್ಕೆ ಹಾಡುವ ಮೂಲಕ ಚಿತ್ರಜಗತ್ತಿಗೆ ಪ್ರವೇಶಿಸಿದರು. ಕೇವಲ ಎಂಟು ದಿನಗಳ ನಂತರ, ಕನ್ನಡದ ಹೆಸರಾಂತ ಹಾಸ್ಯ ನಟ ಟಿ. ಆರ್. ನರಸಿಂಹರಾಜು ಅವರ ಅಭಿನಯದ ನಕ್ಕರದೇ ಸ್ವರ್ಗ ಚಿತ್ರದ ಗೀತೆಗೆ ಬಾಲು ಕಂಠದಾನ ಮಾಡಿದರು. ನಂತರ, ತಮಿಳು ಚಿತ್ರ ಹೋಟೆಲ್ ರಂಭಾ ಚಿತ್ರದಲ್ಲಿ ಎಂ. ಎಸ್. ವಿಶ್ವನಾಥನ್ ಅವರ ರಾಗ ಸಂಯೋಜನೆಯಲ್ಲಿ ಎಲ್. ಆರ್. ಈಶ್ವರಿ ಅವರೊಂದಿಗೆ ಹಾಡಿದರಾದರೂ, ಚಿತ್ರ ಬಿಡುಗಡೆಯಾಗಲಿಲ್ಲ. ತದ ನಂತರ, ಡಿ. ದೇವರಾಜನ್ ಅವರ ಸಂಗೀತ ಸಂಯೋಜನೆಯಲ್ಲಿ ಕಾದಲಪ್ಪಾಲಮ್ ಮಲಯಾಲಂ ಚಿತ್ರದಲ್ಲಿ ಗೀತೆಗೆ ಧ್ವನಿಯಾದರು.

**ಸಾಧನೆಗಳ ಸರಮಾಲೆ**

ಅಂದು ಪ್ರಾರಂಭವಾದ ಬಾಲು ಅವರ ಸಂಗೀತ ಪಯಣ ಸತತ ಐವತ್ತು ವರ್ಷಗಳ ಕಾಲ ನಿರಂತರವಾಗಿ ಮುಂದುವರೆದದ್ದು ಇದೀಗ ಇತಿಹಾಸ. ಹದಿನಾರು ಭಾಷೆಗಳಲ್ಲಿ ನಲವತ್ತು ಸಾವಿರಕ್ಕೂ ಹೆಚ್ಚು ಗೀತೆಗಳನ್ನು ಬಾಲು ಅವರು ಹಾಡಿದ್ದಾರೆ ಎಂದರೆ ಅದೊಂದು ರೋಚಕ ಚರಿತ್ರೆಯೇ ಸರಿ.

ಬಾಲು ಅವರ ಸಾಧನೆಗಳ ವಿಶ್ಲೇಷಣೆ ಮಾಡಲು ಪುಟಗಳು ಸಾಲುವುದಿಲ್ಲ ! ಸಂಪುಟಗಳೇ ಬೇಕಾಗುತ್ತದೆ ! ಬಾಲು ಅವರು ಮೂರು ತಲೆಮಾರಿನ ನಾಯಕರಿಗೆ ಹಾಡಿದ್ದಾರೆ. ಬೆಳ್ಳಿ ತೆರೆಯ



For More Job News Visit: www.kpscvaani.com





ಮೇಲೆ ನಾಯಕ ಕುಣಿಯುವಾಗ ಪ್ರೇಕ್ಷಕನಿಗೆ ಯಾವುದೇ ವ್ಯತ್ಯಾಸ ಗೊತ್ತಾಗಲೇ ಇಲ್ಲ.

ತೆಲುಗಿನ ಅಕ್ಕಿನೆನಿ ನಾಗೇಶ್ವರ ರಾವ್, ಅಕ್ಕಿನೇನಿ ನಾಗಾರ್ಜುನ ಹಾಗೂ ಅಕ್ಕಿನೇನಿ ನಾಗಚೈತನ್ಯ ಅವರ ಚಿತ್ರಗಳು ಹಾಗೂ ಎನ್. ಟಿ. ರಾಮರಾವ್, ಹರಿಕೃಷ್ಣ ಹಾಗೂ ಜ್ಯೂನಿಯರ್ ಎನ್ ಟಿ ಆರ್ ಅವರ ಚಿತ್ರಗಳು ಈ ಮಾತಿಗೆ ಉತ್ತಮ ಉದಾಹರಣೆ ಎನ್ನಬಹುದು.

ಎಸ್. ಪಿ. ಬಾಲಸುಬ್ರಮಣ್ಯಂ ಅವರು ಅತ್ಯಧಿಕ ಅಂದರೆ ಒಂದೇ ದಿನ 21 ಹಾಡುಗಳನ್ನು ಹಾಡಿದ್ದಾರೆ. ಹೌದು ! ಹೆಸರಾಂತ ಸಂಗೀತ ನಿರ್ದೇಶಕ ಉಪೇಂದ್ರ ಕುಮಾರ್ ಅವರ ರಾಗಸಂಯೋಜನೆಯಲ್ಲಿ 1981 ರ ಫೆಬ್ರವರಿ 8 ರ ಬೆಳಿಗ್ಗೆ 9-00 ಗಂಟೆಯಿಂದ ರಾತ್ರಿ 9-00 ಗಂಟೆಯವರೆಗೆ 21 ಕನ್ನಡ ಗೀತೆಗಳು ಮೂಡಿಬಂದಿವೆ. ಒಂದೇ ದಿನ ತಮಿಳಿನ 19 ಹಾಗೂ ಹಿಂದಿಯ 16 ಹಾಡುಗಳನ್ನು ಹಾಡಿದ ದಾಖಲೆ ಬಾಲು ಅವರದಾಗಿದೆ.

**ಹೃದಯದಿಂದ ಮೂಡಿಬರುವ ಹಾಡುಗಳು**

ಎಸ್. ಪಿ. ಬಾಲಸುಬ್ರಮಣ್ಯಂ ಅವರ ಹಾಡುಗಳೆಂದರೆ ಹೃದಯದಿಂದ ಮೊಳಗುವ ಹಾಡುಗಳು ಎಂದರ್ಥ. ಶ್ರೋತೃಗಳ ಹೃನ್ಮಗಳಲ್ಲಿ ಅವುಗಳಿಗೆ ನೂರ್ಕಾಲ ಸ್ಥಳ ಮೀಸಲಿರುತ್ತದೆ. ಕನ್ನಡದ ಶ್ರೀನಿವಾಸ ಕಲ್ಯಾಣ ಚಿತ್ರದಲ್ಲಿ ಬಾಲು ಅವರು ಹಾಡಿರುವ ಪವಡಿಸುವ ಪರಮಾತ್ಮ ಶ್ರೀ ವೆಂಕಟೇಶ....ಸಪ್ತಗಿರಿವಾಸ... ಈ ಹಾಡನ್ನು ಇಷ್ಟು ಭಕ್ತಿಪೂರ್ವಕವಾಗಿ ಬಹುಶಃ ಯಾರೂ ಹಾಡಲು ಸಾಧ್ಯವೇ ಇಲ್ಲ ! ಬಾಲು ಅವರು ಹಾಡಿರುವ ಸೀತ ಚಿತ್ರದ ಮದುವೆಯ ಈ ಬಂಧಾ... ಅನುರಾಗದ ಅನುಬಂಧಾ.... ಹಾಡು ಕನ್ನಡ ನಾಡಿನಾದ್ಯಂತ ಎಲ್ಲಾ ಕಲ್ಯಾಣ ಮಂಟಪಗಳಲ್ಲಿ ಲಕ್ಷಾಂತರ ಬಾರಿ ಮೊಳಗಿದೆ ಎಂಬುದಂತೂ ಸತ್ಯ. ಎಸ್. ಪಿ. ಬಾಲಸುಬ್ರಮಣ್ಯಂ ಅವರು ವಿಜಯ ಭಾಸ್ಕರ್ ಅವರ ರಾಗಸಂಯೋಜನೆಯಲ್ಲಿ ವಾಣಿ ಜಯರಾಂ ಅವರ ಜೊತೆಯಲ್ಲಿ ಹಾಡಿದ ಗೀತಪ್ರಿಯ ಅವರ ರಚನೆ ಬೆಸುಗೆ ಚಿತ್ರದ ಶೀರ್ಷಿಕಾ ಗೀತೆಗೆ ತಲೆದೂಗದವರಿಲ್ಲ. ಈ ಶೀರ್ಷಿಕಾ ಗೀತೆಯಲ್ಲಿ ಬೆಸುಗೆ ಎಂಬುದು ಎಷ್ಟು ಬಾರಿ ಬಂದಿದೆ ? ಎಂಬುದೇ ಯುವ ಜನತೆ ಒಂದು ಕಾಲದಲ್ಲಿ ಕೇಳುತ್ತಿದ್ದ ಸಾಮಾನ್ಯ ಪ್ರಶ್ನೆಯಾಗಿತ್ತು. ಐವತ್ತೆಂಟು ಬಾರಿ ಬೆಸುಗೆ ಎಂದು ಉಚ್ಚರಿಸುತ್ತಿದ್ದರೂ ಬೆಸುಗೆಯ ಈ ಹಾಡು ಯಾರನ್ನೂ ಬೇಸರಕ್ಕೆ ತಳ್ಳುತ್ತಿರಲಿಲ್ಲ.

ವಿಜಯ ಭಾಸ್ಕರ್ ಅವರ ಸಂಗೀತ ನಿರ್ದೇಶನದಲ್ಲಿ ನಾಗರಹಾವು ಚಿತ್ರದ ಹಾವಿನ ದ್ವೇಷ ಹನ್ನೆರಡು ವರುಷ.. ನನ್ನ ರೋಷ ನೂರು ವರುಷ... ಹಾಡಿನಲ್ಲಿ ಬಾಲು ಅವರ ಗಟ್ಟಿತನದ ಅನಾವರಣವಾಗುತ್ತದೆ. ಶುಭಮಂಗಳ ಚಿತ್ರದ ಸ್ನೇಹದ ಕಡಲಲ್ಲೀ... ನೆನಪಿನ ದೋಣಿಯಲೀ.... ಸ್ನೇಹದ ಕುರುಹು. ಟಿ. ಜಿ. ಲಿಂಗಪ್ಪ ಅವರ ರಾಗ ಸಂಯೋಜನೆಯಲ್ಲಿ ದೇವರ ಕಣ್ಣು ಚಿತ್ರಕ್ಕೆ ಎಸ್. ಪಿ. ಬಾಲಸುಬ್ರಮಣ್ಯಂ ಅವರು ಹಾಡಿರುವ ನಿನ್ನ ನೀನು ಮರೆತರೇನು ಸುಖವಿದೇ ? ತನ್ನ ತನವ ತೊರೆದರೇನು ಸೊಗಸಿದೇ ? ಹಾಡು ಅತ್ಯದ್ಭುತವಾದದ್ದು ರಾಜನ್-ನಾಗೇಂದ್ರ ಅವರ ಸಂಗೀತ ನಿರ್ದೇಶನದಲ್ಲಿ ಪರಸಂಗದ ಗೆಂಡೆತಿಮ್ಮ ಚಿತ್ರದಲ್ಲಿ ಬಾಲು ಅವರು ಹಾಡಿದ ಪ್ರತಿ ಹಾಡುಗಳೂ ಮುದ ನೀಡವಂತಹುದು. ದೇವರ ಗುಡಿಯ ಮಾಮರವೆಲ್ಲೋ ... ಕೋಗಿಲೆ ಎಲ್ಲೋ... , ಹೊಂಬಿಸಿಲು ಚಿತ್ರದ ನೀರಬಿಟ್ಟು ನೆಲದ ಮೇಲೆ ದೋಣಿ ಸಾಗದು, ಬಯಲು ದಾರಿ ಚಿತ್ರದ ಎಲ್ಲಿರುವೇ ಮನವ ಕಾಡುವ ರೂಪಸಿಯೇ ... , ಪ್ರೇಮಲೋಕ ಚಿತ್ರದ ನೋಡಮ್ಮ ಹುಡುಗಿ.., ಅಂಜದ ಗಂಡು ಚಿತ್ರದ ತ್ರಿಪುರ ಸುಂದರಿ ಬಾರೆ ನೀ ಹಸೆಮಣೆಗೆ........ ಮದುವೆ ಮುಗಿದರೆ ರಾತ್ರಿಯೇ ಮೆರವಣಿಗೆ....., ಮಹಾ ಕ್ಷತ್ರಿಯ ಚಿತ್ರದ ಈ ಭೂಮಿ ಬಣ್ಣದ ಬುಗುರಿ ಗೀತೆಗಳು ಕನ್ನಡ ಚಿತ್ರಗಳ ಸಂಗೀತದ ದಿಕ್ಕನ್ನೇ ಬದಲಿಸಿದವು.

ಇಳಯರಾಜ ರಾಗ ಸಂಯೋಜನೆಯಲ್ಲಿ ಹೊರಹೊಮ್ಮಿದ ತಮಿಳಿನ ಇಳಮೈ ಊಂಜಲಾಡುಗಿರದು ಚಿತ್ರದ ಎನ್ನಡಿ ಮೀನಾಚ್ಚಿ.... ಸೊನ್ನದು ಎನ್ನಾಚ್ಚಿ... ಹಾಗೂ ಕನ್ನಡದ ಗೀತಾ ಚಿತ್ರದ ಸಂತೋಷಕ್ಕೇ ಹಾಡು ಸಂತೋಷಕ್ಕೇ... ಕುಣಿದು ತಾಳಕ್ಕೆ ಕುಣಿದು ನಲಿದು ರಾಗಕ್ಕೆ ನಲಿದು... ರಾಕ್ ಹಾಡುಗಳಿಗೆ ಸರಿಸಮ ಬೇರೆ ಏನೂ ಇರಲು ಸಾಧ್ಯವಿಲ್ಲ.

ತೆಲುಗಿನ ಅಕ್ಕಿನೇನಿ ನಾಗೇಶ್ವರ ರಾವ್ ಅಭಿನಯದ ಪ್ರೇಮಾಭಿಷೇಕಂ ಚಿತ್ರದ ನೀ ಕಳ್ಳು ಚೆಪುತುನ್ನಾಯಿ, ಮೇಜರ್ ಚಂದ್ರಕಾಂತ್ ಚಿತ್ರದ ಪುಣ್ಯಭೂಮಿ ನಾದೇಶಂ ನಮೋ ನಮಾಮಿ.... ಧನ್ಯ ಭೂಮಿ ನಾದೇಶಂ ಸದಾ ಸ್ಮರಾಮಿ..., ಜಗದೇಕ ವೀರುಡು ಅತಿಲೋಕ ಸುಂದರಿ ಚಿತ್ರದ ಅಬ್ಬ ನೀ ತೀಯನೀ ದೆಬ್ಬಾ !, ಶಂಕರಾಭರಣಂ ಚಿತ್ರದ ದೊರಕುನಾ ಇಟುವಂಟಿ ಸೇವಾ.., ಸಾಗರ ಸಂಗಮಮ್ ಚಿತ್ರದ ತಕಿಟ ತಥಮಿ ತಕಿಟ ತಥಮಿ ತಂದಾನ, ಸ್ವಾತಿ ಮುತ್ಯಂ ಚಿತ್ರದ ಸುವ್ವಿ ಸುವ್ವೀ ಸುವ್ವಾಲಮ್ಮ, ಮರೋ ಚರಿತ್ರ, ಅನ್ನಮಯ್ಯ ಚಿತ್ರದ ಪೊಡಗೊಂಟಿ ಮಯ್ಯಾಮಿಮ್ಮ ಪುರುಷೋತ್ತಮಾ, ಶ್ರೀ ರಾಮದಾಸು ಚಿತ್ರದ ಅಂತಾರಾಮಮಯಂ, ಶ್ರೀ ರಾಮ ರಾಜ್ಯಂ ಚಿತ್ರದಲ್ಲಿ ಜಗದಾನಂದಕಾರಕ ಜಯ ಜಾನಕೀಪ್ರಾಣ ನಾಯಕ, ಮುತ್ಯಾಲ ಮೊಗ್ಗು, ಸಿರಿಸಿರಿ ಮುವ್ವ, ರುದ್ರ ವೀಣಾ, ಮುಠಾ ಮೇಸ್ತ್ರಿ ಹಾಗೂ ಗ್ಯಾಂಗ್ ಲೀಡರ್ ಹೀಗೆ ಬಾಲು ಅವರು ಹಾಡಿರುವ ಚಿತ್ರಗಳ ಸುಮಧುರ ಗೀತೆಗಳನ್ನು ದಾಖಲಿಸುತ್ತಾ ಹೋದರೆ, ಪಟ್ಟಿಯನ್ನು ನಿರಂತರವಾಗಿ ದಾಖಲಿಸುತ್ತಲೇ ಹೋಗಬೇಕಾಗುತ್ತದೆ.

ತೆಲುಗು ಮರೋಚರಿತ್ರ ದ ಹಿಂದಿ ಅವತರಣಿಕೆ ಎಕ್ ದೂಜೆ



For More Job News Visit: www.kpscvaani.com



### ಎದೆ ತುಂಬಿ ಹಾಡುವೆನು

ಬಾಲು ಅವರು ಎಂದೂ ಮಾರುಕಟ್ಟೆಗಾಗಿ ಕುಳಿತುಕೊಂಡವರಲ್ಲ. ತಮ್ಮ ಮಾರುಕಟ್ಟೆಯನ್ನು ತಾವೇ ಸೃಷ್ಟಿಸಿಕೊಂಡವವರು. ತಮ್ಮ ಅವಕಾಶಗಳು ವಿರಳವಾಗುತ್ತಿದ್ದಂತೆಯೇ, ತೆಲುಗಿನ ಈ ಟಿ ವಿ ಯಲ್ಲಿ ಪಾಡುತಾ ತೀಯಗಾ ( ಸಿಹಿಯಾಗಿ ಹಾಡುವೆ ) ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಅವಿಭಜಿತ ಆಂಧ್ರಪ್ರದೇಶದಲ್ಲಿ ಸಂಚಲನ ಮೂಡಿಸಿದ ಈ ಕಾರ್ಯಕ್ರಮದ ಯಶಸ್ಸನ್ನು ಆಧರಿಸಿ ಈ ಟಿ ವಿ ಕನ್ನಡ ವಾಹಿನಿಯಲ್ಲಿ ಎದೆ ತುಂಬಿ ಹಾಡುವೆನು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸದಭಿರುಚಿಯ ಚಿತ್ರ ಸಂಗೀತವನ್ನು ಮೆಲುಕು ಹಾಕುವ ಸೌಭಾಗ್ಯವನ್ನು ಕಲ್ಪಿಸಿದ ಈ ಎರಡೂ ಕಾರ್ಯಕ್ರಮಗಳು ಹೊಸ ಪ್ರತಿಭೆಗಳಿಗೆ ಅವಕಾಶ ಕಲ್ಪಿಸಿತು. ಅಲ್ಲದೆ, ಈ ಎರಡೂ ರಾಜ್ಯಗಳಲ್ಲಿ ಸಾವಿರಾರು ಸಂಗೀತ ಶಿಕ್ಷಕರಿಗೆ ಬೇಡಿಕೆ ದೊರಕಿಸಿಕೊಟ್ಟು ಬದುಕು ಕಟ್ಟಿಕೊಟ್ಟಿತು.

ನಂತರ, ಪಾಡಾಲನಿ ಉಂದಿ, ಎಂದುರೋ ಮಹಾನುಭಾವುಲು ಹಾಗೂ ಸ್ವರಾಭಿಷೇಕಂ ಸರಣಿ ಕಾರ್ಯಕ್ರಮಗಳಲ್ಲೂ ಒತ್ತಡಕ್ಕೆ ಮಣಿದು ಬಾಲು ಅವರು ಅನಿವಾರ್ಯವಾಗಿ ಪಾಲ್ಗೊಳ್ಳಬೇಕಾಯಿತು.

ಕೆ ಲಿಯೇ, ಸಿರಿ ಸಿರಿ ಮುವ್ವದ ಸರ್‌ಗಮ್, ಸನಮ್ ತೆರಿ ಕಸಮ್ ಹಾಗೂ ಮೇನೇ ಪ್ಯಾರ್ ಕಿಯಾ ಚಿತ್ರಗಳಿಗೆ ಬಾಲು ಅವರು ಹಾಡಿದ ಹಾಡುಗಳು ಎಲ್ಲಾ ವಯೋಮಾನದ ಜನರಲ್ಲಿ ಜನಪ್ರಿಯವಾದವು.

ಕನ್ನಡ, ತೆಲುಗು, ತಮಿಳು, ಮಲಯಾಳಂ ಯಾವ ಭಾಷೆಯ ಚಿತ್ರಗಳೇ ಇರಲಿ, ಯಾವ ವಯೋಮಾನದ ನಾಯಕನೇ ಇರಲಿ ಬಾಲು ಅವರ ಧ್ವನಿ ಆ ನಾಯಕನಿಗೆ ಹೋಲುತ್ತಿತ್ತು ಎಂಬುದು ಅಚ್ಚರಿ ಮತ್ತು ಆನಂದದ ಸಂಗತಿ ಮಾತ್ರವಲ್ಲ, ಸತ್ಯ ಸಂಗತಿಯೂ ಆಗಿತ್ತು.

**ಕಂಠದಾನ ಕಲಾವಿದ**

ಬಾಲು ಅವರು ಶ್ರೇಷ್ಠ ಹಾಡುಗಾರ ಮಾತ್ರವಲ್ಲ, ಅತ್ಯುತ್ತಮ ಕಂಠದಾನ ಕಲಾವಿದ ಕೂಡಾ. ಕೆ. ಬಾಲಚಂದರ್ ಅವರ ಮನ್ಮಥ ಲೀಲೈ ಚಿತ್ರದಿಂದ ಪ್ರಾರಂಭವಾದ ಈ ಕಲೆ ನಂತರವೂ ಮುಂದುವರೆಯಿತು. ಕಮಲಹಾಸನ್ ಅವರು ಹತ್ತು ಪಾತ್ರಗಳ ನಿರ್ವಹಿಸಿದ ದಶಾವತಾರಂ ನಲ್ಲಿ ಕಮಲ್ ಹಾಸನ್ ಅವರ ಏಳು ಪಾತ್ರಗಳಿಗೆ ಅವರು ನೀಡಿದ ಧ್ವನಿ ವಿಭಿನ್ನ ಮತ್ತು ವಿಶೇಷ. ಕಮಲ್ ಹಾಸನ್, ರಜನೀ ಕಾಂತ್, ವಿಷ್ಣುವರ್ಧನ್, ಸಲ್ಮಾನ್ ಖಾನ್, ಅನಿಲ್‌ಕಪೂರ್, ಕೆ. ಭಾಗ್ಯರಾಜ್, ಜಮಿನಿ ಗಣೇಶನ್, ಅರ್ಜುನ್ ಸರ್ಜಾ, ರಘುವರನ್ ಅವರಿಗೆ ವಿವಿಧ ಭಾಷೆಗಳಲ್ಲಿ ಬಾಲು ಅವರು ಡಬ್ಬಿಂಗ್ ಕಲಾವಿದರಾಗಿ ಕಾರ್ಯ ನಿರ್ವಹಿಸಿದ್ದಾರೆ ಎಂಬುದು ಗಮನಾರ್ಹ.

**ಅಭಿನಯಕ್ಕೂ ಲಗ್ಗೆ**

ಎಸ್. ಪಿ. ಬಾಲಸುಬ್ರಮಣ್ಯಂ ಅವರು ಹಲವಾರು ಚಿತ್ರಗಳಲ್ಲೂ ಅಭಿನಯಿಸಿದ್ದಾರೆ. ಕನ್ನಡದ ಮುದ್ದಿನ ಮಾವ ಹಾಗೂ ತೆಲುಗಿನ ಮಿಥುನಂ ಚಿತ್ರಗಳು ಅವರ ಸ್ಮರಣಾರ್ಹ ಅಭಿನಯಕ್ಕೆ ಸಾಕ್ಷಿಯಾಗಿವೆ.

**ಯಾರು ಬೇಕಾದರೂ ಹಾಡಲಿ**

ನಾನು ಯಾರನ್ನೂ ಪ್ರತಿಸ್ಪರ್ಧಿಯಂತೆ ಕಾಣುವುದಿಲ್ಲ. ಅವಕಾಶ ದೊರೆಯಲಿಲ್ಲ ಎಂದು ನಾನು ಯಾರನ್ನೂ ದ್ವೇಷಿಸುವುದೂ ಇಲ್ಲ. ಧೂಷಿಸುವುದೂ ಇಲ್ಲ. ದೇವರು ಎಲ್ಲರಿಗೂ ಅನ್ನವನ್ನು ಕೊಟ್ಟಿರುತ್ತಾನೆ.

ಹಾಡು ಎಂಬುದು ತಪಸ್ಸಿನಂತೆ. ಯಾರು ಬೇಕಾದರೂ ಹಾಡಲಿ. ಯಾವ ಭಾಷೆಯವರು ಬೇಕಾದರೂ ಮತ್ತೊಂದು ಭಾಷೆಯಲ್ಲಿ ಹಾಡಲಿ. ನನ್ನ ಅಭ್ಯಂತರವಿಲ್ಲ. ಆದರೆ, ಹಾಡುವ ಮುನ್ನ ಅದರ ಭಾವ ಅರಿತು ಹಾಡುವುದು ಮುಖ್ಯ. ಅಷ್ಟೇ ಅಲ್ಲ ! ಅಕ್ಷರ ಮತ್ತು ಸ್ವರದ ಉಚ್ಚಾರಣೆಯೂ ಅತೀ ಮುಖ್ಯ.

ಹಾಡುಗಾರ ಭಾವ ಶುದ್ಧಿ ಹಾಗೂ ಭಾಷಾ ಶುದ್ಧಿ ತಲುಪುವವರೆಗೂ ಆತನಿಂದ ಹಾಡಿಸುವುದು ಸಂಗೀತ ನಿರ್ದೇಶಕ ಹಾಗೂ ಗೀತ ರಚನಾಕಾರರ ಕರ್ತವ್ಯ ಮತ್ತು ಜವಾಬ್ದಾರಿ ಎಂಬ ಬಾಲು ಅವರ ಮಾತುಗಳು ಅವರ ಉದಾರ ವ್ಯಕ್ತಿತ್ವಕ್ಕೆ ಮತ್ತು ಉದಾತ್ತ ಮನೋಭವಕ್ಕೆ ಹಿಡಿದ ಕನ್ನಡಿ.

**ಹಿರಿಯರ ಬಗ್ಗೆ ಅಪಾರ ಗೌರವ**

ಎಸ್. ಪಿ. ಬಾಲಸುಬ್ರಮಣ್ಯಂ ಅವರ ವಿಶೇಷತೆ ಎಂದರೆ ಅವರು ಹಿರಿತನಕ್ಕೆ ಅಪಾರ ಗೌರವ ಕೊಡುತ್ತಿದ್ದರು. ಹಾಡುಗಾರಿಕೆಯಲ್ಲಿ ಅಷ್ಟೊಂದು ಅನುಭವವಿದ್ದರೂ ಎಕ್ ದೂಜೆ ಕೆ ಲಿಯೇ ಚಿತ್ರದ ಹಾಡು ಧ್ವನಿಮುದ್ರಣದ ಸಮಯದಲ್ಲಿ ಲತಾ ಮಂಗೇಷ್ಕರ್ ಅವರ ಜೊತೆಗೆ ಹಾಡಲು ತೆರಳಬೇಕಾದ ಸಂದರ್ಭದಲ್ಲಿ ಬಾಲು ಬೆವತು ಹೋಗಿದ್ದರು. ಅದರೆ, ಆ ಹಾಡು ಮೊದಲನೇ ಟೇಕ್‌ಗೆ ಓ ಕೆ ಆದಾಗ ಅವರು ಪಟ್ಟ ಆನಂದ ಅಷ್ಟಿಷ್ಟಲ್ಲ.

ಅದೇ ರೀತಿ, ಡಾ ಕೆ ಜೆ ಯೇಸುದಾಸ್, ಡಾ ಪಿ. ಬಿ. ಶ್ರೀನಿವಾಸ್, ಡಾ ರಾಜ್‌ಕುಮಾರ್ ಅವರೊಂದಿಗೆ ಹಾಡುವ ಸಂದರ್ಭದಲ್ಲಿ ಡಾ ಎಸ್. ಪಿ. ಬಾಲಸುಬ್ರಮಣ್ಯಂ ಅವರು ನಾಚಿ ಮೊಗ್ಗಾಗುತ್ತಿದ್ದರು. ಹಾಡು ಧ್ವನಿ ಮುದ್ರಣದ ನಂತರ, ಸಹಜ ಸ್ಥಿತಿಗೆ ಮರಳುತ್ತಿದ್ದರು.

**ಎಫ್ ಎಂ ರೇಡಿಯೋಗಳ ಮೇಲೆ ಮುನಿಸು**

ಬಾಲು ಅವರಿಗೆ ಎಫ್ ಎಂ ರೇಡಿಯೋಗಳ ಮೇಲೆ ಹೇಳ



For More Job News Visit: www.kpscvaani.com

ತೀರದ ಕೋಪವಿತ್ತು. ಹಾಡುಗಳನ್ನು ಪ್ರಸಾರ ಮಾಡುವ ಈ ರೇಡಿಯೋ ವಾಹಿನಿಗಳು ರಾಗಸಂಯೋಜನೆ ಮಾಡಿದ ಸಂಗೀತ ನಿರ್ದೇಶಕರ ಹೆಸರನ್ನು, ಗೀತ ರಚನಾಕಾರರ ಹೆಸರನ್ನು ಹಾಗೂ ಹಾಡು ಹಾಡಿದ ಗಾಯಕರ ಹೆಸರನ್ನು ಪ್ರಸಾರ ಮಾಡದಿರುವ ಬಗ್ಗೆ ಹಲವೊಮ್ಮೆ ಬಹಿರಂಗವಾಗಿಯೇ ಅಸಮಾಧಾನವನ್ನು ಹೊರಹಾಕಿದ್ದರು. ಈ ಕಾರಣಕ್ಕಾಗಿಯೇ ಅವರು ಆಕಾಶವಾಣಿಯನ್ನು ತುಂಬಾ ಮೆಚ್ಚಿಕೊಂಡಿದ್ದರು.

**ಯೇಸುದಾಸ್ ಅವರಿಗೆ ಪಾದಪೂಜೆ**

ತಮ್ಮ ಎಪ್ಪತ್ತನೇ ಹುಟ್ಟು ಹಬ್ಬದ ಸಂದರ್ಭದಲ್ಲಿ ಗಾನ ಋಷಿ ಡಾ ಕೆ. ಜೆ. ಯೇಸುದಾಸ್ ಅವರಿಗೆ ಪಾದಪೂಜೆ ಮಾಡಿ ಧನ್ಯತಾಭಾವಕ್ಕೆ ಒಳಗಾಗಿದ್ದ ಬಾಲು ಅವರ ಸರಳತೆಗೆ ಯೇಸುದಾಸ್ ಅವರು ಮಂತ್ರಮುಗ್ಧರಾಗಿದ್ದರು.

**ಅಯ್ಯಯ್ಯಪ್ಪೋ**

ಕೇರಳದ ಶಬರಿಮಲೆಗೆ ತೆರಳಬೇಕೆಂದು ಬಯಸಿದ ಡಾ ಎಸ್. ಪಿ. ಬಾಲಸುಬ್ರಮಣ್ಯಂ ಅವರು ತಮ್ಮ ಸ್ಥೂಲಕಾಯದ ಕಾರಣ ಡೋಲಿಯನ್ನು ಆಶ್ರಯಿಸಬೇಕಾಯಿತು. ದೇವರ ದರ್ಶನ ಮಾಡಿದ ಕೂಡಲೇ ದೇವಾಲಯದ ಆವರಣದಲ್ಲಿದ್ದ ಡೋಲಿ ಹೊರುವವರ ಕಾಲು ಮುಟ್ಟಿ ನಮಸ್ಕರಿಸಿದ ಬಾಲು ಅವರ ಸರಳತೆಗೆ ಡೋಲು ಹೊರುವವರು ಅಯ್ಯಯ್ಯಪ್ಪೋ ಎಂದು ಬೆಚ್ಚಿಬಿದ್ದರಲ್ಲದೆ, ಹಣ ಕೊಟ್ಟು ತೆರಳುವ ಅಥವಾ ಕೊಡುವ ಹಣಕ್ಕೆ ಚೌಕಾಸಿ ಮಾಡುವ ಭಕ್ತರನ್ನು ಕಂಡಿದ್ದರೇ ಹೊರತು ತಮ್ಮ ಕಾಲು ಮುಟ್ಟಿ ನಮಸ್ಕರಿಸಿದ ಹೃದಯವಂತ ವ್ಯಕ್ತಿಯನ್ನು ಅವರು ತಮ್ಮ ಜೀವಮಾನದಲ್ಲೇ ಎಂದೂ ಕಂಡಿರಲಿಲ್ಲ.

**ಬತ್ತಳಿಕೆಯಲ್ಲಿ ಪ್ರಶಸ್ತಿಗಳು ಬಿರುದುಗಳು**

ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳಲ್ಲಿ ಆರು ಬಾರಿ ಅತ್ಯುತ್ತಮ ಹಿನ್ನೆಲೆ ಗಾಯಕ ಪ್ರಶಸ್ತಿಗೆ ಭಾಜನರಾದ ಎಸ್. ಪಿ. ಬಾಲಸುಬ್ರಮಣ್ಯಂ ಅವರು ನಾಲ್ಕು ಭಾಷೆಗಳಲ್ಲಿನ ತಮ್ಮ ಗಾಯನಕ್ಕೆ ಈ ಪ್ರಶಸ್ತಿಯನ್ನು ಪಡೆದಿದ್ದರು. ಆಂಧ್ರಪ್ರದೇಶದ ನಂದಿ ಪ್ರಶಸ್ತಿ, ಎನ್. ಟಿ. ರಾಮರಾವ್ ಪ್ರಶಸ್ತಿ, ತಮಿಳುನಾಡಿನ ಕಲೈ ಮಾಮಣಿ ಪ್ರಶಸ್ತಿಗಳು ಬಾಲು ಅವರನ್ನು ಅರಸಿ ಬಂದಿದ್ದವು.

ಅಂದಿನ ಬಿ. ಎಸ್. ಯಡಿಯೂರಪ್ಪ ಸರ್ಕಾರವು ತಮ್ಮನ್ನು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಿದಾಗ ಬಾಲು ಅವರು ಹಿರಿಹಿರಿ ಹಿಗ್ಗಿದ್ದರು. ತಮ್ಮ ಕಾಲು ಫ್ರ್ಯಾಕ್ಚರ್ ಆಗಿದ್ದರಿಂದ ಅಂದಿನ ರಾಷ್ಟ್ರಪತಿ ಕೆ. ಆರ್. ನಾರಾಯಣ್ ಅವರಿಂದ ಪದ್ಮಶ್ರೀ ಪ್ರಶಸ್ತಿಯನ್ನು ಪಡೆಯುವಾಗ ಎಸ್. ಪಿ. ಬಾಲಸುಬ್ರಮಣ್ಯಂ ಅವರು ವೀಲ್ ಚೇರ್‌ನಲ್ಲಿ ಕುಳಿತೇ ಪದ್ಮಶ್ರೀ ಪ್ರಶಸ್ತಿಯನ್ನು ಪಡೆಯಬೇಕಾಯಿತು. ಭಾರತದ ಪ್ರಥಮ ಮಹಿಳಾ ರಾಷ್ಟ್ರಪತಿ ಪ್ರತಿಭಾ ದೇವಿಸಿಂಗ್ ಪಾಟೀಲ್ ಅವರಿಂದ ಪದ್ಮಭೂಷಣ ಪ್ರಶಸ್ತಿ ಪಡೆದೆ ಎಂಬುದನ್ನು ಸದಾ ಸ್ಮರಿಸುತ್ತಿದ್ದರು.

ಬಾಲು ತಾವು ಎಂದೂ ಉತ್ತುಂಗದಲ್ಲಿರಲು ಬಯಸುತ್ತಿರಲಿಲ್ಲ. ಉತ್ತುಂಗದಲ್ಲಿ ಸ್ಥಳ ಕಡಿಮೆ ಇರುತ್ತದೆ ಎಂಬುದು ಅವರ ವಾದ. ಮಧ್ಯದಲ್ಲಿದ್ದರೆ, ಕೆಲವರನ್ನು ಮೇಲಕ್ಕೆ ಎತ್ತಲು ಸಹಾಯಕಾರಿಯಾಗಬಹುದು. ಅಂತೆಯೇ, ಕೆಳಗೆ ಬೀಳುವವರ ಕೈ ಹಿಡಿಯಲೂಬಹುದು ಎಂಬುದು ಬಾಲು ಅವರ ತರ್ಕ.

**ಹಾಡು ಎಂಬುದು ತಪಸ್ಸಿನಂತೆ. ಯಾರು ಬೇಕಾದರೂ ಹಾಡಲಿ. ಯಾವ ಭಾಷೆಯವರು ಬೇಕಾದರೂ ಮತ್ತೊಂದು ಭಾಷೆಯಲ್ಲಿ ಹಾಡಲಿ. ನನ್ನ ಅಭ್ಯಂತರವಿಲ್ಲ. ಆದರೆ, ಹಾಡುವ ಮುನ್ನ ಅದರ ಭಾವ ಅರಿತು ಹಾಡುವುದು ಮುಖ್ಯ ಅಷ್ಟೇ ಅಲ್ಲ. ಅಕ್ಷರ ಮತ್ತು ಸ್ವರದ ಉಚ್ಚಾರಣೆಯೂ ಅತೀ ಮುಖ್ಯ ಎಂದು ಭಾವಿಸಿದ್ದವರು ಎಸ್. ಪಿ. ಬಿ.**

ಲತಾ ಮಂಗೇಷ್ಕರ್ ಅವರ ಮಾತನ್ನು ಧಿಕ್ಕರಿಸಿ ಧ್ವನಿ ಪೆಟ್ಟಿಗೆಯ ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದು ಬಾಲು ಅವರ ಸಾಹಸಗಳಲ್ಲೊಂದು. ಆದರೆ, ಈ ಸಾಹಸದಲ್ಲಿ ಅವರು ಗೆದ್ದದ್ದು ಅವರ ಅದೃಷ್ಟ. ಐಸ್ ಕ್ರೀಂ ತಿನ್ನುವ ಏಕೈಕ ಗಾಯಕ ಎಂಬ ಖ್ಯಾತಿಗೂ ಒಳಪಟ್ಟಿದ್ದು ಬಾಲು ಅವರ ಹೆಮ್ಮೆಗಳಲ್ಲೊಂದು. ಬಿಸಿ ನೀರು ಅಥವಾ ತಣ್ಣೀರು ಎಂಬ ಬೇಧವಿಲ್ಲದೆ ನೀರು ಸೇವನೆ ಮಾಡುತ್ತಿದ್ದ ಬಾಲು ಅವರು ಇತರ ಗಾಯಕರ ಸೋಜಿಗಕ್ಕೆ ಕಾರಣಗಾಗಿದ್ದರು.

**ಅವಳಿ-ಜವಳಿ ತಾತ**

ಮಗಳು ಪಲ್ಲವಿಗಾಗಿ ಧೂಮಪಾನ ತೊರೆದಿದ್ದ ಬಾಲು ಅವರು ತಮ್ಮ ಪುತ್ರ ಚರಣ್ ಅವರನ್ನು ಗಾಯಕನಾಗಿ ಕಂಡು ಅಭಿಮಾನಪಟ್ಟಿದ್ದರು. ಮಗಳು ಹಾಗೂ ಮಗ ಇಬ್ಬರಿಗೂ ಅವಳಿ-ಜವಳಿ ಮಕ್ಕಳಾದಾಗ ಬಾಲು ಅವರು ತಮ್ಮನ್ನು ತಾವೇ ಅವಳಿ-ಜವಳಿ ತಾತ ಎಂದು ಬಣ್ಣಿಸಿಕೊಂಡು ಸಂಭ್ರಮಿಸಿದ್ದುಂಟು.

ತಮ್ಮ ಮನೆಯಿಡೀ ವಸ್ತು ಸಂಗ್ರಹಾಲಯದ ಮಾದರಿಯಲ್ಲಿ ಪ್ರಶಸ್ತಿ ಫಲಕಗಳನ್ನು ಇಟ್ಟುಕೊಂಡಿದ್ದ ಬಾಲು ಅವರು ಅದನ್ನು ಮೂಲೆಗುಂಪು ಮಾಡಿದರೆ, ಅಭಿಮಾನಿಗಳಿಗೆ ಅಗೌರವ ತೋರಿದಂತೆ ಎಂದು ಭಾವಿಸಿದ್ದರು.

**ಕನ್ನಡದ ಹಾಡೇ ಕೊನೆಯ ಹಾಡು**

ಎಸ್. ಪಿ. ಬಾಲಸುಬ್ರಮಣ್ಯಂ ಅವರು ಹಾಡಿದ ಕೊನೆಯ ಹಾಡು ಕನ್ನಡದ್ದು ! ಚೆನ್ನೈನ ಎಂ ಜಿ ಎಂ ಆಸ್ಪತ್ರೆಯ ಮಂಚದ ಮೇಲೆ ಕುಳಿತು ಹೆಸರಾಂತ ಕವಿ – ಚಿತ್ರ ಸಾಹಿತಿ ಜಯಂತ್ ಕಾಯ್ಕಿಣಿ ಅವರು ಬರೆದ ಕೋವಿಡ್‌ಗೆ ಹೆದರಬೇಡಿ ಎಂಬ ಗೀತೆ ಅವರ ಕೊನೆಯ ಗೀತೆ. ಮುಂದಿನ ಜನ್ಮ ಇದ್ದರೆ, ಕನ್ನಡ ನಾಡಿನಲ್ಲಿಯೇ ಹುಟ್ಟಲು ಇಚ್ಛಿಸುತ್ತೇನೆ ಎಂಬ ಬಾಲು ಅವರ ಭಾವುಕ ಹೇಳಿಕೆ ಕರ್ನಾಟಕದ ಬಗೆಗಿನ ಅವರ ಪ್ರೀತಿಗೆ ಮತ್ತು ವಿಶ್ವಾಸಕ್ಕೆ ಧ್ಯೋತಕ.

ಎಸ್. ಪಿ. ಬಾಲಸುಬ್ರಮಣ್ಯಂ ಅವರು ಇಲ್ಲ ಎಂಬ ಭಾವನೆ ಯಾರಲ್ಲೂ ಇಲ್ಲ. ಇದೇ ಸೆಪ್ಟೆಂಬರ್ 25 ರಂದು ಬಾಲು ಅವರು ಚೆನ್ನೈನಲ್ಲಿ ಇಹಲೋಕ ತ್ಯಜಿಸಿದ್ದರೂ, ತಮ್ಮ ಐದು ದಶಕಗಳ ಇಂಪಾದ ಹಾಡುಗಳಿಂದ ಬಾಲು ಅವರು ಮುಂದಿನ ಐದು ಶತಮಾನಗಳು ನಮ್ಮೊಡನೆಯೇ ಇರುತ್ತಾರೆ ಎಂಬ ನಂಬಿಕೆ ಎಲ್ಲರಲ್ಲಿದೆ. ■



For More Job News Visit: www.kpscvaani.com



# ಮಾದಕ ವಸ್ತು ವ್ಯಸನ ತಡೆಗೆ ಅರಿವು ಮೂಡಿಸುವುದೇ ಮಾರ್ಗ

**ದೇಶಾದ್ಯಂತ ಸುದ್ದಿ ಮಾಧ್ಯಮಗಳಲ್ಲಿ ಕೋವಿಡ್-19 ಜೊತೆಗೆ, ಇದೀಗ ರಾಜ್ಯ ಮತ್ತು ರಾಷ್ಟ್ರದಲ್ಲಿ ಮಾದಕ ವಸ್ತುಗಳ ಪ್ರಕರಣದ್ದೇ ಅತಿ ಹೆಚ್ಚು ಚರ್ಚೆಯಾಗುತ್ತಿರುವ ವಿಷಯ. ಮಾದಕ ವಸ್ತುಗಳ ವ್ಯಸನಕ್ಕೆ ಹದಿಯರೆಯದ ಯುವಜನರೇ ಹೆಚ್ಚು ಒಳಗಾಗುತ್ತಿರುವುದು ವಿಷಾದನೀಯವಾದುದು. ಈ ವ್ಯಸನದಿಂದ ಅವರನ್ನು ಬಿಡಿಸಬೇಕಾದರೆ ಅವರಿಗೆ ಮಾದಕ ವಸ್ತುಗಳಿಂದ ಆಗುವ ದುಷ್ಪರಿಣಾಮದ ಕುರಿತು ಅರಿವು ಮೂಡಿಸಬೇಕು.**

ಡಾ. ಎಸ್.ಬಿ. ಬಸೆಟ್ಟಿ

**ಭಾ**ರತದಲ್ಲಿ ಅಮಲು ಪದಾರ್ಥಗಳ ಹಾವಳಿ ಹೊಸದಲ್ಲವಾದರೂ, ಇತ್ತೀಚೆಗೆ ಸೆಲೆಬ್ರಿಟಿಗಳ ಬಂಧನ ಹಾಗೂ ವಿಚಾರಣೆಯಿಂದಾಗಿ ಅದು ಹೆಚ್ಚು ಗಮನ ಸೆಳೆಯುತ್ತಿದೆ. ಆದರೆ ಇಲ್ಲಿ ಮೇಲ್ನೋಟಕ್ಕೆ ಕಾಣಿಸುತ್ತಿರುವುದು ಸಮುದ್ರದ ಮೇಲಿನ ನೀರ್ಗಲ್ಲಿನ ತುಣುಕಷ್ಟೇ. ಈಗ ಸಿಕ್ಕಿಬಿದ್ದಿರುವವರು ಡ್ರಗ್ಸ್ ಬಳಸುವ ಕೊನೆಯ ಕೊಂಡಿಗಳು. ಡ್ರಗ್ಸ್ ತಯಾರಿಸುವವರು, ಸಂಗ್ರಹಿಸುವವರು, ಸಾಗಿಸುವವರು, ಗ್ರಾಹಕರನ್ನು ಸೃಷ್ಟಿಸುವವರು ಈ ಜಾಲದಲ್ಲಿದ್ದಾರೆ. ಕೆಲವೊಂದು ಮಾದಕ ವಸ್ತುಗಳು ದೇಶೀಯವಾಗಿಯೇ ಬೆಳೆದರೆ, ಇನ್ನು ಕೆಲವು ಹೊರ ದೇಶಗಳಿಂದ ಬರುತ್ತವೆ.

ಮುಖ್ಯವಾಗಿ ಹೆರಾಯಿನ್‌ನ ಮೂಲ ಅಫಘಾನಿಸ್ತಾನ ಮತ್ತು ಪಾಕಿಸ್ತಾನದ ಗುಡ್ಡಗಾಡು ಪ್ರದೇಶ. ಅಲ್ಲಿನ ಹೆರಾಯಿನ್ ಗುಣಮಟ್ಟದ್ದು ಎಂಬ ಕಾರಣಕ್ಕೆ ಜಗತ್ತಿನಾದ್ಯಂತ ಬೇಡಿಕೆ ಇದೆಯಂತೆ. ಸೆಲೆಬ್ರಿಟಿಗಳಿಂದ ಹಿಡಿದು ಮಕ್ಕಳು, ಸಾವಿರಾರು ಯುವಜನ ಈ ವ್ಯಸನಕ್ಕೆ ಬಲಿಯಾಗುತ್ತಿದ್ದಾರೆ. ಹಾಗಾಗಿ ಮಾದಕ ವಸ್ತುಗಳ ಸೇವನೆಯಿಂದಾಗುವ ಅಪಾಯದ ಕುರಿತು ಜಾಗೃತಿ ಮೂಡಿಸುವ ಕಾರ್ಯ ತೀವ್ರಗೊಳ್ಳಬೇಕಿದೆ.

ಇತ್ತೀಚಿನ ದಿನಗಳಲ್ಲಿ 14 ರಿಂದ 16 ವರ್ಷ ವಯಸ್ಸಿನ ಮಕ್ಕಳೂ ಮಾದಕ ವಸ್ತುಗಳ ಚಟಕ್ಕೆ ಬಲಿಯಾಗುತ್ತಿದ್ದಾರೆ. ಆರಂಭದಲ್ಲಿ ಬೀಡಿ, ಸಿಗರೇಟ್, ಗಾಂಜಾದಂತಹ ವಸ್ತುಗಳಿಂದ ಪ್ರಾರಂಭಿಸಿ ನಂತರ ನಾರ್ಕೊಟಿಕ್ ಡ್ರಗ್ಸ್‌ಗೆ ದಾಸರಾಗುತ್ತಾರೆ. ಭಾರತದಂತಹ ದೇಶದಲ್ಲಿ ಸಿನಿಮಾ ತಾರೆಯರು, ಸೆಲೆಬ್ರೆಟಿಗಳು ಹಾಗೂ ಹೆಣ್ಣುಮಕ್ಕಳು ಸಹ



For More Job News Visit: www.kpscvaani.com

ಮಾದಕ ವಸ್ತುಗಳಿಗೆ ಶರಣಾಗುತ್ತಿರುವುದು ಆತಂಕದ ಸಂಗತಿ. ಈ ಪಿಡುಗನ್ನು ಬೇರು ಸಮೇತ ಕಿತ್ತು ಹಾಕುವ ಅಗತ್ಯವಿದೆ. ಮಾದಕ ವಸ್ತುಗಳ ಸೇವನೆಯು ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ನಗರಗಳಷ್ಟೇ ಅಲ್ಲ, ಗ್ರಾಮೀಣ ಪ್ರದೇಶಗಳಲ್ಲೂ ಹೆಚ್ಚಿನ ಮಂದಿ ವ್ಯಸನಿಗಳಾಗುತ್ತಿದ್ದಾರೆ. ಆದ್ದರಿಂದ ಮಾನಸಿಕ ರೋಗ ಭೇದಿಸುವ ಮುನ್ನವೇ ಮುನ್ನೆಚ್ಚರಿಕೆ ವಹಿಸಬೇಕಿದೆ. ಡ್ರಗ್ಸ್ ಸೇವಿಸುವವರನ್ನು ದೂಷಿಸಿ ಪ್ರಯೋಜನವಿಲ್ಲ. ಬದಲಿಗೆ ಡ್ರಗ್ಸ್ ಬಳಸದಂತೆ ಅರಿವು ಮೂಡಿಸಬೇಕು. ಡ್ರಗ್ಸ್ ವ್ಯಸನಿಗಳಿಗೆ ಮನೋವೈದ್ಯರಿಂದ ಕೌನ್ಸಲಿಂಗ್ ಕೊಡಿಸಬೇಕು. ಆನ್‌ಲೈನ್‌ನಲ್ಲಿ ಮಾರಾಟವಾಗುವ ಮಾದಕ ವಸ್ತುಗಳ ಮೇಲೆ ನಿಗಾವಹಿಸಬೇಕು. ಶಾಲೆಗಳ ಬಳಿ ತಂಬಾಕು, ಬೀಡಿ, ಸಿಗರೇಟು, ಮದ್ಯದ ಅಂಗಡಿಗಳು ಇಲ್ಲದಂತೆ ನೋಡಿಕೊಳ್ಳಬೇಕು. ಪೋಷಕರು ವ್ಯಸನಮುಕ್ತರಾಗಿ ಮಕ್ಕಳಿಗೆ ಮಾದರಿಯಾಗಬೇಕು.

ಮಹಾತ್ಮ ಗಾಂಧೀಜಿಯವರು ಜನರು ಬಯಸುವ ಹಾನಿಕಾರಕ ಮತ್ತು ಅನಾವಶ್ಯಕ ಮಾದಕ ವಸ್ತುಗಳನ್ನು ವಿರೋಧಿಸುತ್ತಿದ್ದರು. ಅವರು ತಂಬಾಕು ಮತ್ತು ಮದ್ಯವನ್ನು ಜನರ ಆರೋಗ್ಯಕ್ಕೆ ಅತ್ಯಂತ ಹಾನಿಕಾರಕ ವಸ್ತುಗಳೆಂದು ಪರಿಗಣಿಸಿದ್ದರು. ಜೊತೆಗೆ ಚಹಾ ಮತ್ತು ಕಾಫಿಯನ್ನು ಕೂಡಾ ಅನಾವಶ್ಯಕ ವಸ್ತುಗಳೆಂದು ಭಾವಿಸಿದ್ದರು. 'ಬೆಂಕಿ ದೇಹವನ್ನು ನಾಶ ಮಾಡಿದರೆ, ಮದ್ಯ ಮತ್ತು ಮಾದಕ ವಸ್ತು ದೇಹ ಮತ್ತು ಆತ್ಮ ಎರಡನ್ನೂ ನಾಶ ಮಾಡುತ್ತದೆ' ಎಂದು ಗಾಂಧೀಜಿ ಹೇಳಿದ್ದಾರೆ. ಅಲ್ಲದೆ ವೈದ್ಯರು, ಮದ್ಯಪಾನಿ ಮತ್ತು ಅಫೀಮು ವ್ಯಸನಿಗಳನ್ನು ಈ ಶಾಪದಿಂದ ಹೊರತರುವ ದಾರಿಗಳನ್ನು ಕಂಡುಹಿಡಿಯಬೇಕು. ಪ್ರೀತಿಯಿಂದ ಈ ವ್ಯಸನಿಗಳನ್ನು ತಮ್ಮ ಮಾತು ಕೇಳುವಂತೆ ಮಾಡಿ ಅದರ ಸೇವನೆಯಿಂದಾಗುವ ಕೆಡಕನ್ನು ಅವರಿಗೆ ಮನದಟ್ಟು ಮಾಡಿ ಕೆಟ್ಟ ಚಟವನ್ನು ಬಿಡುವಂತೆ ಮನವರಿಕೆ ಮಾಡಬೇಕು ಎಂದಿದ್ದರು.

ಮಾದಕ ವಸ್ತುಗಳ ಅವಶ್ಯಕತೆ ನಮ್ಮ ಶರೀರಕ್ಕೆ ಖಂಡಿತಾ ಇಲ್ಲ. ಇವುಗಳಿಂದ ಶರೀರದ ಆರೋಗ್ಯ ಹಾಳಾಗಿ

**ಡ್ರಗ್ಸ್ ಸೇವಿಸುವವರನ್ನು ದೂಷಿಸಿ ಪ್ರಯೋಜನವಿಲ್ಲ. ಬದಲಿಗೆ ಡ್ರಗ್ಸ್ ಬಳಸದಂತೆ ಅರಿವು ಮೂಡಿಸಬೇಕು. ಡ್ರಗ್ಸ್ ವ್ಯಸನಿಗಳಿಗೆ ಮನೋವೈದ್ಯರಿಂದ ಕೌನ್ಸಲಿಂಗ್ ಕೊಡಿಸಬೇಕು. ಆನ್‌ಲೈನ್‌ನಲ್ಲಿ ಮಾರಾಟವಾಗುವ ಮಾದಕ ವಸ್ತುಗಳ ಮೇಲೆ ನಿಗಾವಹಿಸಬೇಕು. ಶಾಲೆಗಳ ಬಳಿ ತಂಬಾಕು, ಬೀಡಿ, ಸಿಗರೇಟು, ಮದ್ಯದ ಅಂಗಡಿಗಳು ಇಲ್ಲದಂತೆ ನೋಡಿಕೊಳ್ಳಬೇಕು. ಪೋಷಕರು ವ್ಯಸನಮುಕ್ತರಾಗಿ ಮಕ್ಕಳಿಗೆ ಮಾದರಿಯಾಗಬೇಕು.**



ಆರ್ಥಿಕವಾಗಿ ಸಂಸಾರ ಸರ್ವನಾಶವಾಗುತ್ತದೆ. ಅಗೌರವಯುತ ಬಾಳು ದಕ್ಷತೆಗೆ ಕುಂದು ಮತ್ತು ದೇಶದ ಗೌರವಕ್ಕೆ ಚ್ಯುತಿ ತರುತ್ತದೆ. ಇದಕ್ಕೆ ದಾಸನಾದವನು ತನ್ನ ಮತ್ತು ಸಂಸಾರದ ಮಾನ ಮರ್ಯಾದೆಯನ್ನು ಬೀದಿಯಲ್ಲಿ ಹರಾಜು ಹಾಕುತ್ತಾನೆ. ಈ ಮಾದಕ ವಸ್ತುಗಳನ್ನು ದೇಶದಿಂದ ಸಂಪೂರ್ಣವಾಗಿ ಪ್ರತಿಬಂಧಿಸಬೇಕೆಂಬುದು ಗಾಂಧೀಜಿಯವರ ಅದಮ್ಯ ಕನಸಾಗಿತ್ತು.

ಒಂದು ಅವಿವೇಕದ ವಾದವನ್ನು ಪ್ರತಿಪಾದಿಸುವವರು ಇದ್ದಾರೆ. ಸ್ವಲ್ಪ ಮದ್ಯಪಾನ ಮಾಡುವುದು ಆರೋಗ್ಯಕ್ಕೆ ಒಳ್ಳೆಯದು ಎನ್ನುತ್ತಾರೆ. ಸರ್ವರೋಗಕ್ಕೂ ಸರಾಯಿ ಮದ್ದು ಎನ್ನುತ್ತಾರೆ. ಇಂದಿನ ಜಗತ್ತಿಗೆ ಸವಾಲಾಗಿರುವ ಮಹಾಮಾರಿ ಕೋವಿಡ್-19 ರೋಗಕ್ಕೂ ಸರಾಯಿ ಮದ್ದು ಎನ್ನುವವರಿದ್ದಾರೆ. ಆದರೆ ಈ ವಾದಕ್ಕೆ ಹುರುಳಿಲ್ಲ. ಪಾರ್ಸಿ ಜನಾಂಗದವರು ಹೆಂಡ ಕುಡಿಯುವುದನ್ನು ಒಳ್ಳೆಯದೆಂದು ಪ್ರತಿಪಾದಿಸುತ್ತಿದ್ದರು. ಇದು ಮಾದಕ ವಸ್ತುವಾದರೂ ಆಹಾರವೂ ಸಹ ಆಗಬಲ್ಲದು ಎಂದು ಹೇಳುತ್ತಿದ್ದರು. ಆದರೆ ತಜ್ಞರ ಪ್ರಕಾರ ಇದು ಸತ್ಯವಲ್ಲ.

'ನೀರಾ' ಭಟ್ಟಿ ಇಳಿಸಿದ ತಕ್ಷಣ ಮದ್ಯವಲ್ಲ. ನಿಜ ಅದು ಒಂದು ಆಹಾರ. ಇದನ್ನು ಕುಡಿದರೆ ಮಲಬದ್ಧತೆ ಇರುವುದಿಲ್ಲವೆಂದು ಕೇಳಿ ಗಾಂಧೀಜಿಯವರೇ ಕೆಲವು ದಿನಗಳ ಕಾಲ 'ನೀರಾ' ಕುಡಿಯಲು ಪ್ರಾರಂಭಿಸಿದಾಗ ಅವರಿಗೆ ಅದರ ಉಪಯುಕ್ತತೆಯ ಅರಿವಾಗುತ್ತದೆ. ಪಾಮ್ ಜಾತಿಗೆ ಸೇರಿದ ತೆಂಗು, ಈಚಲು, ಖರ್ಜೂರ ಇತ್ಯಾದಿಗಳಲ್ಲಿ ಕಾಂಡ ಕೊರೆದು ತೆಗೆಯುವ ಬಣ್ಣವಿಲ್ಲದ ನೀರಿನಂತಹ ರಸಕ್ಕೆ ಅಥವಾ ಹಾಲಿಗೆ 'ನೀರಾ' ಎಂದು ಕರೆಯುತ್ತಾರೆ. ಭಟ್ಟಿ ಇಳಿಸಿದ ಕೆಲ ಸಮಯದ ನಂತರ 'ನೀರಾ' ಹುಳಿಯಾಗಿ ಹೆಂಡವಾಗುತ್ತದೆ.

ರಷ್ಯಾ ದೇಶದ ಲಿಯೋ ಟಾಲ್‌ಸ್ಟಾಯ್ ಎಂಬ ಮಹಾಶಯ ತಾನೇ ಈ ಚಟಕ್ಕೆ ಚಿಕ್ಕ ವಯಸ್ಸಿನಲ್ಲಿಯೇ ಬಲಿಯಾಗಿ ನಂತರ ತ್ಯಜಿಸಿ, ಹೊಗೆಸೊಪ್ಪಿನ ಯಾವುದೇ ರೂಪದ ಸೇವನೆ ಎಲ್ಲಾ ಚಟಗಳಿಗಿಂತ ಅತ್ಯಂತ ದುಷ್ಟ ಚಟವೆಂದಿದ್ದನು.

ಸಾಮಾನ್ಯವಾಗಿ ಹದಿಹರೆಯದವರು ಎರಡು ರೀತಿಯ ದುಶ್ಚಟಗಳಿಗೆ ಸಿಲುಕಿಕೊಳ್ಳುತ್ತಾರೆ. ಕೆಲವರು ಸಿಗರೇಟು, ಮದ್ಯಪಾನದ ಸುಳಿಗೆ ಬಿದ್ದರೆ, ಇನ್ನೂ ಕೆಲವರು ಮಾದಕ ವಸ್ತುಗಳ ದಾಸರಾಗುತ್ತಾರೆ. ಸಿಗರೇಟು, ಮದ್ಯಪಾನದ



For More Job News Visit: www.kpscvaani.com



**ಮಾದಕ ವಸ್ತುಗಳ ಸೇವನೆ ಸಾಮಾಜಿಕ ಪಿಡುಗಾಗಿ ಪರಿಣಮಿಸುತ್ತಿದ್ದು, ಅದನ್ನು ಸೇವಿಸುವವರಲ್ಲಿ ಶೇ.90 ರಷ್ಟು ಯುವ ಜನರೇ ಇದ್ದಾರೆ. ಇದು ಆಘಾತಕಾರಿ ಬೆಳವಣಿಗೆಯಾಗಿದೆ. ಇದನ್ನು ಹೋಗಲಾಡಿಸಲು ವ್ಯಾಪಕ ಜಾಗೃತಿ ಅಭಿಯಾನ ಆಗಬೇಕಿದೆ. ಅಲ್ಲದೇ, ಅದನ್ನು ಬೇರು ಸಮೇತ ಕಿತ್ತೆಸೆಯಲು ಸಮಾಜ, ಸಾರ್ವಜನಿಕರು, ಪೊಲೀಸರು ಹಾಗೂ ಸಂಘ-ಸಂಸ್ಥೆಗಳ ಸಹಕಾರ ಅಗತ್ಯವಾಗಿದೆ.**

ಸುಳಿಯಲ್ಲಿ ಬಿದ್ದವರು ಚಟವನ್ನು ತುಂಬ ದಿನ ರಹಸ್ಯವಾಗಿ ಕಾಪಾಡಿಕೊಳ್ಳಲು ಸಾಧ್ಯವಿಲ್ಲ. ಆದರೆ ಮಾದಕ ದ್ರವ್ಯದ ವ್ಯಸನ ಹಾಗಲ್ಲ. ಮಕ್ಕಳು ಡ್ರಗ್ ದಾಸರಾಗಿ ಅತಿರೇಕಕ್ಕೆ ಹೋಗುವವರೆಗೂ ಪೋಷಕರಿಗೆ ತಮ್ಮ ಮಕ್ಕಳು ಮಾದಕ ವ್ಯಸನಿ ಎಂಬ ಸಣ್ಣ ಸುಳಿವು ಕೂಡ ಸಿಕ್ಕಿರುವುದಿಲ್ಲ. ಸೈಲೆಂಟ್ ಕಿಲ್ಲರ್‌ನಂತೆ ತನ್ನ ಚಟಕ್ಕೆ ಬಿದ್ದವರನ್ನು ಅಪೋಶನ ತೆಗೆದುಕೊಂಡಿರುತ್ತದೆ. ಮದ್ಯವ್ಯಸನವು ಪಾತಕ ಕೃತ್ಯಗಳನ್ನು ಮಾಡಲು ಪ್ರೇರೇಪಿಸುತ್ತದೆಂದು ತಜ್ಞರು ಸಾಬೀತು ಪಡಿಸಿದ್ದಾರೆ. ಹಾಗಾಗಿ ಯುವ ಸಮುದಾಯದ ಪಾಲಿಗೆ ಮಾದಕ ದ್ರವ್ಯ ಯಾವತ್ತಿಗೂ ಅತಿಘೋರ ಶಾಪವಿದ್ದಂತೆ.

ವಾಸ್ತವವಾಗಿ ಮದ್ದು ಎಂದರೇನು? ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಯಾವುದೇ ಪದಾರ್ಥವನ್ನು ಜೀವಿಯೊಂದು ಸೇವಿಸಿದಾಗ ಅದರ ಸ್ವಾಭಾವಿಕ ಕ್ರಿಯೆಗಳಲ್ಲಿ ವ್ಯತ್ಯಾಸ ಉಂಟು ಮಾಡುವ ಸಾಮರ್ಥ್ಯ ಹೊಂದಿದ್ದರೆ ಅದನ್ನು ಮದ್ದು ಎಂದು ಕರೆಯಲಾಗುತ್ತದೆ.

'ನಾರ್ಕೋಟಿಕ್ ಡ್ರಗ್ಸ್' ಇಂದು ಬಹಳಷ್ಟು ಚರ್ಚೆಗೆ ಗ್ರಾಸವಾಗುತ್ತಿರುವ ವಿಷಯವಾಗಿದೆ. ಸುಂಕದ ಇಲಾಖೆಯವರು ವಿಮಾನ ನಿಲ್ದಾಣಗಳಲ್ಲಿ ಅವುಗಳನ್ನು ವಶಪಡಿಸಿಕೊಂಡ ಸುದ್ದಿ ಸಮಾಚಾರಗಳನ್ನು ಪತ್ರಿಕೆಗಳಲ್ಲಿ ಆಗಾಗ್ಗೆ ಓದುತ್ತೇವೆ. ಹೆಚ್ಚೆಚ್ಚು ಯುವಜನರು ಅದರ ಕಪಿಮುಷ್ಟಿಗೆ ಸಿಕ್ಕಿಹಾಕಿಕೊಳ್ಳುತ್ತಾರೆ. ಮಾದಕವಸ್ತುಗಳ ಕಳ್ಳ ಸಾಗಾಣಿಕೆ ಮತ್ತು ಅವುಗಳ ದುರ್ಬಳಕೆಯು ಇಂದು ಬೃಹದಾಕಾರವಾಗಿ ತಲೆಯೆತ್ತಿ ನಿಂತಿದೆ. ಆಗ್ನೇಯ ಏಷ್ಯಾದ ರಾಷ್ಟ್ರಗಳಾದ ಬರ್ಮಾ, ಥೈಲ್ಯಾಂಡ್, ಮತ್ತು ಲಾವೋಸ್ (ಸುವರ್ಣ ತ್ರಿಕೋಣ) ಮತ್ತು ಸನಿಹದ ಮಧ್ಯಪೂರ್ವ ದೇಶಗಳಾದ ಪಾಕಿಸ್ತಾನ, ಅಫಘಾನಿಸ್ತಾನ ಮತ್ತು ಇರಾನ್ (ಬಂಗಾರದ ಅರ್ಧಚಂದ್ರ) ಕೇಂದ್ರ ಕಾರ್ಯಸ್ಥಾನಗಳಾಗಿದ್ದು, ಭಾರತ ಅವುಗಳ ನಡುವೆ ಸ್ಯಾಂಡವಿಜ್ ನಂತೆ ಸೇರಿಕೊಂಡಿವೆ. ಹೀಗಾಗಿ ಭಾರತ ಮಾದಕ ವಸ್ತುಗಳ ಕಳ್ಳ ಸಾಗಾಣಿಕೆಯ ಪ್ರಮುಖ ಹೆದ್ದಾರಿಯಾಗಿ ಪರಿವರ್ತನೆಗೊಂಡಿದೆ.

ಸಿಸಿಬಿಯಲ್ಲಿ ಮಾದಕ ವಸ್ತುಗಳ ತನಿಖೆಗೆಂತಲೇ ನಾರ್ಕೋಟಿಕ್ ಎಂಬ ಪ್ರತ್ಯೇಕ ವಿಂಗ್ ಇರುತ್ತದೆ. ಭಾರತ ಸರ್ಕಾರದ ಪ್ರಮುಖ ಕಾನೂನಾದ ಎನ್.ಡಿ.ಪಿ.ಎಸ್. ಆ್ಯಕ್ಟ್ 1985 ಪ್ರಕಾರ ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೊ ಒಂದನ್ನು ಸ್ಥಾಪಿಸಲಾಗಿದೆ. ಅದರ ಮುಖ್ಯ ಕಚೇರಿ ದೆಹಲಿಯಲ್ಲಿ ಇದ್ದು, ಮುಂಬಯಿ, ಕೊಲ್ಕತ್ತ, ಚೆನ್ನೈ, ದೆಹಲಿ, ಜೋಧಪುರ ಮತ್ತು ವಾರಣಾಸಿಗಳಲ್ಲಿ 6 ವಲಯ ಕಚೇರಿಗಳಿವೆ. ಇಂಪಾಲ್ ನಲ್ಲಿ ಒಂದು ಪ್ರಾಂತೀಯ ಕಛೇರಿ ಇದೆ.

ಡ್ರಗ್ ಮಾಫಿಯಾದಿಂದ ಯುವಸಮುದಾಯವನ್ನು ಹಾಗೂ ಸಮಾಜವನ್ನು ರಕ್ಷಿಸುವ ಗುರುತರ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಈ ವಿಚಾರದಲ್ಲಿ ರಾಜಕೀಯ ಮಾಡದೇ ಹಾಗೂ ಪ್ರಚಾರ ಬಯಸದೇ ಪಕ್ಷಾತೀತವಾಗಿ ಕೈಜೋಡಿಸಿ ನೈಜ ಹೋರಾಟ ಮಾಡಬೇಕು. ಆ ಹೋರಾಟ ನಿರಂತರವಾಗಿದ್ದರೆ ಮಾತ್ರ ಡ್ರಗ್ ಮಾಫಿಯಾದ ವಿರುದ್ಧ ಜಯ ಸಾಧಿಸಬಹುದು.

**ಜೀವನವನ್ನು ಹಾಳು ಮಾಡುವ ವ್ಯಸನಕ್ಕೆ ಕಾರಣ ಮತ್ತು ಚಿಕಿತ್ಸೆ :**

ಮಾದಕ ದ್ರವ್ಯ ಚಟಕ್ಕೆ ಬೀಳು ಕಾರಣಗಳು ಬೇರೆ ಬೇರೆಯಾದ್ದರಿಂದ, ಅದರ ಮುಕ್ತಿಗಾಗಿ ಚಿಕಿತ್ಸೆ ತಕ್ಕನಾಗಿರಬೇಕಾದ್ದು ಸಹಜವೇ. ಆದರೆ ಯಾವ ಕಾರಣಕ್ಕೇ ಮಾದಕ ವಸ್ತುಗಳ ವ್ಯಸನಕ್ಕೆ ಒಳಗಾದರೂ, ಪರಿಹಾರದ ಮೂಲ ಸೂತ್ರಗಳು ಬೇರೆಯಾಗುವುದಿಲ್ಲ. ತಲೆನೋವು, ಹೊಟ್ಟೆನೋವುಗಳು ಯಾವ ಕಾರಣಕ್ಕೆ ಬಂದರೂ ಪ್ರಾಥಮಿಕ ಚಿಕಿತ್ಸಾ ಕ್ರಮ ಹೆಚ್ಚಿನ ಸಮಯದಲ್ಲಿ ಒಂದೇ ಆಗಿರುತ್ತದಲ್ಲ, ಹಾಗೆಯೇ ಇಲ್ಲೂ ಕೂಡ. ಆದರೆ, ಅನೇಕ ಸಂದರ್ಭಗಳಲ್ಲಿ ಸಾಧಾರಣವಾಗಿ ಕೊಡುವ ಚಿಕಿತ್ಸೆಯ ಜೊತೆಗೇ, ಜೀವನ ಶೈಲಿಯಲ್ಲಿನ ಮಾರ್ಪಾಟುಗಳ ಅಗತ್ಯವೂ ಇರುತ್ತದೆ. ಮಾದಕ ವಸ್ತುಗಳ ವಿಷಯದಲ್ಲಿಯೂ ಹಾಗೆಯೇ ಚಿಕಿತ್ಸೆಯಷ್ಟೇ ಪಥ್ಯವೂ, ಅನುಕೂಲಕರ ಪರಿಸರವೂ ಮುಖ್ಯ.

ಮಾದಕ ವಸ್ತುಗಳ ವ್ಯಸನದ ವಿಷಯದಲ್ಲಿ, ವಿಶ್ವದಾದ್ಯಂತ, ಅತ್ಯಂತ ಯಶಸ್ವಿಯಾಗಿರುವ ಚಿಕಿತ್ಸಾ ವಿಧಾನಗಳೆಂದರೆ, 'ಕಾಗ್ನಿಟಿವ್ ಥೆರಪಿ' ಮತ್ತು 'ಕೌನ್ಸಲಿಂಗ್'ಗಳು. ಸ್ಥೂಲವಾಗಿ ಹೇಳುವುದಾದರೆ 'ತಿಳುವಳಿಕೆ ಹೇಳುವುದು' ಅಥವಾ 'ಜಾಗೃತ ಗ್ರಹಿಕೆಗೆ ಬರುವಂತೆ ಮಾಡುವುದು' ಎಂದರ್ಥ. ಇದನ್ನು ಮನಃಶಾಸ್ತ್ರಜ್ಞರು ಅಥವಾ ನುರಿತ ಕೌನ್ಸಿಲರ್‌ಗಳು ಮಾಡಿದರೆ ಸೂಕ್ತ. ಆದರೆ, ನಮ್ಮ ದೇಶದಲ್ಲಿ ಯಾರನ್ನಾದರೂ ಮನಃಶಾಸ್ತ್ರಜ್ಞರ ಬಳಿಗೆ ಕರೆದುಕೊಂಡು ಹೋಗುವುದು ದೊಡ್ಡ ಹರಸಾಹಸ. "ಮೊದಲೇ ಡ್ರಗ್ಸ್ ಅಡಿಕ್ಟು, ಈಗ ತಲೆಯೂ ಸರಿಯಿಲ್ಲವಂತೆ," ಎಂದು ನೆರೆ ಸುತ್ತಮುತ್ತಲಿನವರು ಆಡಿಕೊಳ್ಳುವ ಭಯದಿಂದಾಗಿ ಚಿಕಿತ್ಸೆ ಕೊಡಿಸದೆ ಇದ್ದು ಬಿಡುವ ಸಂದರ್ಭಗಳೂ ಇವೆ. ಬೈದು ಬುದ್ಧಿ ಹೇಳುವುದು, ಕೂಡಿ ಹಾಕುವುದು, ಮಾಟ-ಮಂತ್ರ ಮಾಡಿಸುವುದು, ಪ್ರಮಾಣಿತವಲ್ಲದ ಮತ್ಯಾವುದೋ ರಾಕ್ಷಸ ವೈದ್ಯಕ್ಕೆ ಮೊರೆ ಹೋಗುವುದು.

ಹಾಗಾದರೆ ಕುಟುಂಬದವರಾಗಿ, ಸ್ನೇಹಿತರಾಗಿ, ಸಹೋದ್ಯೋಗಿಗಳಾಗಿ, ಸಲಹೆಗಾರರಾಗಿ ಅಥವಾ ಸಹಾಯ ಮಾಡಬಹುದಾದ ಸ್ಥಿತಿಯಲ್ಲಿರುವ ಯಾರೇ ಆಗಲಿ, ನಾವೇನು



For More Job News Visit: www.kpscvaani.com

**ಕೋವಿಡ್ ರೋಗಿಯ ಮಾನಸಿಕ ಸ್ವಾಸ್ಥ್ಯ:**

ಆರಂಭದಿಂದಲೂ ವಿಶ್ವದಾದ್ಯಂತ ದೈಹಿಕ ಆರೋಗ್ಯಕ್ಕೆ ಸಿಕ್ಕ ಗಮನ ಮಾನಸಿಕ ಆರೋಗ್ಯಕ್ಕೆ ದೊರತೇ ಇಲ್ಲ. ಕೋವಿಡ್ ಸಂಕಷ್ಟವಂತೂ (ಲಾಕ್‌ಡೌನ್ ಸಂದರ್ಭದಲ್ಲಿ) ಬಹಳಷ್ಟು ಜನರ ಮಾನಸಿಕ ಆರೋಗ್ಯದ ಮೇಲೆ ಭಾರೀ ಪ್ರಹಾರ ಮಾಡುತ್ತಿದೆ. ಇಷ್ಟಕ್ಕೆ ಜೀವನ ಮುಗಿದೆ ಹೋಯಿತು ಎನ್ನುವ ಮಾನಸಿಕ ಖಿನ್ನತೆಗೆ ಒಳಗಾಗುವುದು ತಪ್ಪು. ಹಿಂದೆ ಕೂಡ ಹಲವಾರು ಪ್ರಕೃತಿ ವಿಕೋಪಗಳು ಜನರ ಜೀವನವನ್ನು ಅಸ್ಥವ್ಯಸ್ಥ ಮಾಡಿವೆ. ಪ್ರಕೃತಿ ವಿಕೋಪಗಳಾದಂತಹ ಭೂಕಂಪ, ಸುನಾಮಿ, ಅತಿವೃಷ್ಟಿ, ಅನಾವೃಷ್ಟಿಗಳು ಬಂದು ಹೋಗಿವೆ. ಆದಾಗ್ಯೂ ಜನರು ತಮ್ಮ ಯತಾಸ್ಥಿತಿಯ ಜೀವನವನ್ನು ನಡೆಸಿದ್ದಾರೆ. ಅದೇ ರೀತಿ ಕೋವಿಡ್-19 ಕೂಡಾ ಶಾಶ್ವತವಾದ ಮಾರಕ ರೋಗವಲ್ಲ. ಕೆಲವು ಕಾಲದ ನಂತರ ಅಥವಾ ಅದಕ್ಕೆ ಔಷಧ ಕಂಡು ಹಿಡಿದ ನಂತರ ಹೋಗಬಹುದು, ಇಲ್ಲ ಕಡಿಮೆಯಾಗಬಹುದು. ಆದರೆ ಅಲ್ಲಿಯವರೆಗೆ ಜನರು ಮಾನಸಿಕವಾಗಿ ಧೈರ್ಯ ಮತ್ತು ತಾಳ್ಮೆಯಿಂದ ಇರಬೇಕು. ಮಾನಸಿಕ ರೋಗಕ್ಕೆ ಒಳಗಾಗಿ ದುಷ್ಟ ಚಟಕ್ಕೆ ಅಂಟಿಕೊಳ್ಳಬಾರದು. ಎಷ್ಟೋ ಜನರು ನಿರುದ್ಯೋಗಿಗಳಾಗಿ ಆರ್ಥಿಕ ಸಂಕಷ್ಟದಿಂದ ಆತ್ಮಹತ್ಯೆ ಮಾಡಿಕೊಂಡಿರುವ ಉದಾಹರಣೆಗಳಿವೆ. ಮಾನಸಿಕ ಆರೋಗ್ಯ ರಕ್ಷಣೆಯತ್ತಲೂ ಗಮನಹರಿಸುವುದು ಅಗತ್ಯವಾಗಿದೆ.

ಆರ್ಥಿಕತೆಯಲ್ಲಿ ವಿಶ್ವದಲ್ಲೇ ಐದನೇ ಅತೀ ದೊಡ್ಡ ರಾಷ್ಟ್ರ ಎನಿಸಿರುವ ಭಾರತ ಕೊರೊನಾ ಲಾಕ್‌ಡೌನ್‌ನಿಂದ ನಲುಗಿ ಹೋಗಿದೆ. ನಲವತ್ತು ವರ್ಷಗಳಲ್ಲೇ ಅತ್ಯಂತ ದಯನೀಯ ಸ್ಥಿತಿಗೆ ತಲುಪಿದೆ. ಏಪ್ರಿಲ್-ಜೂನ್ ಮೊದಲ ತ್ರೈಮಾಸಿಕ ಅವಧಿಯಲ್ಲಿ ದೇಶದ ಜಿಡಿಪಿ ಮೈನಸ್ 23.9%ಕ್ಕೆ ಕುಸಿದಿದೆ. ಇದು ಕಳೆದ 24 ವರ್ಷಗಳಲ್ಲಿ ಅತೀ ದೊಡ್ಡ ಪತನವೂ ಹೌದು. ಕೊರೊನಾದಿಂದಾಗಿ ಆರ್ಥಿಕತೆ ದೊಡ್ಡ ಪೆಟ್ಟು ತಿನ್ನಲಿದೆ ಎಂಬ ನಿರೀಕ್ಷೆಯಿತ್ತಾದರೂ, ಈ ಮಟ್ಟಿಗೆ ಬೀಳಬಹುದು ಎಂಬ ಊಹೆ ಯಾರಿಗೂ ಇರಲಿಲ್ಲ.

ಇಡೀ ಜಗತ್ತನ್ನು ಕಾಡಿದ ಕೋವಿಡ್-19ನ್ನು ಸಮರ್ಥವಾಗಿ ಎದುರಿಸಲು ಭಾರತ ಸರಕಾರವೂ ಎಲ್ಲ ಸಿದ್ಧತೆ, ಮುಂಜಾಗರೂಕತೆಯ ಕ್ರಮಗಳನ್ನು ಕೈಗೊಂಡಿದ್ದು, ಸಮರ್ಥವಾಗಿ ನಿಭಾಯಿಸುತ್ತಿದೆ. ಕೋವಿಡ್-19 ಹಾಕಿದ ಸವಾಲುಗಳನ್ನು ಭಾರತವು ಕ್ಷಿಪ್ರ ಗತಿಯಿಂದ ಎದುರಿಸಿದ್ದು, ಆತ್ಮನಿರ್ಭರ ಮೂಲಕ ದಾಪುಗಾಲು ಹಾಕುತ್ತಿದೆ. ಪ್ರಧಾನಿ ಮೋದಿಜಿ ಅವರು ನೀಡಿದ ಸ್ವಾವಲಂಬಿ ಭಾರತ, (ಆತ್ಮನಿರ್ಭರ ಭಾರತ) ಕರೆಯು ಭಾರತವನ್ನು ಆರ್ಥಿಕ ಪುನರುಜ್ಜೀವನಗೊಳಿಸುವ ಕಾರ್ಯದಲ್ಲಿ ನಿರತರಾಗಲು ಪ್ರೇರೇಪಿಸಿದೆ. ಹಾಗಾಗಿ ಮಾದಕ ವ್ಯಸನದಿಂದ ನಮ್ಮ ಯುವಜನರನ್ನು ಹೊರಗೆ ತಂದು ಅವರಲ್ಲಿ ಆತ್ಮ ಸ್ಥೈರ್ಯವನ್ನು ತುಂಬಿ, ಸ್ವಾವಲಂಬನೆಯನ್ನು ಸಾಧಿಸುವ ಮೂಲಕ ದೇಶದ ಘನತೆಯನ್ನು ಹೆಚ್ಚಿಸೋಣ.

ಮಾಡಬಹುದು? ಬೆಂಕಿ ಹತ್ತಿಕೊಂಡಾಗ ಏನು ಮಾಡಬೇಕು, ಯಾರಿಗಾದರೂ ಹೃದಯಾಘಾತ ಆಗುತ್ತಿದೆ ಎಂದು ಗೊತ್ತಾದಾಗ ಏನು ಮಾಡಬೇಕು ಎನ್ನುವುದರ ಬಗ್ಗೆ ಈಚೆಗೆ 'ಮಾಕ್-ಡ್ರಿಲ್‌ಗಳು / ನಕಲಿ ಪ್ರದರ್ಶನಗಳು ನಡೆಯುವಂತೆ ವ್ಯಸನಕ್ಕೊಳಗಾದವರನ್ನು ಹೊರಕ್ಕೆಳೆಯಲು ಏನು ಮಾಡಬೇಕು ಎನ್ನುವುದರ ಬಗ್ಗೆ ಮಾಹಿತಿ ಸುಲಭವಾಗಿ ಲಭ್ಯವಿಲ್ಲ. ಒಂದೊಮ್ಮೆ ಹುಡುಕಿ ತೆಗೆದರೂ, ವ್ಯಸನಿಗಳ ಬಗ್ಗೆ ಅನೇಕರು ಭಯಮಿಶ್ರಿತ ಅಸಹ್ಯ ಬೆಳೆಸಿಕೊಂಡು ಸಹಾಯ ಮಾಡಲು ಹಿಂಜರಿಯುತ್ತಾರೆ. ಹಾಗಾಗಿ, ಇಂತಹ ಸಂದರ್ಭಗಳಲ್ಲಿ ಏನು ಮಾಡಬೇಕು ಎನ್ನುವುದರ ಬಗ್ಗೆ ಪರಿಣಿತ ತರಬೇತಿ ಇಲ್ಲದಿದ್ದರೂ, ಸಣ್ಣ ಮಟ್ಟಿಗಿನ ಅಳತೆ-ಅಂದಾಜಾದರೂ ಇದ್ದರೆ ಒಳಿತು.

ಇಂದಿನವರೆಗೆ ಜಗತ್ತಿನ ದೊಡ್ಡ ದೇಶಗಳು ಡ್ರಗ್ಸ್ ವಿರುದ್ಧ ನಡೆಸಿದ ಹೋರಾಟ, ಯುದ್ಧಗಳೆಲ್ಲಾ ವ್ಯರ್ಥವಾಗಿವೆ. ವಿಪರೀತ ಹಣ ವೆಚ್ಚವಾಗಿದೆ. ಲೆಕ್ಕವಿಲ್ಲದಷ್ಟು ಯುವಜನರುಗಳನ್ನು ಅಪರಾಧಿಗಳನ್ನಾಗಿ ಪರಿಗಣಿಸಲಾಗಿದೆ. ಗ್ಯಾಂಗ್‌ಗಳು ಸೃಷ್ಟಿಯಾಗಿ ಹೊಡೆದಾಡಿಕೊಂಡು ಶಾಂತಿಭಂಗ ಮಾಡಿವೆ. ಸಂಘಟಿತ ಡ್ರಗ್ಸ್ ಜಾಲವನ್ನು ಭೇದಿಸಲು ಸಮಾಜ ಸಂಘಟಿತವಾಗಿ ಪ್ರಯತ್ನಿಸಿದರಷ್ಟೇ ಸಾಧ್ಯವಾಗುವುದು.

ಮಾದಕ ವಸ್ತುಗಳ ವ್ಯಸನ ದೂರದ ಯಾರದ್ದೋ ಸಮಸ್ಯೆಯಾಗಿ ಉಳಿಯದೆ, ನಮ್ಮ ಸುತ್ತಮುತ್ತಲಿನವರ ಸಮಸ್ಯೆಯಾಗಿ ಕಾಣಿಸಿಕೊಳ್ಳತೊಡಗಿದೆ. ಸಂತೋಷದ ವಿಷಯವೆಂದರೆ, ವೈದ್ಯಕೀಯ ಜಗತ್ತಿನಲ್ಲಿ ಈ ಸಮಸ್ಯೆಯನ್ನು ನಿರ್ವಹಿಸಲು ಸಮರ್ಪಕವಾದ ಪರಿಹಾರ ಮಾರ್ಗಗಳೂ ಪಕ್ವವಾಗುತ್ತಿವೆ. ವ್ಯಸನಿಗಳ ಬಗ್ಗೆ ಇರುತ್ತಿದ್ದ ಭಯ, ಅಜ್ಞಾನಗಳು ನಿಧಾನವಾಗಿಯಾದರೂ ಕಡಿಮೆಯಾಗಿ, ಯುವಕರು ಚಟಕ್ಕೆ ಬೀಳದಂತೆ, ಅಕಸ್ಮಾತ್ ವ್ಯಸನಕ್ಕೆ ಒಳಗಾದವರು ಅದರಿಂದ ಹೊರಬರಲು ಅನುಕೂಲವಾಗುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಡ್ರಗ್ಸ್ ಬಗ್ಗೆ ಎದ್ದಿರುವ ಗದ್ದಲದ ನಡುವೆಯೂ ಈ ಹೊತ್ತು ಆಶಾವಾದಕ್ಕೆ ಕಾರಣವಿದೆ.

ಆದರೆ, ಅದರಲ್ಲಿ ನಮ್ಮ ನಿಮ್ಮೆಲ್ಲರ ಪಾತ್ರ ಮಹತ್ವದ್ದಾಗಿದೆ. ಮಾದಕ ವಸ್ತುಗಳ ಸೇವನೆ ಸಾಮಾಜಿಕ ಪಿಡುಗಾಗಿ ಪರಿಣಮಿಸುತ್ತಿದ್ದು, ಅದನ್ನು ಸೇವಿಸುವವರಲ್ಲಿ ಶೇ.90 ರಷ್ಟು ಯುವ ಜನರೇ ಇದ್ದಾರೆ. ಇದು ಆಘಾತಕಾರಿ ಬೆಳವಣಿಗೆಯಾಗಿದೆ. ಇದನ್ನು ಹೋಗಲಾಡಿಸಲು ವ್ಯಾಪಕ ಜಾಗೃತಿ ಅಭಿಯಾನ ಆಗಬೇಕಿದೆ. ಅಲ್ಲದೇ, ಅದನ್ನು ಬೇರು ಸಮೇತ ಕಿತ್ತೆಸೆಯಲು ಸಮಾಜ, ಸಾರ್ವಜನಿಕರು, ಪೊಲೀಸರು ಹಾಗೂ ಸಂಘ-ಸಂಸ್ಥೆಗಳ ಸಹಕಾರ ಅಗತ್ಯವಾಗಿದೆ.

ಹದಿವಯಸ್ಸಿನ ಮಕ್ಕಳು, ಶಾಲಾ-ಕಾಲೇಜು ವಿದ್ಯಾರ್ಥಿಗಳು ಎಳೆಯ ವಯಸ್ಸಿನಲ್ಲೇ ಮಾದಕ ವಸ್ತುಗಳಿಗೆ ಬಲಿಯಾಗದಂತೆ ಅರಿವು ಮೂಡಿಸುವ ಅಭಿಯಾನ ರಾಜ್ಯಾದ್ಯಂತ ಕೈಗೊಳ್ಳಬೇಕಾಗಿದೆ. ಈ ಜವಾಬ್ದಾರಿ ಸರಕಾರ, ಸಮಾಜ, ಶಾಲಾ-ಕಾಲೇಜುಗಳು, ಸಂಘ ಸಂಸ್ಥೆಗಳು, ಪೊಲೀಸ್, ಆರೋಗ್ಯ ಇಲಾಖೆ ಹಾಗೂ ಪೋಷಕರ ಮೇಲಿದೆ. ಮಕ್ಕಳು ಮಾದಕ ವಸ್ತುಗಳ ಚಟಕ್ಕೆ ಬಲಿಯಾಗುವ ಮುನ್ನ ಎಲ್ಲರೂ ಮುನ್ನೆಚರಿಕೆ ವಹಿಸಬೇಕು. ಚಟಕ್ಕೆ ಬಿದ್ದ ಮೇಲೆ ಅವರನ್ನು ಅದರಿಂದ ಹೊರಕ್ಕೆ ತರುವುದು ತುಂಬಾ ಕಷ್ಟದ ಕೆಲಸ. ಹಾಗಾಗಿ ನಾವು ಮಕ್ಕಳಿಗೆ ಈ ಚಟಕ್ಕೆ ಬೀಳದಿರುವಂತೆ ಅವರಿಗೆ ಮೊದಲೇ ಮಾದಕ ವ್ಯಸನದ ದುಷ್ಪರಿಣಾಮದ ಕುರಿತು ಅರಿವು ಮೂಡಿಸುವುದು ಒಳಿತು. ■



For More Job News Visit: www.kpscvaani.com

ಕರ್ನಾಟಕ ಸರ್ಕಾರ

# ಕೋವಿಡ್-19



## ಎಲ್ಲಿಯವರೆಗೆ ಔಷಧಿ ಲಭ್ಯವಾಗುವುದಿಲ್ಲವೋ,
## ಅಲ್ಲಿಯವರೆಗೆ ಜಾಗ್ರತೆಯಿಂದಿರಿ



ಕೋವಿಡ್-19 ವೈದ್ಯಕೀಯ ಸಹಾಯಕ್ಕಾಗಿ ಆಪ್ತಮಿತ್ರ ಸಹಾಯವಾಣಿ **14410** ಗೆ ಕರೆ ಮಾಡಿ

**#KarnatakaFightsCorona**

ಎಲ್ಲರಿಗೂ ಆರೋಗ್ಯ ಎಲ್ಲೆಡೆಯೂ ಆರೋಗ್ಯ

For More Job News Visit: www.kpscvaani.com



# ಕನ್ನಡದ ದಾಸಯ್ಯ ಶಾಂತಕವಿಗಳು

ಪಿ. ಎಸ್. ಪರ್ವತಿ

" ಬೇಡಲು ಕನ್ನಡ ದಾಸಯ್ಯ ಬಂದಿಹ
ನೀಡಿರಮ್ಮ ತಡಮಾಡದೇ//
ಹೊಟ್ಟೆಗಿಲ್ಲದೇ ಬಂದ ದಾಸಯ್ಯನಿವನಲ್ಲ
ಅನ್ಯ ಭಾಷೆಗಳಂತೆ ಕನ್ನಡ ಭಾಷೆಗೆ
ಉನ್ನತಿಕೆಯ ತರಬೇಕೆಂದು
ಹೊನ್ನು ಕೂಡಿಸಲು ಬಂದಿಹನಾತನು
ಮನ್ನಿಸಿ ಹಣವನು ಕೊಡಿರಮ್ಮಾ......."

ಎಂದು ಹಾಡುತ್ತ, ಮನೆ ಮನೆಗೆ, ಓಣಿ ಓಣಿಗೆ ಕನ್ನಡದ ಜೋಳಿಗೆ ಹಿಡಿದು ಹಣ ಸಂಗ್ರಹಿಸಿ ಕನ್ನಡದ ದಾಸಯ್ಯ ಎಂದೇ ಪ್ರಸಿದ್ಧರಾದ "ಶಾಂತಕವಿ"ಯ ಕನ್ನಡ ಸೇವೆ ಅನುಪಮವಾದದು. ಧಾರವಾಡದಲ್ಲಿ 1918 ರಲ್ಲಿ ಜರುಗಿದ ನಾಲ್ಕನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆರ್ಥಿಕ ಮುಗ್ಗಟ್ಟು ಎದುರಾದಾಗ ಅದಕ್ಕಾಗಿ ಹಣ ಸಂಗ್ರಹಿಸುವ ಜವಾಬ್ದಾರಿ ಹೊತ್ತು, ಮೇಲಿನ ಕವಿತೆಯನ್ನು ಬರೆದು, ತಮ್ಮ ಅರವತ್ತರ ಇಳಿ ವಯಸ್ಸಿನಲ್ಲೂ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಊರೆಲ್ಲಾ ಸುತ್ತಾಡಿ ಹಾಡಿ, ಕೀರ್ತನೆ ಮಾಡಿ, ಭಿಕ್ಷಾಟನೆ ಮಾಡಿ, ದಾನ ಪಡೆದು ಹಣ ಸಂಗ್ರಹಿಸಿ ಸಮ್ಮೇಳನಕ್ಕೆ ನೆರವಾದ ಈ ಅಪ್ಪಟ ಕನ್ನಡಾಭಿಮಾನಿಯ ಸಾಧನೆ ಇಂದಿನ ಬಹುತೇಕರಿಗೆ ಗೊತ್ತಿಲ್ಲ. ನಾಟಕಕಾರರು, ಕವಿಗಳು ಮತ್ತು ಕೀರ್ತನಕಾರರಾಗಿ ಕನ್ನಡ ನುಡಿಯ ನಿಸ್ಪೃಹಸೇವೆ ಮಾಡಿ ಉತ್ತರ ಕರ್ನಾಟಕದಲ್ಲಿ ಕನ್ನಡದ ಕಂಪು ಬೀರಲು ಶ್ರಮಿಸಿದ ಶ್ರೇಯಸ್ಸು ಇವರದು.

> ನಾಲ್ಕನೇ ಅಖಿಲ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆರ್ಥಿಕ ಮುಗ್ಗಟ್ಟು ಎದುರಾದಾಗ, ಜೋಳಿಗೆ ಹಿಡಿದು ಕನ್ನಡದ ಕೀರ್ತನೆಗಳನ್ನು ಹಾಡುತ್ತಾ ಭಿಕ್ಷಾಟನೆ ಮಾಡುವ ಮೂಲಕ ಕನ್ನಡ ನುಡಿಗಾಗಿ ನಿಸ್ವಾರ್ಥ ಸೇವೆ ಸಲ್ಲಿಸಿದ ಕನ್ನಡದ ದಾಸಯ್ಯ ಎಂದೇ ಪ್ರಸಿದ್ಧರಾದ 'ಶಾಂತಕವಿ' ಅವರು ಕನ್ನಡದ ಕಂಪು ಪಸರಿಸಲು ಮಾಡಿದ ಸಾಧನೆ ಅಪಾರವಾದುದು.

ಕನ್ನಡದ ಬಳಕೆ ವಿರಳವಾಗಿದ್ದ ಸಂದಿಗ್ಧ ಕಾಲದಲ್ಲಿ, ನಾಡು ನುಡಿ, ಸಂಸ್ಕೃತಿಯ ಸಂವರ್ಧನೆಗೆ ದಣಿವರಿಯದೇ ದುಡಿದ ಮಹನೀಯರಲ್ಲಿ ಇವರು ಚಿರಸ್ಮರಣೀಯರು. "ಶಾಂತಕವಿ"



For More Job News Visit: www.kpscvaani.com

ಎಂಬ ಅಂಕಿತನಾಮದಿಂದ ಅಸೀಮ ಕನ್ನಡ ಪ್ರೀತಿ ತೋರಿದ ಇವರ ಪೂರ್ಣ ಹೆಸರು ಬಾಳಾಚಾರ್ಯ ಗೋಪಾಳಾಚಾರ್ಯ ಸಕ್ಕರಿ. ಇಂದಿನ (ಹಿಂದಿನ ಅವಿಭಾಜ್ಯ ಧಾರವಾಡ ಜಿಲ್ಲೆ) ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲ್ಲೂಕಿನ ಸಾತೇನಹಳ್ಳಿಯಲ್ಲಿ ಇವರು 1856 ಜನವರಿ 15 ರಂದು ಜನಿಸಿದರು. ನಿಷ್ಠಾವಂತ ಸಂಸ್ಕೃತ ವಿದ್ವಾಂಸರ ಮನೆತನದ ಇವರ ಪೂರ್ವಜರು "ಶರ್ಕರಾ"ಎಂಬ ಸಂಸ್ಕೃತ ಟೀಕಾ ಗ್ರಂಥವನ್ನು ರಚಿಸಿದ್ದರಿಂದಾಗಿ 'ಸಕ್ಕರಿ' ಎಂಬ ಅಡ್ಡ ಹೆಸರು ಇವರ ಮನೆತನಕ್ಕೆ ರೂಢವಾಯಿತು. ಗ್ರಾಮದ ಆರಾಧ್ಯ ದೈವ ಶಾಂತೇಶನ (ಆಂಜನೇಯ) ಮೇಲಿನ ಭಕ್ತಿಯಿಂದ "ಶಾಂತೇಶ" ಎಂಬ ಕಾವ್ಯನಾಮದಿಂದ ಸಾಹಿತ್ಯ ಕೃಷಿಯಲ್ಲಿ ಎಲೆ ಮರೆಯ ಕಾಯಿಯಂತೆ ತೊಡಗಿಕೊಂಡು, ಕನ್ನಡ ನುಡಿ, ಸಂಸ್ಕೃತಿಯ ಪುನರುಜ್ಜೀವನಕ್ಕೆ ತಮ್ಮ ಬದುಕನ್ನೆ ಮುಡಿಪಾಗಿಟ್ಟರು. ತಂದೆಯವರಿಂದ ಸಂಸ್ಕೃತವನ್ನು ಕಲಿತು, ಶಾಲೆಗೆ ಹೋಗಿ ಕನ್ನಡ ಓದಿ, ಅಂದಿನ ಮುಲ್ಕಿ (ಏಳನೆಯ ತರಗತಿ) ಪರೀಕ್ಷೆ ಪಾಸಾಗಿ, ಧಾರವಾಡದ ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿ ತರಬೇತಿ ಪಡೆದರು. ಹದಿಹರೆಯದಲ್ಲಿಯೆ( 1972 ರಲ್ಲಿ) ಪ್ರಾಥಮಿಕ ಶಿಕ್ಷಕರಾಗಿ ರಾಣೇಬೆನ್ನೂರಲ್ಲಿ ವೃತ್ತಿ ಆರಂಭಿಸಿದರು. ಹಾವೇರಿ, ಧಾರವಾಡ, ಬೆಳಗಾವಿ, ಗದಗ, ಹೊಂಬಳ, ಅಗಡಿ, ಕೋಳಿವಾಡ, ಹುಬ್ಬಳ್ಳಿ ಮುಂತಾದ ಹತ್ತಾರು ಊರುಗಳಲ್ಲಿ ಸುತ್ತಾಡಿ 40 ವರುಷಗಳ ಸುದೀರ್ಘ ಸೇವೆಯ ನಂತರ 1912 ರಲ್ಲಿ ನಿವೃತ್ತಿಯಾದರು.

**ಮರಾಠಿ ಪ್ರಭಾವ:**

"ಎಲ್ಲಿ ನೋಡಲು ಮರಾಠಿಯರ ನಾಟಕ ಕೀರ್ತಿ. ಎಲ್ಲಿ ನೋಡಲು ಮರಾಠಿಯರ ನಾಟಕ ನಟರ ಮೂರ್ತಿಗಳ ಸಂಚಾರವು!" ಎಂಬಂತಿದ್ದ ಕನ್ನಡ ನಾಡಿನ ಉತ್ತರ ಕರ್ನಾಟಕದಲ್ಲಾದ ಮರಾಠಿ ನಾಟಕಗಳ ದಾಳಿಯನ್ನು ಅತ್ಯಂತ ಸಮರ್ಥವಾಗಿ ಎದುರಿಸಿ, ಕನ್ನಡ ರಂಗಭೂಮಿಗೆ ಭದ್ರಬುನಾದಿಯನ್ನು ಹಾಕಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಪೇಶ್ವೆಯವರ ವಶದಲ್ಲಿದ್ದ ಉತ್ತರ ಕರ್ನಾಟಕ ಪ್ರದೇಶವು ಬ್ರಿಟಿಷರ ವಶವಾದ ಮೇಲೂ ಮುಂಬೈ, ಪುಣೆ ಸಂಸ್ಕೃತಿ ಮತ್ತು ಭಾಷೆಯ ಪ್ರಭಾವ ಈ ಪ್ರಾಂತದ ಮೇಲೆ ಗಾಢವಾಗಿತ್ತು. ಹೀಗಾಗಿ ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಕನ್ನಡವನ್ನು ತಾತ್ಸಾರ ಮಾಡಿ, ಮರಾಠಿ ಪ್ರೋತ್ಸಾಹಿಸುವ ಶೋಚನೀಯ ಕಾಲವದು. ಜನ ಮನರಂಜನೆಗೆ ಕೃಷ್ಣ ಪಾರಿಜಾತ, ದೊಡ್ಡಾಟಗಳು, ಸಣ್ಣಾಟಗಳು ಇದ್ದವಾದರೂ ಮರಾಠಿ ನಾಟಕ ಕಂಪನಿಗಳು ತಮ್ಮ ವೈಭವೋಪೇತ ನಾಟಕ ಸರಂಜಾಮು, ನಟರೊಡಗೂಡಿ ಈ ಪ್ರದೇಶಗಳಲ್ಲಿ ಅದ್ದೂರಿ ನಾಟಕ ಪ್ರದರ್ಶಿಸುತ್ತಿದ್ದವು. ಜನ ಸಹಜವಾಗಿಯೇ ಅವುಗಳನ್ನು ಪ್ರೋತ್ಸಾಹಿಸುತ್ತಿದ್ದರು. ಇಂತಹ ವಿಚಿತ್ರ ಪರಿಸ್ಥಿತಿಯಲ್ಲಿ ಶಾಂತ ಕವಿಗಳು, ಮರಾಠಿ ನಾಟಕಗಳ ಮೋಡಿಗೊಳಗಾಗಿದ್ದ ಜನರಿಗೆ ಕನ್ನಡದಲ್ಲಿಯೂ ನಾಟಕ ರಚಿಸಿ, ಅಷ್ಟೇ ಸಮರ್ಥವಾಗಿ ಅವುಗಳನ್ನು ಪ್ರದರ್ಶನ ಮಾಡಬಹುದು ಎಂಬುದನ್ನು ಕಾರ್ಯತಃ ತೋರಿಸಿಕೊಟ್ಟು ಜನ ಜಾಗೃತಿಗೆ ಮುಂದಾದರು.

**ರಕ್ಷಿಸು ಕರ್ನಾಟಕ ದೇವಿ:**

ನ್ಯಾಯ ನಿಷ್ಠೂರಿ, ಖಂಡಿತವಾದಿಯಾಗಿದ್ದರಿಂದ ಶಾಂತ ಕವಿಗಳು ಸೇವೆಯಲ್ಲಿ ಸಾಕಷ್ಟು ತೊಂದರೆ ಅನುಭವಿಸಿದರು. ಹೋದಲ್ಲೆಲ್ಲಾ ಕನ್ನಡ, ನಾಟಕ, ಕೀರ್ತನೆಯಂತಹ ಕಾರ್ಯಕ್ರಮ ಸಂಘಟನೆ ಮಾಡುತ್ತಿದ್ದುದರಿಂದ' ಇವರ




ಕನ್ನಡದ ಚಟುವಟಿಕೆ ಸಹಿಸದ ಅಂದಿನ (ಮರಾಠಿ) ಅಧಿಕಾರಿಗಳು ಜಿಲ್ಲೆಯ ತುಂಬ ಸುತ್ತಾಡುವಂತಹ ವರ್ಗಾವಣೆಯ ಬಳುವಳಿಯನ್ನು ಇವರಿಗೆ ಕೊಟ್ಟರಲ್ಲದೇ ಬಡ್ತಿಯಿಂದ ಸಹ ವಂಚಿತರನ್ನಾಗಿಸಿದರು. ಈ ಶಾಪವನ್ನೇ ವರವಾಗಿಸಿಕೊಂಡ ಇವರು ಕೆಲಸ ಮಾಡಿದ ಊರುಗಳಲ್ಲಿ ಕನ್ನಡದ ವಾತಾವರಣ ಹೆಚ್ಚಿಸಿ, ಹೊಸಗನ್ನಡ ಅರುಣೋದಯ ಕಾಲದ ಅಕ್ಷರ ಸಂಗಾತಿಯಾದರು. ಸ್ವಾತಂತ್ರ್ಯ ಚಳುವಳಿ ಗಾಳಿ ಬೀಸುತ್ತಿದ್ದ ಕಾಲದಲ್ಲಿ ಇವರು ರಚಿಸಿದ "ವಿದ್ಯಾರಣ್ಯ ವಿಜಯ" (1918) ಕಥೆಯ ಕೀರ್ತನೆ ಉತ್ತರ ಕರ್ನಾಟಕದ ಜನತೆಯಲ್ಲಿ ದೇಶಪ್ರೇಮ, ತಾಯ್ನುಡಿ, ಹಾಗೂ ಇತಿಹಾಸದ ಬಗ್ಗೆ ಅರಿವನ್ನುಂಟು ಮಾಡಿ ಸ್ವಾಭಿಮಾನ ಮೂಡಿಸುವಲ್ಲಿ ಮಹತ್ತರ ಪಾತ್ರವಹಿಸಿತು. ಕೀರ್ತನೆಯಲ್ಲಿ ಕನ್ನಡಿಗರನ್ನು ಎಚ್ಚರಿಸಲು ಬರೆದ "ರಕ್ಷಿಸು ಕರ್ನಾಟಕ ದೇವಿ" "ನಮ್ಮದೀ ಭರತ ಭೂಮಿ"; "ಏಳು ಸಾಯಣ ಕಟ್ಟು ಗ್ರಂಥವ, ನೇಳು ಪಂಪಾಕ್ಷೇತ್ರಕೆ ಎಂಬ ಗೀತೆಗಳು ಮುಂದಿನ ಮೂರು ದಶಕಗಳ ಕಾಲ ಮುಂಬೈ ಕರ್ನಾಟಕದಲ್ಲಿ ಸ್ವಾತಂತ್ರ್ಯ ಸ್ಫೂರ್ತಿಯ ನಾಡಗೀತೆಗಳಾಗಿ ಜನಪದರ ಮನ್ನಣೆ ಪಡೆದಿದ್ದವು. ತಮ್ಮ ಸ್ವತಂತ್ರ ಕವನಗಳ ರಚನೆಯಿಂದ 1918 ಕ್ಕೆ ಮುಂಚೆಯೇ ಭಾವಗೀತೆಯ ಪಂಥಕ್ಕೆ ಒಳ್ಳೆಯ ಬುನಾದಿ ಹಾಕಿದ ಧೀಮಂತರು.

**ನಾಟಕ ರಚನೆ:**

ವರ್ಗಾವಣೆಗೊಂಡು ಗದುಗಿಗೆ ಬಂದಾಗ ಇವರ ಬದುಕಿನ ದಾರಿ ಕನ್ನಡದ ಕೀರ್ತನೆ ಹಾಗೂ ನಾಟಕ ರಚನೆಯ ಮೂಲಕ ಸಾಹಿತ್ಯ ಪರಿಚಾರಿಕೆಯತ್ತ ಹೊರಳಿತು. ಗದಗ ಬಳಿಯ ಮುಳಗುಂದ ಗ್ರಾಮದಲ್ಲಿ ಕೀರ್ತನಕಾರರೊಬ್ಬರು ಮರಾಠಿ ಶ್ಲೋಕ, ಹಾಡುಗಳಿಂದ ಕೂಡಿದ ಮರಾಠಿ ಮಿಶ್ರಿತ ಕನ್ನಡದಲ್ಲಿ ಕೀರ್ತನೆ ಮಾಡುವದನ್ನು ಕೇಳಿ ಶಾಂತಕವಿಗಳು ಪ್ರತಿಭಟಿಸಿದರಂತೆ. ಆಗ ಕೀರ್ತನಕಾರರು "ಕನ್ನಡದಲ್ಲಿ ಕೀರ್ತನೆಗಳೆಲ್ಲಿವೇ? ಎಂದು ಸವಾಲು ಹಾಕಿದಾಗ, ಸ್ವಾಭಿಮಾನಿ ಶಾಂತ ಕವಿಗಳು ಅದಕ್ಕೆ ಪ್ರತ್ಯುತ್ತರವಾಗಿ "ಮುಕುಂದ ದಾನಾಮೃತ" ಎಂಬ ಕೀರ್ತನೆಯನ್ನು ಅಚ್ಚ ಕನ್ನಡದಲ್ಲಿಯೇ



For More Job News Visit: www.kpscvaani.com

**ಇವರ ಕನ್ನಡದ ಚಟುವಟಿಕೆ ಸಹಿಸದ ಅಂದಿನ (ಮರಾಠಿ) ಅಧಿಕಾರಿಗಳು ಜಿಲ್ಲೆಯ ತುಂಬ ಸುತ್ತಾಡುವಂತಹ ವರ್ಗಾವಣೆಯ ಬಳುವಳಿಯನ್ನು ಇವರಿಗೆ ಕೊಟ್ಟರಲ್ಲದೇ ಬಡ್ತಿಯಿಂದ ಸಹ ವಂಚಿತರನ್ನಾಗಿಸಿದರು. ಈ ಶಾಪವನ್ನೇ ವರವಾಗಿಸಿಕೊಂಡ ಇವರು ಕೆಲಸ ಮಾಡಿದ ಊರುಗಳಲ್ಲಿ ಕನ್ನಡದ ವಾತಾವರಣ ಹೆಚ್ಚಿಸಿ, ಹೊಸಗನ್ನಡ ಅರುಣೋದಯ ಕಾಲದ ಅಕ್ಷರ ಸಂಗಾತಿಯಾದರು.**

ರಚಿಸಿ, ಸಭೆಗಳಲ್ಲಿ ಕೀರ್ತನೆ ಮಾಡಿ, ಒಳ್ಳೆಯ ಹಾಡುಗಳನ್ನು ಹಾಡಿ, ಜನ ಮನದಲ್ಲಿ ನಾಡ ನುಡಿಗಳ ಬಗ್ಗೆ ಮಮತೆ ಹುಟ್ಟಲು ಕಾರಣೀಭೂತರಾದರು. ಇವರ ಕೀರ್ತನೆಗೆ ದೊರೆತ ಜನಮನ್ನಣೆಯಿಂದ ಪ್ರೇರಿತರಾದ ಇವರು " ರಾವಣ ವೇದಾವತಿ, ಶ್ರೀಮತಿ ಸ್ವಯಂವರ, ಹರಿ ಮಿತ್ರೋಪಾಖ್ಯಾನ" ಮುಂತಾದ ಕೀರ್ತನೆಗಳನ್ನು ರಚಿಸಿ ವಿಖ್ಯಾತರಾದರು.

ಗದಗ ಪರಿಸರದಲ್ಲಿಯ ನಾಟಕ ಪ್ರೇಮಿಗಳ ಸಹಕಾರದಿಂದ ಕನ್ನಡ ಚಟುವಟಿಕೆಗಳನ್ನು ವಿಸ್ತರಿಸಿದ್ದಲ್ಲದೇ ತಾವೇ ಈ ಮೊದಲು ರಚಿಸಿದ್ದ "ಉಷಾಹರಣ" ನಾಟಕ ಪ್ರದರ್ಶನ ಮಾಡಿದರು. ಮರಾಠಿಯನ್ನು ವಿರೋಧಿಸುತ್ತಿದ್ದುದರಿಂದ ಮತ್ತು ಇವರ ಕನ್ನಡ ಚಟುವಟಿಕೆಗಳನ್ನು ಸಹಿಸದವರು ಇವರನ್ನು ಗದಗದಿಂದ ಒಂಬತ್ತು ಮೈಲು ದೂರದ ಹೊಂಬಳ ಗ್ರಾಮಕ್ಕೆ ವರ್ಗಾಯಿಸುವಲ್ಲಿ ಯಶಸ್ವಿಯಾದರು. ಆದರೆ ಶಾಂತ ಕವಿಗಳು ಇದರಿಂದ ಹಿಂಜರಿಯಲಿಲ್ಲ. ಹೊಂಬಳದ ಶಾಲೆಗೆ ಹಾಜರಾದರು. ಸಾರಿಗೆ ಸೌಲಭ್ಯಗಳು ಸಾಕಷ್ಟಿಲ್ಲದ ಅಂದಿನ ದಿನಗಳಲ್ಲಿ, ಶಾಲಾ ಅವಧಿಯ ನಂತರ ದಿನವೂ ಕೋಣ ಅಥವಾ ಎಮ್ಮೆಯ ಮೇಲೆ ಕುಳಿತುಕೊಂಡು ಗದುಗಿಗೆ ಬಂದು ನಾಟಕದ ತಾಲೀಮು ನಿರಂತರವಾಗಿ ನಡೆಯುವಂತೆ ನೋಡಿಕೊಂಡ 'ಛಲಂದಕಮಲ್ಲ' ರೆನಿಸಿದರು.

**ಇವರ ಕನ್ನಡ ಚಟುವಟಿಕೆಗಳನ್ನು ಸಹಿಸದವರು ಇವರನ್ನು ಗದಗದಿಂದ ಒಂಬತ್ತು ಮೈಲು ದೂರದ ಹೊಂಬಳ ಗ್ರಾಮಕ್ಕೆ ವರ್ಗಾಯಿಸುವಲ್ಲಿ ಯಶಸ್ವಿಯಾದರು. ಆದರೆ ಶಾಂತ ಕವಿಗಳು ಇದರಿಂದ ಹಿಂಜರಿಯಲಿಲ್ಲ. ಹೊಂಬಳದ ಶಾಲೆಗೆ ಹಾಜರಾದರು. ಸಾರಿಗೆ ಸೌಲಭ್ಯಗಳು ಸಾಕಷ್ಟಿಲ್ಲದ ಅಂದಿನ ದಿನಗಳಲ್ಲಿ, ಶಾಲಾ ಅವಧಿಯ ನಂತರ ದಿನವೂ ಕೋಣ ಅಥವಾ ಎಮ್ಮೆಯ ಮೇಲೆ ಕುಳಿತುಕೊಂಡು ಗದುಗಿಗೆ ಬಂದು ನಾಟಕದ ತಾಲೀಮು ನಿರಂತರವಾಗಿ ನಡೆಯುವಂತೆ ನೋಡಿಕೊಂಡ 'ಛಲಂದಕಮಲ್ಲ' ರೆನಿಸಿದರು.**

**ನಾಟಕ ಪಿತಾಮಹ:**

ಸಕ್ಕರಿ ಅವರ ನೇತೃತ್ವದಲ್ಲಿ 1877ರಲ್ಲಿ ಗದಗದಲ್ಲಿ ಸ್ಥಾಪಿತವಾದ "ಶ್ರೀ ವೀರನಾರಾಯಣ ಪ್ರಾಸಾದಿತ ಕೃತಪುರ ನಾಟಕ ಮಂಡಳಿ"ಯು ಕನ್ನಡದ ಪ್ರಪ್ರಥಮ ವೃತ್ತಿ ನಾಟಕ ಕಂಪನಿಯಾಗಿತ್ತು. ಮರಾಠಿ ನಾಟಕ ಪ್ರಭಾವವನ್ನು ಕಡಿಮೆ ಮಾಡಿ ಕನ್ನಡತನವನ್ನು ಎತ್ತಿ ಹಿಡಿಯುವ ಉದ್ದೇಶದಿಂದ ತಲೆ ಎತ್ತಿದ ಈ ಮಂಡಳಿಯ ಮೂಲಕ ತಾವು ಬರೆದ ನಾಟಕಗಳನ್ನು ಶಾಂತ ಕವಿಗಳು ಪ್ರದರ್ಶಿಸಿದರು. ಇವರ "ಉಷಾ ಹರಣ"ನಾಟಕ ಪ್ರಸಿದ್ಧವಾಯಿತು. ಯಕ್ಷಗಾನ ತಂತ್ರವನ್ನು ಬಳಸಿಕೊಂಡು ಜನಪದ ಹಾಗೂ ಶಿಷ್ಟ ರಂಗಭೂಮಿಯ ಸಮನ್ವಯತೆಯನ್ನು ಸಾಧಿಸಿದ ಇವರ ನಾಟಕ ಪ್ರದರ್ಶನದಿಂದ ಕನ್ನಡ ನಾಟಕ ಚಳುವಳಿಗೆ ಹೊಸ ಹುರುಪು ಸಿಕ್ಕಿತು. ರಂಗಾಸಕ್ತರ ಮೆಚ್ಚುಗೆಯಿಂದ "ಕೃಷ್ಣ ರಾಧಾ ವಿಲಾಸ" 'ಶ್ರೀಯಾಳ ಸತ್ವ ಪರೀಕ್ಷೆ,'ಗಜೇಂದ್ರ ಮೋಕ್ಷ,' 'ಪರೀಕ್ಷೆ' 'ಕೀಚಕ ವಧೆ', 'ಸೀತಾರಣ್ಯ ಪ್ರವೇಶ,"ಸುಂದೋಪ ಸುಂದ ವಧೆ", "ವತ್ಸಲಾ ಹರಣ," "ಸುಧನ್ವ ವಧೆ" "ರಾವಣ ವಧೆ", ಮುಂತಾದ ಮೂವತ್ತೈದಕ್ಕೂ ಹೆಚ್ಚು ನಾಟಕಗಳನ್ನು ಬರೆದರಲ್ಲದೇ, ಅವುಗಳಲ್ಲಿ ಕೆಲವನ್ನು ತಾವೇ ಸ್ವತಃ ಕಲಿಸಿ ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಕಲಾದಗಿ, ಶಿರಹಟ್ಟಿ, ಮೊದಲಾದ ಊರುಗಳಲ್ಲಿ ಪ್ರದರ್ಶಿಸುವ ಮೂಲಕ ನಾಡಿನ ಜನತೆ ಕನ್ನಡ ನಾಟಕ ನೋಡುವ ಹೊಸ ಪರಂಪರೆ ರೂಢಿಸಿದರು. ಹದಿನಾರು ವರ್ಷ ಮೆರೆದ ಈ ನಾಟಕ ಕಂಪನಿಯ ಸ್ಥಾಪಕರಾದ ಶಾಂತ ಕವಿಗಳು "ಕರ್ನಾಟಕ ನಾಟಕ ಪಿತಾಮಹ"ಎಂಬ ಅಭಿಧಾನಕ್ಕೆ ಪಾತ್ರರಾದರು. ಈ ನಾಟಕ ಮಂಡಳಿಯ ಪ್ರೇರಣೆ ಪಡೆದು ಉತ್ತರ ಕರ್ನಾಟಕದ ವಿವಿಧ ಭಾಗಗಳಲ್ಲಿ ವೃತ್ತಿ ನಾಟಕ ಕಂಪನಿಗಳು ಉದಯವಾದವು. ಧಾರವಾಡ, ರಾಣೇಬೆನ್ನೂರ, ಹಿರೇಕೆರೂರ, ಹುಬ್ಬಳ್ಳಿ ಲಕ್ಷ್ಮೇಶ್ವರ, ನವಲಗುಂದ, ಬದಾಮಿ, ರಬಕವಿ ಮುಂತಾದ ಕೇಂದ್ರಗಳಲ್ಲಿ ಉಗಮವಾದ ನಾಟಕ ಕಂಪನಿಗಳು ಜನಪ್ರಿಯವಾಗಿ ಮಹಾರಾಷ್ಟ್ರ, ಆಂಧ್ರಪ್ರದೇಶಗಳಿಗೆ ಪ್ರವಾಸ ಹೋಗುವಂತ್ತಾಯಿತು.

ಹೊಂಬಳ ಗ್ರಾಮದಿಂದ ಶಾಂತ ಕವಿಗಳನ್ನು ಅಗಡಿ ಗ್ರಾಮಕ್ಕೆ ವರ್ಗಾಯಿಸಲಾಯಿತು. ಅಲ್ಲಿಯ ಆನಂದವನದ ಸದ್ಗುರು ಶೇಷಾಚಲರ ಸನ್ನಿಧಾನ, ಕವಿಯ ಸಾಹಿತ್ಯ ಸೃಷ್ಟಿಗೆ ಸಾಕಷ್ಟು ಪ್ರೇರಣೆ ನೀಡಿತು.'ಗಜೇಂದ್ರ ಮೋಕ್ಷ', ಎಂಬ ಕೀರ್ತನೆಯನ್ನು ರಚಿಸಿ ಅದನ್ನು ಸುಂದರವಾಗಿ ಮಾಡುವ ಮೂಲಕ ಪ್ರೌಢ ಕೀರ್ತನಕಾರರೆಂದು ಪ್ರಸಿದ್ಧರಾದರು. ಇವರ ಬರುವಿಕೆಯಿಂದ ಅಲ್ಲೊಂದು ನಾಟಕ ಕಂಪನಿ ಹುಟ್ಟಿತು.



For More Job News Visit: www.kpscvaani.com

**ಹೊಂಬಳ ಗ್ರಾಮದಿಂದ ಶಾಂತ ಕವಿಗಳನ್ನು ಅಗಡಿ ಗ್ರಾಮಕ್ಕೆ ವರ್ಗಾಯಿಸಲಾಯಿತು. ಅಲ್ಲಿಯ ಆನಂದವನದ ಸದ್ಗುರು ಶೇಷಾಚಲರ ಸನ್ನಿಧಾನ, ಕವಿಯ ಸಾಹಿತ್ಯ ಸೃಷ್ಟಿಗೆ ಸಾಕಷ್ಟು ಪ್ರೇರಣೆ ನೀಡಿತು.'ಗಜೇಂದ್ರ ಮೋಕ್ಷ', ಎಂಬ ಕೀರ್ತನೆಯನ್ನು ರಚಿಸಿ ಅದನ್ನು ಸುಂದರವಾಗಿ ಮಾಡುವ ಮೂಲಕ ಪ್ರೌಢ ಕೀರ್ತನಕಾರರೆಂದು ಪ್ರಸಿದ್ಧರಾದರು. ಇವರ ಬರುವಿಕೆಯಿಂದ ಅಲ್ಲೊಂದು ನಾಟಕ ಕಂಪನಿ ಹುಟ್ಟಿತು.**

'ಚಿತ್ರಸೇನ ಗಂಧರ್ವ', ವಿರಾಟಪರ್ವ', ಮುಂತಾದ ನಾಟಕಗಳನ್ನೂ ರಚಿಸಿದರು. ಇವರ ಅನೇಕ ನಾಟಕಗಳು ರಾಣೇಬೆನ್ನೂರು, ಹಾವೇರಿ ಸುತ್ತಲಿನ ಹಳ್ಳಿಗಳಲ್ಲಿ ರಂಗ ಮಂಚವೇರಿದವು. ಇವರ ನಾಟಕಗಳು ಮನೆಮಾತಾದವು. ಅಗಡಿಯ ಸಾಹಿತ್ಯಿಕ ಪರಿಸರ ಇವರಿಗೆ ಸಂಸ್ಕೃತ ಕಾವ್ಯ ರಚನೆಗೆ ಅನುವು ಮಾಡಿಕೊಟ್ಟಿತು. ಅನುಭಾವಿ ಕವಿ ಶಿಶುನಾಳ ಶರೀಫರು ಅಗಡಿಯಲ್ಲಿ ಇವರ ಹಾಡುಗಳನ್ನು ಆಲಿಸಿ, ಸಂತಸಪಟ್ಟು ಅವರನ್ನು ಅಪ್ಪಿಕೊಂಡು, "ಸಕ್ಕರಿಯಪ್ಪಾ ಇದು ನಿಜವಾಗಿಯೂ ಸಕ್ಕರಿ"ಎಂದು ಉದ್ಗಾರ ತೆಗೆದರಂತೆ. ಹತ್ತು ವರುಷಗಳ ಅಗಡಿ ಸೇವಾವಧಿ ಮುಗಿಸಿ ನಂತರ ಕೋಳಿವಾಡ, ಧಾರವಾಡ, ಹುಬ್ಬಳ್ಳಿಯಲ್ಲಿ ಹದಿನೇಳು ವರ್ಷಗಳ ಸೇವೆ ಸಲ್ಲಿಸಿ 1912 ರಲ್ಲಿ ಹನ್ನೊಂದು ರೂಪಾಯಿ ಪಿಂಚಣಿ ಪಡೆದು ನಿವೃತ್ತರಾದರು.

ಕನ್ನಡ ನವೋದಯ ಸಾಹಿತ್ಯ ಸಂದರ್ಭದಲ್ಲಿ ಮಹತ್ವದ ಕೊಡುಗೆಯನ್ನು ನೀಡಿದ ಶಾಂತ ಕವಿಗಳು ಅರವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಕೀಚಕವಧೆ, ಪಾರ್ವತಿ ಪರಿಣಯ,(ಬಾಣ ಕವಿಯ ಸಂಸ್ಕೃತ ನಾಟಕದ ಭಾಷಾಂತರ) ಕಾಳಿದಾಸ ಕವಿಯ ಮೇಘದೂತ, ಶಾಕುಂತಲ, ಋತು ಸಂಹಾರ, ಮೃಚ್ಛಕಟಿಕ (ಅನುವಾದಗಳು), ಸೀತಾರಣ್ಯ ಪ್ರವೇಶ, ಹರಿಶ್ಚಂದ್ರ ಸತ್ವ ಪರೀಕ್ಷಾ, ಮುಂತಾದ ಪೌರಾಣಿಕ ಕೃತಿಗಳು, ಅಡ್ಡ ಕತೆಗಳ ಬುಕ್ಕು, ಕನ್ನಡ ದಾಸಯ್ಯನ ಪದ್ಯಗಳು, ಕನ್ನಡಿಗರಿಗೆ ಸವಾಲುಗಳು, ವ್ಯಭಿಚಾರನರ್ಥ ಸಿಂಧು, ಕಾಲಮಹಿಮೆ, ಕಾಳಾಸುರ ಮುಂತಾದ ಹಾಸ್ಯ ಪ್ರಬಂಧಗಳು, ಶೃಂಗಾರ ಸಾಗರ, ವಿರಹ ತರಂಗ, ಶೃಂಗಾರ ಪದ ಸಂಗ್ರಹ, ರಸಿಕ ವಿಚಾರ- ಮುಂತಾದ ಶೃಂಗಾರ ಪ್ರಧಾನ ರಚನೆಗಳು ಸೇರಿವೆ. ಇದರೊಂದಿಗೆ ಭಾವಗೀತೆ, ದುಂದುಮೆ ಲಾವಣಿ, ಆಲಾಯಿ ಪದಗಳನ್ನೂ ರಚಿಸಿದ್ದಾರೆ. ಈ ಸ್ಫೂರ್ತಿದಾಯಕ ಕೃತಿಗಳು ಸುಪ್ತಾವಸ್ಥೆಯಲ್ಲಿದ್ದ ನಾಡ ಜನತೆಯನ್ನು ಜಾಗೃತಗೊಳಿಸಿದವಲ್ಲದೆ, ಕನ್ನಡ ಸಂಸ್ಕೃತಿಯನ್ನು ಸಂವರ್ಧಿಸುವಲ್ಲಿ ಪ್ರಧಾನ ಪಾತ್ರ ವಹಿಸಿದವು."ರಾಷ್ಟ್ರೀಯತ್ವವೇ ಯುಗಧರ್ಮ" ಎಂದು ಸಾರಿ, ಆ ದಿಶೆಯಲ್ಲಿ ದುಡಿದದ್ದು ಶಾಂತ ಕವಿಗಳ ಹಿರಿಮೆ.

**ಸಾಹಿತ್ಯ ಸಕ್ಕರಿ:**

ನಾಡು-ನುಡಿಗಾಗಿ ನಿರಂತರವಾಗಿ ದುಡಿದ ಶಾಂತ ಕವಿಗಳಿಗೆ ಅವರ ಹೆಸರಲ್ಲಿದ್ದ "ಸಕ್ಕರೆ" ವೈಯಕ್ತಿಕ ಬದುಕಿನಲ್ಲಿ ಮಾತ್ರ ದೊರೆಯಲೇ ಇಲ್ಲ. ಬಡತನದ ಸದಾ ಅವರನ್ನು ಬೆಂಬತ್ತಿತ್ತು. ಸಾಂಸಾರಿಕ ಸಂಕಷ್ಟ, ದುಃಖಗಳ ಬವಣೆ ತಪ್ಪಲಿಲ್ಲ. ಯಾವುದಕ್ಕೂ ಹಿಂಜರಿಯದೇ, ಕೈಯೊಡ್ಡಿ ಬೇಡದೇ ಸ್ವಾಭಿಮಾನದಿಂದ ಬಾಳಿದ ವಿರಳ ವ್ಯಕ್ತಿತ್ವ. ಸಹ ಧರ್ಮಿಣಿಯ ವಿಯೋಗದಿಂದ ಅನ್ಯ ಮನಸ್ಕರಾಗದೇ ಜೀವನಕ್ಕೆ ಮುಕ್ತಿ ದೊರೆಯಿತೆಂದು ಭಾವಿಸಿ, ಕನ್ನಡ ಸಾಹಿತ್ಯ ಸಂಸ್ಕೃತಿಯ ಸೇವೆಗೆ ಸಂಪೂರ್ಣವಾಗಿ ತಮ್ಮನ್ನು ಅರ್ಪಿಸಿಕೊಂಡು ಅದರಲ್ಲಿಯೇ ಧನ್ಯತೆ ಪಡೆದರು.

**" ಮೆರವಣಿಗೆ ಮಿಗಿಲಾಯ್ತು! ಸಾಹಸವು ಹಿರಿದಾಯ್ತು!**
**ಧರೇಯೊಳುದಿಸಿದ ಕಾರ್ಯ ಸಫಲವಾಯ್ತು!!**
**ಪರಮ ಕರ್ನಾಟಕದ, ಕೀರ್ತಿ ವಿಸ್ತರವಾಯ್ತು!**
**ಹರುಷ ನಿರ್ಭರವಾಯ್ತು ಶಾಂತೇಶಗೆ!"**

ಎಂದು ಹಾಡುತ್ತಲೇ ಈ ಕನ್ನಡದ ಕಣ್ಮಣಿ ತಮ್ಮ ಬದುಕಿನ ರಂಗ ವೇದಿಕೆಯಿಂದ (15-3-1920) ಮರೆಯಾದರು.

**ನಟ ತೆರೆಯ ಮರೆಯಾದ ಆಟ ತೀರಿಸಿಕೊಂಡು**
**ಭಟ ಸಮರದಿಂದ ತೆರಳಿದ ಅರಸನರಮನೆಗೆ**
**ಪಟುಪಾಡುಗಾರ ತುಟಿ ಮುಚ್ಚಿದನು ನಾಡು**
**ನುಡಿಗಳ ಹಾಡನು ಹಾಡಿ.**

**ಆಟಮಟದ ಮಾತಲ್ಲ, ನಾಡೆನಾರಾಯಣನು**
**ದಿಟವಾಗಿ 'ನುಡಿಯೆಸಿರಿ' ಎಂದು ಕೀರ್ತನೆಗೈದು**
**ಹಟದಿ ಕೀರ್ತನಗಾರ ಬೆವರನೊರಸಲು ಹಿಂದೆ**
**ಸರಿದ ವಿಶ್ರಾಂತಿಗಾಗಿ.....**

ಎಂದು ಅವರ ಅಗಲಿಕೆಯನ್ನು ದ.ರಾ.ಬೇಂದ್ರೆ ಅವರು "ಶಾಂತಕವಿಗಳ ವಿಶ್ರಾಂತಿ" ಎಂಬ ಕವಿತೆ ರಚಿಸುವ ಮೂಲಕ ಅವರ ಆತ್ಮಕ್ಕೆ ಶಾಂತಿ ಕೋರಿದ್ದರು.

ಹೊಸಗನ್ನಡ ಕಾವ್ಯ, ನಾಟಕ, ರಂಗಭೂಮಿಗೆ ಅವಿಶ್ರಾಂತವಾಗಿ ದುಡಿದ ಈ ಮಹನೀಯರು ಇಂದು ನಮ್ಮ ಮುಂದೆ ಇಲ್ಲ. ಆದರೆ ಕನ್ನಡದ ಬಗೆಗಿನ ಅವರ ಚಿರಂತನ ಚಿಂತನೆ ಇಂದಿನವರಿಗೆ ಸ್ಫೂರ್ತಿಯಾಗುವಂತಹ ಸ್ಮರಣೆಯ ಕಾರ್ಯಗಳು ಜರುಗಬೇಕು. ಕಾಲ ಗರ್ಭ ಸೇರುವ ಮೊದಲೇ ಅವರ ಕೃತಿಗಳ ಸಮಗ್ರ ಸಂಗ್ರಹ ಹಾಗೂ ಮುದ್ರಣ ಕಾರ್ಯವಾಗಬೇಕು. ರಚನಾತ್ಮಕ ಕೆಲಸ ಮಾಡಲು ಸಾಕಷ್ಟು ಅವಕಾಶಗಳಿದ್ದು, ನಾಟಕ ಅಕಾಡೆಮಿ, ಸಾಹಿತ್ಯ ಪರಿಷತ್ತು, ಕನ್ನಡ ವಿಶ್ವವಿದ್ಯಾಲಯಗಳು ಈ ದಿಶೆಯಲ್ಲಿ ಗಮನ ಹರಿಸಿ ಮನ್ನಡೆಯಬೇಕಷ್ಟೇ.




For More Job News Visit: www.kpscvaani.com

ಕರ್ನಾಟಕ ಸರ್ಕಾರ

# ಕೋವಿಡ್-19

## ಆರಂಭಿಕ ಕೋವಿಡ್-19 ಪರೀಕ್ಷೆಯು ಜೀವಗಳನ್ನು ಉಳಿಸುತ್ತದೆ



ಕೋವಿಡ್-19 ವೈದ್ಯಕೀಯ ಸಹಾಯಕ್ಕಾಗಿ ಆಪ್ತಮಿತ್ರ ಸಹಾಯವಾಣಿ **14410** ಗೆ ಕರೆ ಮಾಡಿ

#KarnatakaFightsCorona

ಎಲ್ಲರಿಗೂ ಆರೋಗ್ಯ ಎಲ್ಲೆಡೆಯೂ ಆರೋಗ್ಯ

For More Job News Visit: www.kpscvaani.com



# ಕನ್ನಡದ ತಾಯಿ ಭುವನೇಶ್ವರಿಯ
# ಏಕೈಕ ದೇವಾಲಯ

ವಿದ್ಯಾ ವಿ. ಹಾಲಭಾವಿ



**ಕ**ನ್ನಡಿಗರ ಇತಿಹಾಸ ಕಾಶಿ ಎಂದೇ ಬಣ್ಣಿಸಬಹುದಾದ ಉತ್ತರ ಕನ್ನಡ ಜಿಲ್ಲೆಯು ಪ್ರಾಕೃತಿಕ ಸೌಂದರ್ಯದ ಬೀಡು. ಈ ಜಿಲ್ಲೆಯ ಸಿದ್ಧಾಪುರ ತಾಲೂಕಿನ ಕುಮಟಾರಸ್ತೆಯಲ್ಲಿ ಸುಮಾರು ಎಂಟು ಕಿಲೋಮೀಟರ್ ದೂರದಲ್ಲಿರುವ ಭುವನಗಿರಿಯ ಶಿರದಲ್ಲಿ ಕನ್ನಡಿಗರ ಆರಾಧ್ಯ ದೈವ ಭುವನೇಶ್ವರಿ ದೇವಿಯ ದೇವಾಲಯವಿದೆ. ಇಡೀ ಕರ್ನಾಟಕದಲ್ಲಿ ಕನ್ನಡಿಗರ ಮಾತೆ ಭುವನೇಶ್ವರಿ ದೇವಿಗೆ  ದೇವಾಲಯವನ್ನು ಅರ್ಪಿಸಿರುವ ಏಕೈಕ ಸ್ಥಳ ಭುವನಗಿರಿ.

ಬೆಟ್ಟದ ತಪ್ಪಲಿನಲ್ಲಿರುವ ಈ ದೇವಾಲಯವು ಮೂರು ಶತಮಾನಗಳಷ್ಟು ಹಳೆಯದಾಗಿದೆ. ಇದನ್ನು 350 ಮೆಟ್ಟಿಲುಗಳನ್ನು ಏರಿದ ನಂತರ ತಲುಪಬಹುದು. ತೆಂಗು ಕಂಗುಗಳ ಮಧ್ಯೆ ನಿತ್ಯ ಹರಿದ್ವರ್ಣ ಮರಗಳಿಂದ ಆವೃತವಾಗಿರುವ ಈ ದೇಗುಲವು ನೈಸರ್ಗಿಕವಾಗಿ ಸುಂದರವಾಗಿದೆ. ಕಣ್ಮನ ತಣಿಸುವ ಮಲೆನಾಡಿನ ಸೊಬಗಿನ ತಾಣದಲ್ಲಿ



For More Job News Visit: www.kpscvaani.com

**ನಮ್ಮ ಕನ್ನಡದ ತಾಯಿ ಭುವನೇಶ್ವರಿಯನ್ನು ಸಾಮಾನ್ಯವಾಗಿ ನಾವೆಲ್ಲರು ಚಿತ್ರಪಟದಲ್ಲಿ ಮಾತ್ರ ನೋಡಿರುತ್ತೇವೆ. ಆದರೆ ಈ ತಾಯಿಗೆ ಉತ್ತರ ಕನ್ನಡ ಜಿಲ್ಲೆಯ ಭುವನಗಿರಿಯಲ್ಲಿ ದೇವಾಲಯವನ್ನು ನಿರ್ಮಾಣ ಮಾಡಲಾಗಿದ್ದು, ಇದು ರಾಜ್ಯದಲ್ಲೇ ಭುವನೇಶ್ವರಿ ದೇವಿಯ ಏಕೈಕ ದೇವಾಲಯವಾಗಿದೆ.**

ಕನ್ನಡಿಗರೊಡತಿ ಭುವನೇಶ್ವರಿ ದೇವಿಯು ಮೂರ್ತಿ ರೂಪದಲ್ಲಿ ವೀರಾಜಮಾನವಾಗಿದ್ದಾಳೆ. ಹಚ್ಚ ಹಸಿರು ಬೆಟ್ಟದ ಮೇಲೆ ಕುಳಿತು ಕನ್ನಡಿಗರನ್ನೆಲ್ಲಾ ಮನಸಾರೆ ಹರಸುತ್ತಿದ್ದಾಳೆ.

ಮಲೆನಾಡಿನ ಹಸಿರ ವನರಾಶಿಯ ನಡುವೆ ಎತ್ತರವಾಗಿರುವ ಬೆಟ್ಟವಿದು. ಭುವನೇಶ್ವರಿ ದೇವಿ ಇಲ್ಲಿ ನೆಲೆ ನಿಂತಿರುವ ಕಾರಣದಿಂದಾಗಿ ಈ ಬೆಟ್ಟವು ಭುವನಗಿರಿಯೆಂಬ ಹೆಸರು ಪಡೆದುಕೊಂಡಿದೆ. ಭುವನೇಶ್ವರಿ ದೇವಿಯು ಭಾರತ ಮಾತೆ ಅಥವಾ ವಂಗ ಮಾತೆ ಇತ್ಯಾದಿಯಾಗಿ ಒಂದು ರಾಷ್ಟ್ರ ಅಥವಾ ರಾಜ್ಯಕ್ಕೆ ಗೌರವ ಸೂಚಿಸಲು ಮೂರ್ತಗೊಳಿಸಿದ ದೇವಿ ರೂಪವಲ್ಲ. ಭುವನಕ್ಕೆ ಅಂದರೆ ಇಡೀ ಜಗತ್ತಿಗೆ, ಈಶ್ವರಿ ಎಂದರೆ ಒಡತಿ ಅಥವಾ ಅಧಿನಾಯಕಿ ಎಂಬ ಅರ್ಥದಲ್ಲಿ ಆ ದೇವಿಯನ್ನು ಭುವನೇಶ್ವರಿ ಎನ್ನುತ್ತಾರೆ.

**ಭುವನಗಿರಿಯ ಕನ್ನಡದ ತಾಯಿ ಭುವನೇಶ್ವರಿ ದೇವಾಲಯವನ್ನು ವಿಜಯನಗರ ಸಾಮ್ರಾಜ್ಯದ ಬಿಳಗಿ ರಾಜವಂಶದ ಕೊನೆಯ ದೊರೆ ಬಸವೇಂದ್ರರು 1692ರಲ್ಲಿ ನಿರ್ಮಿಸಿದರು.**





ಭುವನೇಶ್ವರಿ ದೇವಿಯ ದೇಗುಲವು ಪ್ರಕೃತಿ ಪ್ರಿಯರಿಗೆ ಹಾಗೂ ಆಧ್ಯಾತ್ಮಿಕ ಆರಾಧಕರಿಗೆ ಅತ್ಯಂತ ಪ್ರಶಂಸನೀಯ ಸ್ಥಳವಾಗಿದೆ. ದೇವಿಯನ್ನು ವರ್ಷದ ಎಲ್ಲಾ ದಿನಗಳಂದು ಮಂತ್ರಗಳನ್ನು ಪಠಿಸುತ್ತಾ ನೈವೇದ್ಯ, ಅಭಿಷೇಕ ಮುಂತಾದ ಸಂಪೂರ್ಣ ಧಾರ್ಮಿಕ ವಿಧಿವಿಧಾನಗಳಿಂದ ಪೂಜಿಸಲಾಗುತ್ತದೆ. ಈ ದೇಗುಲವು ಅತ್ಯಂತ ಭವ್ಯವಾದ ಇತಿಹಾಸವನ್ನು ಹೊಂದಿದೆ. ದೇಗುಲದ ಶ್ರೀಮಂತ ಐತಿಹಾಸಿಕ ಭೂತಕಾಲವನ್ನು ನೋಡಿದರೆ ಸಾಕು ಈ ಸ್ಥಳದ ಮಹತ್ವವನ್ನು  ಮನಗಾಣಬಹುದಾಗಿದೆ.


ಕನ್ನಡ ಸಾಮ್ರಾಜ್ಯವನ್ನು ಕಟ್ಟಿದ ಕದಂಬ ಅರಸರು ಮೊಟ್ಟ ಮೊದಲು ಕನ್ನಡಿಗರ ತಾಯಿ ಭುವನೇಶ್ವರಿಯನ್ನು ಕಲ್ಪಿಸಿಕೊಂಡರು. ನಂತರ ಅನೇಕ ಕನ್ನಡ ಸಾಮ್ರಾಜ್ಯಗಳು ಭುವನೇಶ್ವರಿಯನ್ನು ತಮ್ಮ ದೇವತೆಯಾಗಿ ಪೂಜಿಸಿದರು. ವಿಜಯನಗರ  ಸಾಮ್ರಾಜ್ಯವನ್ನು ಆಳಿದ ರಾಜರುಗಳು ತಾಯಿ ಭುವನೇಶ್ವರಿ ದೇವಿಗೆ ಪೂಜೆಗೈಯದೇ ಹೊರ ಹೋಗುತ್ತಿರಲಿಲ್ಲ ಹಾಗೂ ಯಾವುದೇ ಕೆಲಸವನ್ನು ಆರಂಭ ಮಾಡುತ್ತಿರಲಿಲ್ಲ.

ಅಂತಿಮವಾಗಿ ಭುವನಗಿರಿಯಲ್ಲಿ ಭುವನೇಶ್ವರಿ ದೇವಾಲಯನ್ನು ನಿರ್ಮಿಸಿದವರು ಬಿಳಗಿ ಅರಸರು. ಬಿಳಗಿ ಸಾಮ್ರಾಜ್ಯವು ಉತ್ತರಕನ್ನಡ ಜಿಲ್ಲೆಯ ಗಂಗಾವಳಿ ನದಿಯಿಂದ ಉಡುಪಿ ಜಿಲ್ಲೆಯ ಗಂಗೋಳಿ ನದಿಯವರೆಗೆ ಹರಡಿತ್ತು. ಬಿಳಗಿ ರಾಜರು ಕನ್ನಡ ಭಾಷೆಯ ಮಹಾನ್ ಅಭಿಮಾನಿಗಳಾಗಿದ್ದರಿಂದ, ಕನ್ನಡಿಗರೆಲ್ಲರ ಮಾತೆ ಭುವನೇಶ್ವರಿ ದೇವಿಗೆ ಸಮರ್ಪಿಸಿ  ದೇಗುಲವನ್ನು ನಿರ್ಮಾಣ ಮಾಡಲಾಯಿತು.

ಬಿಳಗಿ ರಾಜವಂಶದ ಕೊನೆಯ ದೊರೆ ಬಸವೇಂದ್ರರು 1692 ರಲ್ಲಿ ಭುವನಗಿರಿಯಲ್ಲಿ ಭುವನೇಶ್ವರಿ ದೇವಾಲಯವನ್ನು ನಿರ್ಮಿಸಿದರೆಂದು ಹೇಳುವುದಕ್ಕೆ ಸಾಕಷ್ಟು ಪುರಾವೆಗಳಿವೆ. ಸ್ಥಳದ ಹಿರಿಯರ ಪ್ರಕಾರ ಹಂಪಿಯ ವಿರುಪಾಕ್ಷ ದೇವಸ್ಥಾನದಲ್ಲಿ ವಿಜಯನಗರ ಆಡಳಿತಗಾರರು ಸ್ಥಾಪಿಸಿದ ಭುವನೇಶ್ವರಿ ದೇವಿಯ ವಿಗ್ರಹವಿದ್ದರೂ, ಭುವನಗಿರಿಯಲ್ಲಿರುವ ಭುವನೇಶ್ವರಿ ಮಾತೆ ತನ್ನದೇ ಆದ ದೇವಾಲಯವನ್ನು ಹೊಂದಿರುವ ಏಕೈಕ ದೇವಾಲಯವಾಗಿದೆ. ■



For More Job News Visit: www.kpscvaani.com



# ಕನ್ನಡ ಭಾಷೆಯ

## ಉಳಿವು ಬೆಳವಣಿಗೆ ನಮ್ಮಿಂದಲೇ

**ಇದು ನನ್ನ ಕನ್ನಡ, ನನ್ನ ಕನ್ನಡವನ್ನು ಉಳಿಸಬೇಕು, ಬೆಳೆಸಬೇಕು, ಅದು ನನ್ನಿಂದಲೇ ಪ್ರಾರಂಭವಾಗಬೇಕು ಎಂದುಕೊಂಡರೆ ಮಾತ್ರ ಕನ್ನಡವನ್ನು ಉಳಿಸಲು, ಬೆಳೆಸಲು ಸಾಧ್ಯ.**

ಡಾ. ಗುರಲಿಂಗಪ್ಪ ಅಂಕದ

**ನಾ**ವು ಕನ್ನಡಿಗರು ಎಲ್ಲದರಲ್ಲೂ ಸ್ವಲ್ಪ ಮುಂಚೂಣಿಯಲ್ಲಿರುವಂತೆ ಭಾಷೆಯಲ್ಲೂ ಹಾಗೇ. ನಮಗೆ ಎಲ್ಲ ಭಾಷೆಗಳೂ ಗೊತ್ತೆಂದು ತೋರಿಸಲು ನಾವು ಎದುರಿಗಿರುವ ವ್ಯಕ್ತಿ ಮಾತನಾಡುವ ಭಾಷೆಯಲ್ಲೇ ಮಾತನಾಡುತ್ತೇವೆ. ಇದು ನಮ್ಮ ದೊಡ್ಡ ಗುಣವಲ್ಲ, ದಡ್ಡ ಗುಣ ಎಂದರೆ ತಪ್ಪಾಗಲಾರದು.

ತಾಯಿಯೇ ಮೊದಲ ಗುರು, ಮನೆಯೇ ಮೊದಲ ಪಾಠಶಾಲೆ ಎಂಬುದು ಸುಳ್ಳಲ್ಲ. ಚಿಕ್ಕ ಮಕ್ಕಳು ತಂದೆ-ತಾಯಿಯ ಮಾತುಗಳನ್ನೇ ಅನುಕರಣೆ ಮಾಡಿ ಕಲಿಯುತ್ತವೆ. ಇಂದು ನಾವು ನಮ್ಮ ಮಕ್ಕಳಿಗೆ ಅಮ್ಮ- ಅಪ್ಪ ಎಂದು ಕಲಿಸುವ ಬದಲು, ಮಮ್ಮಿ-ಡ್ಯಾಡಿ ಎಂದು ಕಲಿಸುತ್ತಿದ್ದೇವೆ. ತಂದೆ-ತಾಯಂದಿರು ಕನ್ನಡ ಶಾಲೆಗಳಲ್ಲೇ ಓದಿ ಈ ಮಟ್ಟಕ್ಕೆ ಬಂದಿದ್ದರೂ, ಅವರಿಗೆ ಕನ್ನಡ ಶಾಲೆಗಳ ಮೇಲೆ ನಂಬಿಕೆ ಇಲ್ಲವೋ ಅಥವಾ ಬೇರೆಯವರ ಮಕ್ಕಳು ಇಂಗ್ಲಿಷ್‌ನಲ್ಲಿ ಪಟಪಟನೆ ಮಾತನಾಡುವುದನ್ನು ನೋಡಿಯೋ ಅಥವಾ ಭವಿಷ್ಯದಲ್ಲಿ ಇಂಗ್ಲಿಷ್ ಭಾಷೆಯೇ ಸರ್ವಸ್ವ ಎಂದು ತಿಳಿದೋ ತಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮ ಶಾಲೆಗೆ ಸೇರಿಸುತ್ತಿದ್ದಾರೆ.

ಮಕ್ಕಳಿಗೆ ಕನ್ನಡದಲ್ಲಿ ಪದ್ಯಗಳನ್ನು ಹೇಳಿಕೊಡುವ ಬದಲು 'ಟ್ವಿಂಕಲ್ ಟ್ವಿಂಕಲ್ ಲಿಟಲ್ ಸ್ಟಾರ್' ಎಂದು ಕಲಿಸಲು ಮುಂದಾಗುತ್ತಿದ್ದಾರೆ. ಇಂದಿನ ಕಾಲಕ್ಕೆ ತಕ್ಕಂತೆ ಅಜ್ಜ-ಅಜ್ಜಿಯರು ಕೂಡ ತಮ್ಮ ಮೊಮ್ಮಕ್ಕಳಿಗೆ ಕಷ್ಟಪಟ್ಟು ಇಂಗ್ಲಿಷ್‌ನಲ್ಲೇ ಕಥೆಗಳನ್ನು ಹೇಳಿಕೊಡುವ ಹಂತ ತಲುಪಿದ್ದಾರೆ. ಅಂದರೆ ಎಲ್ಲರೂ ಎಷ್ಟರ ಮಟ್ಟಿಗೆ ಇಂಗ್ಲಿಷ್ ವ್ಯಾಮೋಹಕ್ಕೆ ಒಳಗಾಗುತ್ತಿದ್ದೇವೆ ನೋಡಿ.



For More Job News Visit: www.kpscvaani.com



ಇನ್ನು ಅಂಗಡಿ-ಬೀದಿಗಳ ನಾಮಫಲಕಗಳಿಗೆ ಬಂದರಂತೂ ಅದ್ಭುತಗಳು ರಾರಾಜಿಸುತ್ತವೆ. ಒತ್ತಕ್ಷರ, ದೀರ್ಘ, ಹ್ರಸ್ವ ಮುಂತಾದ ವ್ಯಾಕರಣ ದೋಷಗಳು ಎದ್ದು ಕಾಣುತ್ತವೆ. ಇದು ಆ ಪೇಂಟರ್‌ನ ತಪ್ಪಲ್ಲ. ಅವನು ಅನಕ್ಷರಸ್ಥನೂ ಇರಬಹುದು. ಆದರೆ ನಾಮಫಲಕ ಬರೆಸುವವರು ಜಾಗೃತರಾಗಿ ತಿಳಿದವರಿಂದ ಸರಿಯಾಗಿ ಬರೆಸಿಕೊಂಡು ಬರೆಸುವುದು ಉತ್ತಮ. ಆಟೋದ ಹಿಂಬದಿಯ ಬರಹ, ನುಡಿಮುತ್ತುಗಳಂತೂ ಅಪಾರ್ಥಕ್ಕೆ ಎಡೆ ಮಾಡಿಕೊಡುವುದರಲ್ಲಿ ಸಂಶಯವೇ ಇಲ್ಲ.

ಉದ್ಯಾನ ನಗರಿಯ ಸಾಫ್ಟ್ ವೇರ್ ಕಂಪನಿಯ ಮಂದಿಯಂತೂ ಕನ್ನಡ ಎಂದರೆ ಹುಬ್ಬೇರಿಸುತ್ತಾರೆ. ಉದ್ಯೋಗ ಸ್ಥಳದಲ್ಲಿ ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಇಂಗ್ಲಿಷ್ ಬಳಸಿ. ಆದರೆ ಕನ್ನಡ ಮರೆಯಬೇಡಿ. ಮನೆಯಲ್ಲಿ ಮಕ್ಕಳೊಂದಿಗೆ ಕನ್ನಡದಲ್ಲೇ ಮಾತನಾಡಿ.

ನಮ್ಮ ರಾಜ್ಯದಲ್ಲಿ ಭಾಷೆಗೆ ಸಂಬಂಧಿಸಿದ ವಿಷಯ ಬಂದಾಗ ಮಾಧ್ಯಮಗಳಲ್ಲಿ ಮೊದಲು ಕಾಣಿಸಿಕೊಳ್ಳುವವರು ಕನ್ನಡಪರ ಸಂಘಟನೆಗಳು. ಇದು ಒಳ್ಳೆಯ ಸಂಗತಿಯೇ, ಆದರೆ ಪ್ರತಿಭಟನೆಯ ವೇಳೆ ಅವರು ನಡೆದುಕೊಳ್ಳುವ ರೀತಿ ಮಾತ್ರ ಹೇಳತೀರದು. ಪ್ರತಿಭಟನೆಗಳ ಶೈಲಿ ಬದಲಾಗಲಿ. ಇದು ಕನ್ನಡ ಭಾಷೆಗೇ ಅವಮಾನ ಮಾಡುವಂಥದು. ಇನ್ನು ಕನ್ನಡ ಸಂಘಟನೆಯಲ್ಲಿ ಭಾಗವಹಿಸಿ ಮಾಧ್ಯಮಗಳ ಮೂಲಕ ಪ್ರಚಾರ ಗಿಟ್ಟಿಸಿಕೊಳ್ಳುವವರೆಲ್ಲರೂ ತಮ್ಮ ಮಕ್ಕಳು ಮತ್ತು ಮೊಮ್ಮಕ್ಕಳನ್ನು ಕನ್ನಡ ಮಾಧ್ಯಮ ಶಾಲೆಯಲ್ಲೇ ಓದಿಸುತ್ತಿದ್ದಾರೆಯೇ ಗೊತ್ತಿಲ್ಲ.

ಪರಭಾಷಾ ಐ.ಎ.ಎಸ್ ಅಧಿಕಾರಿಗಳು ನಮ್ಮ ರಾಜ್ಯದಲ್ಲಿ ಎಷ್ಟು ಸುಂದರವಾಗಿ ಕನ್ನಡ ಮಾತನಾಡುತ್ತಾರೆ. ಅವರನ್ನು ನೋಡಿ ನಾವು ಕನ್ನಡಿಗರು ಕಲಿಯುವಂತ ಪರಿಸ್ಥಿತಿ ಎದುರಾಗಿದೆ ಎಂದರೆ ತಪ್ಪಾಗಲಾರದು.

ಕನ್ನಡ ಸರಳ-ಸುಂದರವಾದ ಭಾಷೆ. ಇಂಗ್ಲಿಷ್‌ನ ಒಂದು ಪದವನ್ನು ಹತ್ತಾರು ರೀತಿ ಉಚ್ಚರಿಸಬಹುದು, ಅರ್ಥಮಾಡಿಕೊಳ್ಳಬಹುದು ಆದರೆ ಕನ್ನಡ ಹಾಗಲ್ಲ. ಬರೆದದ್ದನ್ನೇ ಓದಬೇಕು, ಉಚ್ಚರಿಸಬೇಕು ಹಾಗೂ ಅರ್ಥವೂ ಒಂದೇ ಎಂಬುದೇ ಈ ಭಾಷೆಯ ಹಿರಿಮೆ.

ಇಂದು ಕಂಪ್ಯೂಟರ್, ಮೊಬೈಲ್, ಇಂಟರ್‌ನೆಟ್‌ಗಳನ್ನೂ ಕನ್ನಡದಲ್ಲೇ ಬಳಸುವ ತಂತ್ರಾಂಶಗಳು ಬಂದದ್ದು ಕನ್ನಡಕ್ಕೆ ಇನ್ನಷ್ಟು ಪ್ರೋತ್ಸಾಹ ಸಿಕ್ಕಂತಾಗಿದೆ. ಹಳ್ಳಿಗಳಲ್ಲೂ ಈ ತಂತ್ರಜ್ಞಾನಗಳು ಬಳಕೆಯಾಗತೊಡಗಿವೆ ಎಂಬುದು ಸಂತಸದ ವಿಷಯ.

ಇನ್ನು ಕನ್ನಡ ರಾಜ್ಯೋತ್ಸವದಂದು ಮಾತ್ರ 'ಸಿರಿಗನ್ನಡಂ ಗೆಲ್ಗೆ, ಬಾರಿಸು ಕನ್ನಡ ಡಿಂಡಿಮವ, ಕನ್ನಡವೇ ಸತ್ಯ-ಕನ್ನಡವೇ ನಿತ್ಯ' ಎಂದರೆ ಸಾಲದು, ಅದರಂತೆ ನಿತ್ಯ ಕನ್ನಡವನ್ನು ಬಳಸಿ ಅದರ ಉಳಿವು-ಬೆಳವಣಿಗೆಗಾಗಿ ಪ್ರಯತ್ನಿಸಬೇಕು. ಆಗಲೇ ಕನ್ನಡಿಗರಾಗಿ ನಮ್ಮ ಜೀವನ ಸಾರ್ಥಕವಾಗುತ್ತದೆ. ಈ ನಿಟ್ಟಿನಲ್ಲಿ ರಾಜ್ಯದ ಹಲವಾರು ಸಾಹಿತಿಗಳು, ಲೇಖಕರು ಹಗಲಿರುಳೂ ಶ್ರಮಿಸುತ್ತಿದ್ದಾರೆ. ಹಾಗಾಗಿ ಅವರಿಗೊಂದು ಧನ್ಯವಾದ ಹೇಳಲೇಬೇಕು.

ಕೊನೆಯದಾಗಿ, 'ಮಾತು ಬೆಳ್ಳಿ-ಮೌನ ಬಂಗಾರ' ಎಂಬಂತೆ ಉಳಿದ ಭಾಷೆಗಳು ಬೆಳ್ಳಿಯಂತೆ, ಆದರೆ "ಕನ್ನಡ" ಶುದ್ಧ ಬಂಗಾರ. ಮನುಷ್ಯನಿಗೆ ಬೆಳ್ಳಿ-ಬಂಗಾರ ಎರಡೂ ಬೇಕು. ಆದರೆ ಎರಡನ್ನೂ ಇಟ್ಟು ಒಂದನ್ನು ಆರಿಸು ಎಂದಾಗ ನಮ್ಮ ಆಯ್ಕೆ ಬಂಗಾರ. ಅಂದರೆ "ಕನ್ನಡ"ವೇ ಆಗಿರಬೇಕೆಂಬುದು ನನ್ನ ಆಸೆ. ಒಟ್ಟಿನಲ್ಲಿ ಬರೆ ಮಾತಿನಲ್ಲಿ ನಾನು ಕನ್ನಡ ಅಭಿಮಾನಿ ಎಂದು ಹೇಳಿಕೊಳ್ಳುವ ಬದಲು ಕನ್ನಡದ ಉಳಿವು, ಬೆಳವಿಗಾಗಿ ನಿಸ್ವಾರ್ಥ ಸೇವೆಯನ್ನು ಮಾಡುವವರೇ ನಿಜವಾದ ಕನ್ನಡ ಅಭಿಮಾನಿ. ಎಲ್ಲರೂ ಅಂತಹ ಕನ್ನಡ ಅಭಿಮಾನಿಗಳಾದರೆ ಮಾತ್ರ ಕನ್ನಡ ಭಾಷೆಯ ಕಂಪು ಮುಗಿಲೆತ್ತರಕ್ಕೆ ಹರಡಲು ಸಾಧ್ಯ. ಹಾಗಾದರೆ ಬನ್ನಿ ಎಲ್ಲರೂ ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗೋಣ.



For More Job News Visit: www.kpscvaani.com



# ಮೈಸೂರಿನ ದೊಡ್ಡ ಗಡಿಯಾರ

ಎಂ.ಎಸ್.ಚಂದ್ರಶೇಖರ್ ಅಯ್ಯರ್

**ಮೈಸೂರಿನ ಜನಪ್ರಿಯ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 25 ವರ್ಷ ಆಳ್ವಿಕೆಯನ್ನು ಪೂರೈಸಿದ ನೆನಪಿಗಾಗಿ ಸ್ಥಾಪಿಸಲಾದ 'ಸಿಲ್ವರ್ ಜ್ಯೂಬಲಿ ಕ್ಲಾಕ್ ಟವರ್' ಮೈಸೂರಿನ ಆಕರ್ಷಕ ಸ್ಮಾರಕಗಳಲ್ಲಿ ಒಂದು.**

**ಸಾಂ**ಸ್ಕೃತಿಕ ರಾಜಧಾನಿ ಮೈಸೂರಿನಲ್ಲಿ ಪ್ರೇಕ್ಷಣಿಕ ಸ್ಥಳಗಳಿಗೆ ಕೊರತೆಯಿಲ್ಲ. ಐತಿಹಾಸಿಕ ಮಹತ್ವವುಳ್ಳ, ಅರಮನೆಗಳು, ಹೂದೋಟಗಳು, ಕುಕ್ಕರಹಳ್ಳಿ ಕರೆ, ಕಾರಂಜಿ ಕೆರೆ, ಚಾಮುಂಡಿ ಬೆಟ್ಟ, ಮೃಗಾಲಯ, ಸನಿಹದಲ್ಲಿ ಬೃಂದಾವನ ಉದ್ಯಾನವನ, ಮೈಸೂರು ಅರಮನೆ ಮುಂತಾದ ಪಾರಂಪರಿಕ ಹಾಗೂ ಪ್ರವಾಸ ತಾಣಗಳು ಅರಮನೆ ನಗರಿಯ ಮಡಿಲಲ್ಲಿದೆ. ಜೊತೆಗೆ ಪುರಾತನ ಪರಂಪರೆ, ಜಾತ್ರೆ, ಉತ್ಸವ, ಸಂಗೀತ, ನೃತ್ಯ, ಸಾಹಿತ್ಯ-ಕಲೆಗಳನ್ನು ಜೀವಂತವಾಗಿರಿಸಿಕೊಂಡಿರುವ ಸುಂದರ ಪ್ರಹಾರಗಳನ್ನು ತಾಳಿಕೊಂಡು ಮುಗಿಲೆತ್ತರಕ್ಕೆ ನಿಂತಿರುವ ಈ ಭವ್ಯ ಗೋಪುರದ ಗಡಿಯಾರ ಇಂದಿಗೂ ಪ್ರವಾಸಿಗರ ಆಕರ್ಷಣೀಯ ಪಟ್ಟಿಯಲ್ಲಿ ತನ್ನ ಸ್ಥಾನ ಉಳಿಸಿಕೊಂಡಿದೆ.





For More Job News Visit: www.kpscvaani.com



**ಗೋಪುರದಲ್ಲಿರುವ ಹಿತ್ತಾಳೆಯ ಗಂಟೆಯನ್ನು ಫ್ರಾನ್ಸ್‌ನಿಂದ ತರಿಸಲಾಗಿದೆ. ಆ ಗಂಟೆಗೆ ಕಬ್ಬಿಣದ ಸುತ್ತಿಗೆಯೊಂದು ಹೊಡೆದಾಗ ಶಬ್ದ ಅಲೆ-ಅಲೆಯಾಗಿ ಕೇಳಿ ಬರುತ್ತದೆ.**

ಅರಮನೆ ಹಾಗೂ ಪುರಭವನದ ಸಮೀಪದಲ್ಲಿ, ನಗರ ಮಧ್ಯ ಭಾಗದಲ್ಲಿರುವ ಈ ಕ್ಲಾಕ್ ಟವರ್ ಎಂದು ಕರೆಯಲಾಗುವ ಈ ದೊಡ್ಡ ಗಡಿಯಾರಕ್ಕೆ ಒಂದು ಮಹತ್ವದ ಸ್ಥಾನವಿದೆ.

ಶ್ರೀ ಪ್ರಭವನಾಮ ಸಂವತ್ಸರದ, ಶ್ರಾವಣ ಮಾಸ, ಶುಕ್ಲಪಕ್ಷ, ಸೋಮವಾರ ದಿನಂಕ 8-8-1927 ರಲ್ಲಿ ಈ ದೊಡ್ಡ ಗಡಿಯಾರವನ್ನು ಪ್ರತಿಷ್ಠಾಪಿಸಲಾಯಿತು. ಅಂದಿನಿಂದಲೂ ಇದು ಮೈಸೂರು ಜನರ ಸಮಯದ ಒಡನಾಡಿಯಾಗಿದ್ದು, 93 ವಸಂತಗಳನ್ನು ಕಂಡಿದೆ.

ಗಡಿಯಾರದ ಮೇಲ್ಭಾಗದ ಗೋಪುರದಲ್ಲಿ ಹಿತ್ತಾಳೆಯ ಗಂಟೆಯಿದೆ. ಆ ಗಂಟೆಗೆ ಕಬ್ಬಿಣದ ಸುತ್ತಿಗೆಯೊಂದು ಹೊಡೆದಾಗ ಶಬ್ದ ಅಲೆ-ಅಲೆಯಾಗಿ ಕೇಳಿ ಬರುತ್ತದೆ. ಈ ಹಿತ್ತಾಳೆಯ ಗಂಟೆಯನ್ನು ಫ್ರಾನ್ಸ್‌ನಿಂದ ತರಿಸಲಾಗಿದೆ. ಇದು 4 ಅಡಿ ಎತ್ತರ, ನಾಲ್ಕು ಅಂಗುಲ ದಪ್ಪ, ಐವತ್ತು ಅಂಗುಲ ಅಗಲವಿದೆ. ಗಡಿಯಾರದ ಯಂತ್ರ ಫ್ರಾನ್ಸ್ (France) ನಲ್ಲಿ ತಯಾರಾಗಿದೆ. ಹಾಗಾಗಿ ಕಂಪನಿಯ ಹೆಸರನ್ನು ಫ್ರೆಂಚ್ ಭಾಷೆಯಲ್ಲಿ ಮುದ್ರಿಸಲಾಗಿದೆ. ಗಂಟೆಯ ಸುತ್ತಲೂ ಹೂಬಳ್ಳಿಯ ಸಾಲುಗಳಿವೆ. ಒಂದು ತೊಲೆಗೆ ಗಂಟೆಯನ್ನು ತೂಗು ಹಾಕಲಾಗಿದೆ. ಅದರ ಮೇಲ್ಭಾಗದಲ್ಲಿ ಗುಮ್ಮಟವಿದೆ. ಅದರ ಮೇಲೆ ಚಿನ್ನ ಲೇಪಿತ ಕಳಸವಿದೆ.

ಮೊದಲು ನಾಲ್ಕು ದಿಕ್ಕಿನಲ್ಲೂ ರೋಮನ್ ಅಂಕೆಗಳಿದ್ದ ಫಲಕ (Dial) ಗಳಿತ್ತು. ಆದರೆ 1994 ರಲ್ಲಿ ಕನ್ನಡ ಜಾಗೃತಿಕ ವರ್ಷದ ನೆನಪಿಗಾಗಿ ರೋಮನ್ ಸಂಖ್ಯೆಗಳನ್ನು ತೆಗೆದು ಕನ್ನಡ ಸಂಖ್ಯೆಗಳನ್ನು ಅಳವಡಿಸಲಾಯಿತು.

ಗಡಿಯಾರದಲ್ಲಿ ಸಮಯ ವ್ಯತ್ಯಾಸವಾದರೆ ಗೋಪುರದ ಒಳಗಿರುವ ಮೀಟರಿನ ಮೂಲಕ ಗಡಿಯಾರದ ಯಂತ್ರ ಇರುವ ಜಾಗಕ್ಕೆ ಹೋಗಿ ಗಡಿಯಾರವನ್ನು ಸರಿಪಡಿಸಬಹುದು. ಇದು 92 ಅಡಿ ಎತ್ತರವಿದೆ. ಗೋಪುರಕ್ಕೆ ವಿದ್ಯುತ್ ದೀಪಗಳನ್ನು ಅಳವಡಿಸಲಾಗಿದೆ. ಗೋಪುರದ ಮಧ್ಯ ಭಾಗದಲ್ಲಿರುವ ಗಂಡಭೇರುಂಡಕ್ಕೆ ವಿಶೇಷ ದಿವಸಗಳಲ್ಲಿ ದೀಪಾಲಂಕಾರವಿರುತ್ತದೆ. ಇದು ನಿಜಕ್ಕೂ ನಯನ ಮನೋಹರ ದೃಶ್ಯ.

ಮೈಸೂರು ಚರಿತ್ರೆಯಲ್ಲಿ ಚಿನ್ನದ ಕಾಲವೆಂದು ಹೆಸರು ಪಡೆದು 25 ವರ್ಷಗಳ ಆಳ್ವಿಕೆಯನ್ನು ಪೂರೈಸಿದ ಜನಪ್ರಿಯ ಜನಾನುರಾಗಿಯಾಗಿದ್ದ ಶ್ರೀಮಾನ್ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ರಜತ ಮಹೋತ್ಸವದ ಸವಿ ನೆನಪಿಗಾಗಿ (ಸ್ಮಾರಕವಾಗಿರುವಂತೆ) 90 ದಿನಗಳಲ್ಲಿ, 9 ಸಾವಿರ ರೂಪಾಯಿ ವೆಚ್ಚದಲ್ಲಿ ಅಂದು ಈ ಗೋಪುರದ ಗಡಿಯಾರವನ್ನು ನಿರ್ಮಾಣ ಮಾಡಲಾಯಿತು. ಹಾಗಾಗಿ ಇದನ್ನು ಸಿಲ್ವರ್ ಜ್ಯೂಬಿಲಿ ಕ್ಲಾಕ್ ಟವರ್ ಎಂದು ಕರೆಯುತ್ತಾರೆ.

ಈ ಗಡಿಯಾರದ ಸ್ಥಾಪನೆಯ ಇತಿಹಾಸವನ್ನು ಕನ್ನಡ, ಇಂಗ್ಲಿಷ್, ಸಂಸ್ಕೃತ ಮತ್ತು ಪರ್ಷಿಯನ್ ಭಾಷೆಗಳಲ್ಲಿ ಅಮೃತಶಿಲೆಯ ಮೇಲೆ ಸುವರ್ಣಾಕ್ಷರದಲ್ಲಿ ಕೆತ್ತಿಸಲಾಗಿದೆ. ಕರ್ನಾಟಕದ ಅತಿ ದೊಡ್ಡ ಗೋಪುರದ ಗಡಿಯಾರವೆಂಬ ಖ್ಯಾತಿಯನ್ನು ಹೊಂದಿರುವ ಈ ದೊಡ್ಡ ಗಡಿಯಾರ ಮೈಸೂರು ನಗರದ ಸೌಂದರ್ಯ ತಿಲಕವೆಂದರೆ ಅತಿಶಯೋಕ್ತಿಯಲ್ಲ. ಮೈಸೂರಿಗೆ ಆಗಮಿಸುವ ಪ್ರವಾಸಿಗರಿಗೆ ಟೂರಿಸ್ಟ್ ಗೈಡ್ ತಪ್ಪದೇ ಈ ಕ್ಲಾಕ್ ಟವರ್ ಅನ್ನು ತೋರಿಸುತ್ತಾರೆ.



For More Job News Visit: www.kpscvaani.com

# ಕೋವಿಡ್-19




ಕೋವಿಡ್-19 ವೈದ್ಯಕೀಯ ಸಹಾಯಕ್ಕಾಗಿ ಆಪ್ತಮಿತ್ರ ಸಹಾಯವಾಣಿ **14410** ಗೆ ಕರೆ ಮಾಡಿ

**#KarnatakaFightsCorona**

ಎಲ್ಲರಿಗೂ ಆರೋಗ್ಯ ಎಲ್ಲೆಡೆಯೂ ಆರೋಗ್ಯ

For More Job News Visit: www.kpscvaani.com

ಜಾತಿ ಪದ್ಧತಿ, ಮೇಲ್ವರ್ಗ–ಕೆಳವರ್ಗದಲ್ಲಿದ್ದ ತಾರತಮ್ಯದ ವಿರುದ್ಧ 15–16 ನೇ ಶತಮಾನದಲ್ಲೇ ತಮ್ಮ ಕೀರ್ತನೆ ಮತ್ತು ಕಾವ್ಯಗಳ ಮೂಲಕ ಸಮಾಜದ ಜನರ ಕಣ್ಣು ತೆರೆಸಿದವರು ಕನಕದಾಸರು.



## ಕೀರ್ತನೆಗಳ ಮೂಲಕ ಸಮಾಜ ಸುಧಾರಣೆ ಮಾಡಿದ ಮಹಾನ್ ಸಂತ

# ಕನಕದಾಸ

ಹೆಚ್.ಶಿವಣ್ಣ



**ಕ**ರ್ನಾಟಕದಲ್ಲಿ ಹರಿದಾಸ ಪರಂಪರೆಗೆ ಸುಮಾರು 500 ವರ್ಷಗಳ ಭವ್ಯ ಇತಿಹಾಸವಿದೆ. ಕನಕದಾಸರು ಮತ್ತು ಪುರಂದರದಾಸರನ್ನು ಕರ್ನಾಟಕದ ಕೀರ್ತನೆ ಸಾಹಿತ್ಯದ ಅಶ್ವಿನಿ ದೇವತೆಗಳು ಎಂದೇ ಪರಿಗಣಿಸಲಾಗುತ್ತದೆ. ಅಲ್ಲದೆ ದಾಸ ಸಾಹಿತ್ಯದ ಕಾಲಘಟ್ಟದಲ್ಲಿ ಇದ್ದ 250ಕ್ಕೂ ಹೆಚ್ಚು ದಾಸರಲ್ಲಿ ಕನದದಾಸರೊಬ್ಬರೇ ಶೂದ್ರ ದಾಸರು.

ಹಾವೇರಿ ಜಿಲ್ಲೆಯ ಶಿಂಗ್ಗಾಂವಿ ತಾಲೂಕಿನ ಬಾಡ ಎಂಬ ಗ್ರಾಮದಲ್ಲಿ ನೆಲೆಸಿದ್ದ ಬಚ್ಚಮ್ಮ ಮತ್ತು ಬೀರಪ್ಪ ನಾಯಕ ದಂಪತಿಗಳ ಮಗನಾಗಿ ಕನಕದಾಸರು 1508 ರಲ್ಲಿ ಜನಸಿದರು ಎಂದು ಇತಿಹಾಸ ಹೇಳುತ್ತದೆ. ತಿಮ್ಮಪ್ಪ ನಾಯಕ ಇವರ ಮೂಲ ಹೆಸರು. ಶ್ರೀಕೃಷ್ಣನ ಅನನ್ಯ ಭಕ್ತರಾಗಿದ್ದ ಕನಕದಾಸರು ಶ್ರೀವ್ಯಾಸರಾಯರ ಬಳಿ ಮಧ್ವ ತತ್ವ ಶಾಸ್ತ್ರವನ್ನು ಕಲಿತವರು.



For More Job News Visit: www.kpscvaani.com

**ಸಮಾಜದ ಅಂಕುಡೊಂಕುಗಳನ್ನು ತಿದ್ದಲು, ಜನರಲ್ಲಿದ್ದ ಮೌಢ್ಯವನ್ನು ನಿವಾರಣೆ ಮಾಡುವ ಸಲುವಾಗಿಯೇ ತಮ್ಮ ಸಾಹಿತ್ಯದ ವಿವಿಧ ಪ್ರಕಾರಗಳಾದ ಕೀರ್ತನೆಗಳು, ಸುಳಾದಿಗಳು, ಉಗಾಭೋಗಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ನೀಡುವ ಮೂಲಕ ಕನ್ನಡ ಜನರ ಸಾರಸ್ವತ ಲೋಕದಲ್ಲಿ ಕನಕದಾಸರು ಅದ್ವಿತೀಯ ಸ್ಥಾನವನ್ನು ಗಳಿಸಿದ್ದಾರೆ ಎಂದು ಹೇಳಬಹುದು.**



**ಕನಕನ ಕಿಂಡಿ**

ಶ್ರೀಕೃಷ್ಣ ಪರಮಾತ್ಮನ ಪರಮಭಕ್ತರಾಗಿದ್ದ ಕನಕದಾಸರು, ಕೃಷ್ಣನ ದರ್ಶನಕ್ಕಾಗಿ ಉಡುಪಿಯ ದೇವಸ್ಥಾನಕ್ಕೆ ಹೋದಾಗ, ಮೇಲ್ವರ್ಗದ ಜನರು ಇವರಿಗೆ ದೇವಸ್ಥಾನದ ಒಳಗೆ ಪ್ರವೇಶ ನೀಡುವುದಿಲ್ಲ. ಆಗ ಕನಕದಾಸರು ದೇವಸ್ಥಾನದ ಹಿಂಭಾಗದಲ್ಲಿ ನಿಂತು "ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೇ" ಎಂದು ಭಾವಪರವಶರಾಗಿ ಹಾಡಿದಾಗ ಕೃಷ್ಣನ ವಿಗ್ರಹವೇ ಹಿಂದಕ್ಕೆ ತಿರುಗಿಕೊಳ್ಳುವುದಲ್ಲದೆ, ಹಿಂಭಾಗದ ಗೋಡೆಯು ಬಿರುಕು ಬಿಟ್ಟು ಕಿಂಡಿಯೊಂದು ನಿರ್ಮಾಣವಾಗುತ್ತದೆ. ಆ ಮೂಲಕ ಕೃಷ್ಣನು ತನ್ನ ಭಕ್ತ ಕನಕದಾಸನಿಗೆ ದರ್ಶನವನ್ನು ನೀಡುತ್ತಾನೆ. ಇದನ್ನೇ "ಕನಕನ ಕಿಂಡಿ" ಎಂದು ಹೇಳವುದು.

ತಿಮ್ಮಪ್ಪನ ಹರಕೆಯಿಂದ ಜನಸಿದ್ದರಿಂದ ಇವರಿಗೆ ತಿಮ್ಮಪ್ಪ ನಾಯಕ ಎಂದು ಹೆಸರಿಡಲಾಯಿತು. ಬಂಕಾಪುರತ ಪ್ರಾಂತ್ಯದ ಸೈನ್ಯ ದಳದ ಸೇನಾದಿಪತಿ ಆಗಿದ್ದ ಅವರ ತಂದೆಯು ತಿಮ್ಮಪ್ಪನಿಗೆ ಅಕ್ಷರಾಭ್ಯಾಸ, ವ್ಯಾಕರಣಗಳನ್ನು ಕಲಿಸುವ ಜೊತೆಗೆ ಕತ್ತಿವರಸೆ, ಕುದುರೆ ಸವಾರಿ ಕಲಿಸಿ, ಮಗನನ್ನು ದಷ್ಟಪುಷ್ಟವಾಗಿ ಬೆಳೆಸಿದ್ದರು. ತಂದೆಯ ಅಕಾಲಿಕ ಮರಣದ ನಂತರ ತಿಮ್ಮಪ್ಪನೇ ಸೇನಾದಿಪತಿಯಾಗಬೇಕಾಯಿತು. ಹೀಗಿರುವಾಗ ವಿಜಯನಗರದ ಅರಸರ ಪರವಾಗಿ ಯುದ್ಧವೊಂದರಲ್ಲಿ ಪಾಲ್ಗೊಳ್ಳಬೇಕಾದ ಸಂದರ್ಭ ಬಂತು. ಆ ಯುದ್ಧದಲ್ಲಿ ತಿಮ್ಮಪ್ಪ ನಾಯಕನು ತನ್ನ ಬಂಧು ಬಳಗ, ಅಪಾರ ಸೈನಿಕಕರನ್ನು ಕಳೆದುಕೊಂಡು ಆಶ್ಚರ್ಯಕರವಾಗಿ ಬದುಕುಳಿದರು. ಶೋಕದಲ್ಲಿರುವಾಗ ಅವರಿಗೆ ಅಶರೀರವಾಣಿಯೊಂದು ನೀನು ದಾಸನಾಗು ಎಂದು ಹೇಳಿದಂತೆ ಭಾಸವಾಗುತ್ತದೆ. ಆ ಕ್ಷಣವೇ ತಿಮ್ಮಪ್ಪನಿಗೆ ಜೀವನದಲ್ಲಿ ವೈರಾಗ್ಯ ಉಂಟಾಗಿ, ಸಾಮ್ರಾಜ್ಯವನ್ನು ಬಿಟ್ಟು ತಂಬೂರಿಯನ್ನು ಹೆಗಲಿಗೆ ನೇತುಹಾಕಿಕೊಂಡು, ಕೈಯಲ್ಲಿ ತಾಳವನ್ನು ಹಿಡಿದು ಕನಕದಾಸರಾಗಿ ಶ್ರೀಹರಿಯನ್ನು ಸ್ತುತಿಸುತ್ತಾ ಲೋಕ ಕಲ್ಯಾಣಕ್ಕೆ ಹೊರಡುತ್ತಾರೆ.

ಸಮಾಜದ ಅಂಕುಡೊಂಕುಗಳನ್ನು ತಿದ್ದಲು, ಜನರಲ್ಲಿದ್ದ ಮೌಢ್ಯವನ್ನು ನಿವಾರಣೆ ಮಾಡುವ ಸಲುವಾಗಿಯೇ ತಮ್ಮ ಸಾಹಿತ್ಯದ ವಿವಿಧ ಪ್ರಕಾರಗಳಾದ ಕೀರ್ತನೆಗಳು, ಸುಳಾದಿಗಳು, ಉಗಾಭೋಗಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ನೀಡುವ ಮೂಲಕ ಕನ್ನಡ ಜನರ ಸಾರಸ್ವತ ಲೋಕದಲ್ಲಿ ಕನಕದಾಸರು ಅದ್ವಿತೀಯ ಸ್ಥಾನವನ್ನು ಗಳಿಸಿದ್ದಾರೆ ಎಂದು ಹೇಳಬಹುದು.


ಅವರು ಜನರನ್ನು ಜಾಗೃತ ಗೊಳಿಸಲು ರಚಿಸಿದ ಕೀರ್ತನೆಗಳು ಇಂದಿಗೂ ಪ್ರಸ್ತುತವಾಗಿವೆ. "ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯೇನಾದರು ಬಲ್ಲಿರಾ" ಎಂದು ಅವರು ವರ್ಗ ತಾರತಮ್ಮದ ವಿರುದ್ಧ ರಚಿಸಿದ ಕೀರ್ತನೆಯು ಇದಕ್ಕೆ ತಕ್ಕ ನಿದರ್ಶನ.

ಸರ್ವಶಕ್ತನಂತೆ ಮೆರೆಯುತ್ತಿರುವ ಮನುಷ್ಯರ ಸ್ವಾತಂತ್ರ್ಯವನ್ನು ಪ್ರಶ್ನಿಸಿದರವರು ಕನಕದಾಸರು. ನಾನು ಸ್ವಾತಂತ್ರ ಎನ್ನುವ ಭ್ರಾಂತಿಯನ್ನು ಕಳೆದುಕೊಂಡ ಮೇಲೆ ಅವನಿಗೆ ಸಿಗುವ ಸ್ವಾತಂತ್ರ್ಯ ಎಂಥದೆಂಬುದನ್ನೂ ವರ್ಣಿಸಿದರು. ಕಳೆದುಕೊಳ್ಳುವುದರಲ್ಲೇ ಬದುಕನ್ನು ಪಡೆದುಕೊಳ್ಳುವ ಗುಟ್ಟು ಅಡಗಿದೆ ಎಂಬುದನ್ನು ಅವರು ಜನರಿಗೆ ತೋರಿಸಿಕೊಟ್ಟರು.

ಸ್ವತಂತ್ರ್ಯ ಕ್ರಾಂತಿಕಾರಕ ಮತ್ತು ಸಮಾಜ ಸುಧಾರಕರಾದ ಕನಕದಾಸರು ಯಾವುದೋ ಒಂದು ಜಾತಿಗೆ ಮಾತ್ರ ಸೀಮಿತರಾದವರಲ್ಲ. ಯಾವುದೇ ಮತಕ್ಕೆ ಕಟ್ಟು ಬೀಳದೆ ಸರ್ವಮತಗಳ ಒಳಿತನ್ನು ಬಯಸಿದವರು. ಹಾಗಾಗಿ ಯಾವುದೇ ಜಾತಿ ಆಗಲಿ, ದಬ್ಬಾಳಿಕೆಗೆ ಒಳಗಾದವರನ್ನು



For More Job News Visit: www.kpscvaani.com



**ಕಾರ್ಯಕ್ರಮವೊಂದರಲ್ಲಿ ಡಾ. ರಾಜ್‌ಕುಮಾರ್ ಅವರಿಗೆ ಕನಕದಾಸರ ಕುರಿತು ಮಾತನಾಡಿ ಎಂದು ಹೇಳಿದಾಗ, "ದೀನ ನಾನು ಸಮಸ್ತ ಲೋಕಕ್ಕೆ ದಾನಿ ನೀನು, ವಿಚಾರಿಸಲು ಮತಿಹೀನ ನಾನು, ಮಹಾಮಹಿಮ ಕೈವಲ್ಯ ಪತಿ ನೀನು, ಏನು ಬಲ್ಲೆನು ನಾನು ನೆರೆ ಸುಜ್ಞಾನ ಮೂರ್ತಿ. ನಿನ್ನ ಸಮನಾರುಂಟೆ ದೇವಾ ರಕ್ಷಿಸು ಅನವರತಾ" ಎಂದು ಕನಕದಾಸರ ಕೀರ್ತನೆಯನ್ನು ಹೇಳಿ ನಾನು ಹೆಚ್ಚು ವಿದ್ಯಾವಂತನಲ್ಲ, ನನಗೆ ಇದಕ್ಕಿಂತ ಇನ್ನು ಏನು ಹೇಳಲು ಬರುವುದಿಲ್ಲ ಎಂದರಂತೆ. ಅಂದರೆ ಕನಕದಾಸರ ಕೀರ್ತನೆಗಳು ಅವಿದ್ಯಾವಂತರಲ್ಲದವರಿಗೂ ತಿಳಿಯುವಂತಹದು ಎಂಬುದನ್ನು ಅವರು ತಿಳಿಸಿದರು.**

ಮೇಲೆತ್ತುವ ಸಲುವಾಗಿ ಅವರು ಮಥುರಾ, ಕಾಶಿ, ಗಯಾ, ದ್ವಾರಕಾ, ಮೊದಲಾಗಿ ರಾಜಸ್ಥಾನ, ತಮಿಳುನಾಡಿ, ಆಂಧ್ರವನ್ನು ಸುತ್ತಿ ಬಂದರು. ಇಂತಹ ವೈಚಾರಿಕ ಪ್ರಗತಿಪರ ನಿಲುವನ್ನು ಹೊಂದಿದ್ದ ಕನಕದಾಸರನ್ನು ಇತರರಲ್ಲಿ ಕಾಣಲು ಸಾಧ್ಯವಿಲ್ಲ.

ಕನಕದಾಸರ ಕೀರ್ತನೆಗಳು ಸರಳ ಭಾಷೆಯಲ್ಲಿ ಮನಮುಟ್ಟುವಂತೆ ಇರುವುದಲ್ಲದೆ, ಅವರ ಕೀರ್ತನೆಗಳು ಮನುಜ ಕುಲವನ್ನು ಸನ್ಮಾರ್ಗದತ್ತ ಕೊಂಡೊಯ್ಯುವಂತದ್ದು. ಇವರು ರಚಿಸಿರುವ ಸುಮಾರು 316 ಕೀರ್ತನೆಗಳು ಲಭ್ಯವಿದೆ. "ಕಾಗಿನೆಲೆಯಾದಿಕೇಶವ" ಎಂಬುದು ಇವರ ಕೀರ್ತನೆಗಳ ಅಂಕಿತ ನಾಮ. 'ಮೋಹನತರಂಗಿಣಿ', 'ನಳ ಚರಿತ್ರೆ', 'ರಾಮಧಾನ್ಯ ಚರಿತ್ರೆ', 'ಹರಿಭಕ್ತಿ ಸಾರ', ಇವರು ರಚಿಸಿದ ಪ್ರಮುಖ ಕೃತಿಗಳು. 'ಮೋಹನತರಂಗಿಣಿ'ಯು 42 ಸಂಧಿಗಳಿಂದ ಹಾಗೂ 2798 ಪದ್ಯಗಳಿಂದ ಕೂಡಿದೆ. ಅವರು ಇದರಲ್ಲಿ ಕೃಷ್ಣಚರಿತ್ರೆಯನ್ನು ಹೇಳುತ್ತಾ, ಕೃಷ್ಣದೇವರಾಯನನ್ನೇ ಕೃಷ್ಣನಿಗೆ ಹೋಲಿಸುತ್ತಾರೆ. 'ನಳಚರಿತ್ರೆ'ಯು ನಳ ದಮಯಂತಿಯರ ಪ್ರೇಮ ಕಥೆಯನ್ನು ಹೊಂದಿದ್ದು, 9 ಸಂಧಿ ಮತ್ತು 481 ಪದ್ಯಗಳಿಂದ ಕೂಡಿದೆ. 'ರಾಮಧಾನ್ಯಚರಿತೆ'ಯು ಭಾಮಿನೀ ಷಟ್ಪದಿಯಲ್ಲಿ ರಚಿತವಾಗಿದ್ದು, 156 ಪದ್ಯಗಳಿಂದ ಕೂಡಿದೆ. ಈ ಕೃತಿಯಲ್ಲಿ ಶ್ರೀಮಂತರ ಆಹಾರಧಾನ್ಯವಾದ ಅಕ್ಕಿ ಹಾಗೂ ಕೆಳವರ್ಗದವರ ಆಹಾಧ್ಯನ್ಯವಾದ ರಾಗಿಯ ನಡುವಿನ ಸಂಭಾಷಣೆಯ ಮೂಲಕ ರಾಗಿ ಹೇಗೆ ತನ್ನ ಔನ್ನತ್ಯವನ್ನು ಸಾಬೀತು ಪಡಿಸುತ್ತದೆ ಹಾಗೂ ರಾಮಧಾನ್ಯವೆಂಬ ಹೆಸರು ಪಡೆಯುತ್ತದೆ ಎಂಬುದನ್ನು ನಿರೂಪಿಸಲಾಗಿದೆ.

ಕನ್ನಡದ ಭಗವದ್ಗೀತೆ ಎಂದೇ ಪರಿಗಣಿಸಲಾಗಿರುವ ಹರಿಭಕ್ತಿಸಾರವು ಭಾಮಿನೀ ಷಟ್ಪದಿಯಲ್ಲಿ ಹಾಗೂ 110 ಭಕ್ತಿಪದ್ಯಗಳಿಂದ ಕೂಡಿದ್ದು, ಸರಳಗನ್ನಡದಲ್ಲಿದೆ.

ಒಟ್ಟಿನಲ್ಲಿ ಕನ್ನಡ ಸಾಹಿತ್ಯಕ್ಕೆ ತಮ್ಮದೆ ಕೀರ್ತನೆಗಳ ಮೂಲಕ ಅನರ್ಘ್ಯ ಕೊಡುಗೆಯನ್ನು ನೀಡಿರುವ ದಾಸ ಸಾಹಿತ್ಯದ ಶ್ರೇಷ್ಠದಾಸರಲ್ಲಿ ಒಬ್ಬರಾಗಿರುವ ಕನಕದಾಸರು ವಿಶ್ವಮಾನವರಾಗಿದ್ದಾರೆ. ಕನ್ನಡ ನಡಿನ ಸಾಂಸ್ಕೃತಿಕ ಪರಂಪರೆಯಲ್ಲಿ ಅಚ್ಚಳಿಯದ ಛಾಪು ಮೂಡಿಸಿದವರು. ನಡುಗನ್ನಡ ಸಾಹಿತ್ಯದ ಪ್ರಮುಖ ಕೀರ್ತನೆಕಾರ, ಸಾಮಂತ, ಕವಿ, ಜ್ಞಾನಿ, ದಾರ್ಶನಿಕರಾಗಿ ರಾಜ್ಯಕ್ಕೆ ಅವರು ನೀಡಿರುವ ಕೊಡುಗೆ ಅಪಾರ.

ನವೆಂಬರ್ 17 ರಂದು ಕನಕದಾಸರ ಜನ್ಮದಿನಾಚರಣೆಯ ನಿಮಿತ್ತ ಅವರನ್ನು ನೆನೆಯುತ್ತಾ, ಅವರ ಬದುಕು ನಮ್ಮೆಲ್ಲರ ಬದುಕಿಗೆ ಆದರ್ಶದ ಹೊತ್ತಿಗೆಯಾಗಲಿ ಎಂದು ಆಶಿಸುತ್ತೇನೆ. ■



For More Job News Visit: www.kpscvaani.com

## ತೋಟಗಾರಿಕೆಯಲ್ಲಿ ಯಶಸ್ಸು ಕಂಡ

# ನಿವೃತ್ತ ಬ್ಯಾಂಕ್ ನೌಕರ



**ತೋಟಗಾರಿಕೆ ಅಧಿಕಾರಿಗಳ ಸಲಹೆ, ಮಾರ್ಗದರ್ಶನದಲ್ಲಿ ಇಳಿವಯಸ್ಸಿನಲ್ಲೂ ತೋಟಗಾರಿಕೆಯಲ್ಲಿ ಮಾದರಿ ರೈತರಾಗಿ ಯಶಸ್ಸು ಸಾಧಿಸಿರುವ ನಾಗನಾಥರಾವ ನಿಡೋದೆ.**

ಜಿ. ಚಂದ್ರಕಾಂತ್



ನಿವೃತ್ತ ಬ್ಯಾಂಕ್ ನೌಕರರಾದ ನಾಗನಾಥರಾವ ನಿಡೋದೆ ಅವರು ಬೀದರ್ ತಾಲೂಕಿನ ಕಮಠಾಣಾ ಮತ್ತು ಯಾಕತಪುರ ಗ್ರಾಮಗಳಲ್ಲಿರುವ ತಮ್ಮ 12 ಎಕರೆ ಜಮೀನಿನಲ್ಲಿ ತೋಟಗಾರಿಕೆಯನ್ನು, ತೋಟಗಾರಿಕಾ ಇಲಾಖೆಯ ಮಾರ್ಗದರ್ಶನದಲ್ಲಿ ವಿಶೇಷ ಆಸಕ್ತಿಯಿಂದ ಕೈಗೊಂಡು, ಯಶಸ್ಸು ಕಂಡಿದ್ದಾರೆ. ಆ ಮೂಲಕ ಎಲ್ಲ ರೈತರಿಗೂ ಮಾದರಿಯಾಗಿದ್ದಾರೆ.

ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕಿನಲ್ಲಿ ನೌಕರರಾಗಿದ್ದ ನಾಗನಾಥರಾವ ನಿಡೋದೆ ಅವರು 2016ರಲ್ಲಿ ನಿವೃತ್ತಿಯಾದರು. ನಿವೃತ್ತಿ ಆದ ನಂತರ ವಿಶ್ರಾಂತ ಜೀವನ ನಡೆಸುವ ಬದಲು ಕೃಷಿಯಲ್ಲಿ ತೊಡಗಿಕೊಂಡರು. 62 ವರ್ಷದ ನಾಗನಾಥರಾವ ಅವರು ಮೂಲತಃ ಔರಾದ(ಬಿ) ತಾಲೂಕಿನ ನಿಡೋದಾ ಗ್ರಾಮದವರು. ಹಿರಿಯರೊಂದಿಗೆ ಬೀದರ್‌ಗೆ 1973ರಲ್ಲಿ ವಲಸೆ ಬಂದಿದ್ದು, 1988ರಲ್ಲಿ ಕೃಷ್ಣಾ ಗ್ರಾಮೀಣ ಬ್ಯಾಂಕಿನಲ್ಲಿ ನೌಕರಿ ಪಡೆದಿದ್ದರು. ಕೃಷಿಯನ್ನು ಹೆಚ್ಚು ಲಾಭದಾಯಕವಾಗಿಸಿಕೊಳ್ಳಲು ಕಮಠಾಣಾ ಮತ್ತು ಯಾಕತಪುರ ಗ್ರಾಮಗಳಲ್ಲಿರುವ ಜಮೀನಿನಲ್ಲಿ ನೀರಾವರಿಗಾಗಿ ತಲಾ ಒಂದೊಂದು ಕೊಳವೆ ಬಾವಿ ತೋಡಿಸಿದರು.



For More Job News Visit: www.kpscvaani.com



ಇವರು ತಮ್ಮ ಜಮೀನಿನಲ್ಲಿ ಮೊದಲು ಸೋಯಾ, ತೊಗರಿ, ಹೆಸರು ಬೆಳೆಯುತ್ತಿದ್ದು, ಅಷ್ಟೇನೂ ಆದಾಯ ಸಿಗುತ್ತಿರಲಿಲ್ಲ. ತೋಟಗಾರಿಕೆ ಅಧಿಕಾರಿಗಳ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದ ಮೇರೆಗೆ ತೋಟಗಾರಿಕೆ ಮಾಡುವ ಪಣ ತೊಟ್ಟರು. ತೋಟಗಾರಿಕೆಯಲ್ಲಿ ಹಣದ ಖರ್ಚೂ ಹೆಚ್ಚು, ಆದಾಯವೂ ಹೆಚ್ಚು ಎಂದು ಮನಗಂಡು ಕಮತಾಣಾದ 5 ಎಕರೆಯಲ್ಲಿ ಕಳೆದ ಐದಾರು ವರ್ಷದ ಹಿಂದೆ ಗೋವಾದಿಂದ ತಂದ ವಿ–4, ವಿ–7 ತಳಿಯ ಗೋಡಂಬಿ(ಕಾಜು) ಗಿಡಗಳನ್ನು ಬೆಳೆಸಿದ್ದಾರೆ. ಇವು ಸಮೃದ್ಧವಾಗಿ ಮತ್ತು ಹಚ್ಚ ಹಸಿರಾಗಿ ಬೆಳೆದು ಫಲ ಕೊಡುತ್ತಿವೆ.

ಕಳೆದ ವರ್ಷ 10–15 ಕ್ವಿಂಟಲ್ ಗೋಡಂಬಿ ಇಳುವರಿ ಪಡೆದು ಸುಮಾರು 3–4 ಲಕ್ಷ ರೂ. ಪಡೆದಿದ್ದಾರೆ. ಈ ವರ್ಷ 6 ಲಕ್ಷ ರೂ.ವರೆಗೆ ಆದಾಯದ ನಿರೀಕ್ಷೆಯಲ್ಲಿದ್ದಾರೆ. ಯಾಕತಪುರದ 4.50 ಎಕರೆಯಲ್ಲಿ ಬೆನಿಶಾನ್, ದಶಹರಿ ಮತ್ತು ಕೇಸರ್ ತಳಿಯ ಮಾವಿನ ಗಿಡಗಳನ್ನು ಮತ್ತು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ 2.50 ಎಕರೆಯಲ್ಲಿ ಜಿ–9 ಬಾಳೆಯನ್ನು ಬೆಳೆಸಿ ಎಕರೆಗೆ 45,000 ರೂ. ಸಹಾಯಧನ ಪಡೆದುಕೊಂಡಿದ್ದಾರೆ.

ತಮ್ಮ ಎರಡೂ ತೋಟಗಳಲ್ಲಿ ಕೃಷಿಹೊಂಡ ನಿರ್ಮಿಸಿದ್ದಲ್ಲದೆ, ಹನಿ ನೀರಾವರಿ ಪದ್ಧತಿಯನ್ನೂ ಅಳವಡಿಸಿಕೊಂಡಿದ್ದಾರೆ. ಇದಕ್ಕಾಗಿ ತೋಟಗಾರಿಕೆ ಇಲಾಖೆಯಿಂದ ಶೇ.90 ರಷ್ಟು ಸಹಾಯಧನ ಪಡೆದಿದ್ದಾರೆ. ಮಳೆ ನೀರಿನ ಸಂಗ್ರಹಣೆಗಾಗಿ 20ಫ಼20ಫ಼3 ಅಡಿ ಅಳತೆಯ ಕೃಷಿ ಹೊಂಡವನ್ನು ನಿರ್ಮಾಣ ಮಾಡಿಕೊಂಡಿದ್ದು, 1.35 ಲಕ್ಷ ರೂ. ಸಹಾಯಧನ ಪಡೆದುಕೊಂಡಿದ್ದಾರೆ. ಈಗ ಟ್ರ್ಯಾಕ್ಟರ್ ಮತ್ತಿತರ ಯಂತ್ರೋಪಕರಣಗಳ ಮತ್ತು ಪ್ರತಿ ತೋಟದಲ್ಲಿ ಒಬ್ಬೊಬ್ಬ ಆಳಿನ ಸಹಾಯದಿಂದ ಎಲ್ಲ ಕೆಲಸಕಾರ್ಯ ಮಾಡಿಸುತ್ತಿದ್ದಾರೆ. ಹುಬ್ಬಳ್ಳಿಯ ಮತ್ತು ಸ್ಥಳೀಯ ಹಣ್ಣು ಮಾರಾಟಗಾರರು ಇವರ ತೋಟಕ್ಕೆ ಬಂದು ಮಾವು, ಗೋಡಂಬಿ ಮತ್ತು ಬಾಳೆ ಹಣ್ಣುಗಳನ್ನು ತೆಗೆದುಕೊಂಡು ಹೋಗುತ್ತಾರೆ. ಮಾರುಕಟ್ಟೆಗೆ ಫಸಲನ್ನು ಒಯ್ದು ಮಾರಾಟ ಮಾಡಲು ಸಾಧ್ಯವಾಗುತ್ತಿಲ್ಲವೆಂಬ ನೋವು ಇವರದಾಗಿದೆ.

ಮಾವು, ಬಾಳೆ ಮತ್ತು ತರಕಾರಿ ಬೆಳೆಗಳ ಕಟಾವು ಹಾಗೂ ಗ್ರೇಡಿಂಗ್ ಮತ್ತು ಪ್ಯಾಕಿಂಗ್ ಮಾಡಲು ತೋಟಗಾರಿಕೆ ಇಲಾಖೆಯಿಂದ ಪ್ಯಾಕ್‌ಹೌಸ್, ಎರೆಹುಳು ಗೊಬ್ಬರದ ಘಟಕಗಳನ್ನು ನಿರ್ಮಿಸಿಕೊಳ್ಳುವ ಯೋಜನೆ ಹೊಂದಿದ್ದಾರೆ. ಸಾವಯವ ಕೃಷಿ ಮತ್ತು ಸಮಗ್ರ ಕೃಷಿ ಕೈಗೊಳ್ಳಲು ಅನುವಾಗುವಂತೆ ಒಂದೆರಡು ದೇಸಿ ಹಸುಗಳ ಸಾಕಣೆ ಮತ್ತು ಬಾಳೆ ಫಸಲು ತೆಗೆದುಕೊಂಡು 4 ಎಕರೆಯಲ್ಲಿ ಶುಂಠಿ (ಅಲ್ಲಾ) ಬೆಳೆಯುವ ಹಾಗೂ ಬದುಗಳ ಮೇಲೆ ಅರಣ್ಯ ಗಿಡಗಳನ್ನು ಬೆಳೆಸುವ ಯೋಜನೆ ರೂಪಿಸಿಕೊಂಡಿದ್ದಾರೆ.

"ಎರಡೂ ತೋಟಗಳ ನಿರ್ವಹಣೆಗೆ ಪ್ರತಿ ವರ್ಷ 1.5 ರಿಂದ 2 ಲಕ್ಷ ರೂ.ವರೆಗೆ ಖರ್ಚು ಮತ್ತು 5–6 ಲಕ್ಷ ರೂ.ವರೆಗೆ ಆದಾಯ ಬರುತ್ತಿದೆ. ಗಿಡಗಳು ದೊಡ್ಡದಾಗಿ ಬೆಳೆದಂತೆ ಆದಾಯವೂ ಹೆಚ್ಚಾಗಬಹುದು. ರೈತ ಸಮುದಾಯ ತೋಟಗಾರಿಕೆ ಇಲಾಖೆಯಿಂದ ನೀಡುವ ತಾಂತ್ರಿಕ ಸಲಹೆ ಮತ್ತು ಸೌಲಭ್ಯಗಳ ಸದುಪಯೋಗ ಪಡೆದುಕೊಳ್ಳಬೇಕು. ಸಮಗ್ರ ಕೃಷಿ, ಬಹು ಬೆಳೆ ಮತ್ತು ಹನಿ ನೀರಾವರಿ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು. ಸಾಧ್ಯವಾದರೆ ಫಸಲನ್ನು ಸ್ವಂತ ಮಾರಾಟ ಮಾಡುವುದರಿಂದ ಹೆಚ್ಚಿನ ಹಣ ಗಳಿಸಬಹುದು ಎಂದು ಅಭಿಪ್ರಾಯ ಪಡುವ ನಾಗನಾಥರಾವ ಅವರು, ತಮ್ಮ ಈ ಸಾಧನೆಗೆ ತೋಟಗಾರಿಕೆ ಉಪನಿರ್ದೇಶಕ ಮಲ್ಲಿಕಾರ್ಜುನ ಬಾವಗೆ, ಸಹಾಯಕ ನಿರ್ದೇಶಕ ಶಿವಪುತ್ರ ಶಂಭು ಮತ್ತು ಮನ್ನಳ್ಳಿ ಹೋಬಳಿಯ ಸಹಾಯಕ ತೋಟಗಾರಿಕೆ ಅಧಿಕಾರಿ ಗೌತಮ ಶಿಂಧೆ ಅವರುಗಳ ಸಲಹೆ ಮತ್ತು ಮಾರ್ಗದರ್ಶನವೇ ಮುಖ್ಯ" ಎನ್ನುತ್ತಾರೆ. ನಾಗನಾಥರಾವ ನಿಡೋದೆ ಅವರನ್ನು ಮೊಬೈಲ್ ಸಂಖ್ಯೆ 9901040501 ಮೂಲಕ ಸಂಪರ್ಕಿಸಬಹುದು.



For More Job News Visit: www.kpscvaani.com

ಕರ್ನಾಟಕ ಸರ್ಕಾರ

# ಕೋವಿಡ್-19



## ಇವುಗಳಿಂದ ನಿಮ್ಮನ್ನು ರಕ್ಷಿಸಿಕೊಳ್ಳಿ

- ⊘ ಹತ್ತಿರದ ಸಂಭಾಷಣೆ
- ⊘ ಜನಸಂದಣಿಯ ಪ್ರದೇಶಗಳು
- ⊘ ಗಾಳಿಯಾಡದ ಸ್ಥಳಗಳು

ಕೋವಿಡ್-19 ವೈದ್ಯಕೀಯ ಸಹಾಯಕ್ಕಾಗಿ ಆಪ್ತಮಿತ್ರ ಸಹಾಯವಾಣಿ **14410** ಗೆ ಕರೆ ಮಾಡಿ

**#KarnatakaFightsCorona**

ಎಲ್ಲರಿಗೂ ಆರೋಗ್ಯ ಎಲ್ಲೆಡೆಯೂ ಆರೋಗ್ಯ

**For More Job News Visit: www.kpscvaani.com**

## ಸುಗಮ ಸಂಗೀತದ ಪ್ರಥಮ ಹರಿಕಾರ

# ಪದ್ಮಚರಣ್ ಶತಮಾನೋತ್ಸವ

ವೈ.ಕೆ. ಸಂಧ್ಯಾಶರ್ಮ





**ಇಹಲೋಕದಿಂದ ಸರಿದು ಹೋದ ಪದ್ಮಚರಣ್ ಅವರದು ಸುಗಮ ಸಂಗೀತ ಲೋಕದಲ್ಲೊಂದು ದೊಡ್ಡ ಹೆಸರು. ಆಳವಾದ ಶಾಸ್ತ್ರೀಯ ಸಂಗೀತದಿಂದ ಅರಳಿದ ಅವರ ವಿಶಿಷ್ಟ ಪ್ರತಿಭೆ ಬಹುಮುಖ್ಯವಾದುದು. ಉತ್ತಮ ಕವಿ, ವಯೋಲಿನ್ ವಾದಕ, ರಾಗ ಸಂಯೋಜಕ, ಚಿಂತಕ, ದಾರ್ಶನಿಕರಾಗಿದ್ದ ಅಗಲಿದ ಪದ್ಮಚರಣರಿಗೆ ಭಾವಪೂರ್ಣ ಶ್ರದ್ಧಾಂಜಲಿ ಈ ನುಡಿ ನಮನ.**

**ಹೋ**ಟೆಲಿನ ಒಂದು ಇಕ್ಕಟ್ಟಾದ ಕೋಣೆ, ಅದೂ ಕಾರಿಡಾರಿನ ಮೂಲೆಯಲ್ಲಿ ಗಾಳಿ ಬೆಳಕು ಇಲ್ಲದ 10 X 8 ಅಡಿಯ ಕೋಣೆಯ ತುಂಬ ಪುಸ್ತಕಗಳ ರಾಶಿ. ಹಗ್ಗದ ಮೇಲೆ ತೂಗಾಡುವ ಟವೆಲ್ಲು, ಅಂಗಿಗಳು. ಮೂಲೆಯ ಪುಟ್ಟ ಮರದ ಮೇಜಿನ ತುಂಬ ಕಿಕ್ಕಿರಿದ ದೈನಂದಿನ ಬಳಕೆಯ ವಸ್ತುಗಳು, ಲೇಖನ ಸಾಮಗ್ರಿಗಳು. ಇಂಥ ಪುಟ್ಟ ಕೋಣೆಯ ಮುಚ್ಚಿದ ಬಾಗಿಲಿನ ಹಿಂದಿನಿಂದ ಸುಶ್ರಾವ್ಯ ಪಿಟೀಲು ವಾದನ ತೂರಿ ಬರುತ್ತದೆ. ಒಳಗೆ ಹುತ್ತದೊಳಗಿನ ಋಷಿಯಂತೆ ತಾದಾತ್ಮ್ಯದಿಂದ ಸಂಗೀತ ಧ್ಯಾನದೊಳಗೆ ಮುಳುಗಿ ಹೋದ ಆ ರಾಗಋಷಿ ಯಾರು ಬಲ್ಲಿರಾ?... ಅವರೇ ಸಂಗೀತ ಲೋಕದ ಧೃವತಾರೆ ಪದ್ಮಚರಣರು, ನಮ್ಮನ್ನಗಲಿರುವ ದಿವ್ಯಚೇತನ. ಮಂಕಾದ ವಾತಾವರಣದೊಳಗೆ ಧೂಳು ಮುಸುಕಿದ ವಜ್ರದಂತೆ ಕುಳಿತ ಅನನ್ಯ ಪ್ರತಿಭೆ.

"ಪದ್ಮಚರಣ" ಹೆಸರಲ್ಲೇ ಒಂದು ಬಗೆಯ ಮೋಡಿ. ಚಿಕ್ಕ-ಚೊಕ್ಕದಾದ ಅನ್ವರ್ಥ ಪೂರ್ಣ ನಾಮ. ಪದ್ಮಚರಣರ ನಿಜ ನಾಮಧೇಯ ಆಸೂರಿ ವೆಂಕಟಕೃಷ್ಣಮಾಚಾರ್ಯ. ಅವರ ಮೆಚ್ಚಿನ ಸಂತ ಮಹಾಕವಿ, ಕಲಾವಿದ "ಗೀತಗೋವಿಂದ"ದ ಕರ್ತೃ ಜಯದೇವನ ಬಿರುದು "ಪದ್ಮಾವತೀಚರಣಚಾರಣಚಕ್ರವರ್ತಿ" ಎಂಬುದನ್ನೇ ಮೊಟಕುಗೊಳಿಸಿ 'ಪದ್ಮಚರಣ' ಎಂಬ ಕಾವ್ಯನಾಮ ಧಾರಣೆ ಮಾಡಿದರು.

ಸಂಗೀತ ಹಿನ್ನೆಲೆಯ ಕುಟುಂಬದಲ್ಲಿ ಜನ್ಮತಾಳಿದ ಪದ್ಮಚರಣರು (21-4-1920), ಏಳೆಂಟು ವರ್ಷಗಳ ಬಾಲಕನಾಗಿದ್ದಾಗಲೇ ಭಜನೆ ಮಟ್ಟುಗಳನ್ನು ಹಾಡುತ್ತಿದ್ದರಂತೆ. ಅವರ ತಂದೆ-ತಾಯಿಗಳಿಗೆ ಸಿರಿಕಂಠವಿದ್ದುದರಿಂದ ಸದಾ ಮನೆಯಲ್ಲಿ ಹಾಡಿನ ರಸದೌತಣ.

ಸಂಗೀತಕ್ಕೆ ಶ್ರೀಕಾರ ಹಾಕಿದವರು ಅವರ ತಾಯಿ ಜಾನಕಮ್ಮ. ಅಂದಿನಿಂದಲೇ ಅವರಿಗೆ ಕರ್ನಾಟಕ ಶಾಸ್ತ್ರೀಯ ಸಂಗೀತ ಪಾಠ ಆರಂಭವಾಯಿತು. ಶ್ರೀ ಪಕ್ಕಾ ಹನುಮಂತಾಚಾರ್ಯರು ಇವರ ಮೊದಲ ಗುರುಗಳು. ಅನಂತರ ಆಮಿದಾಲ ವೆಂಕಟಸ್ವಾಮಿ, ವೆಂಕಪ್ಪ, ಬಿ.ವೆಂಕಟಪ್ಪ ಎಂಬ ನಾಲ್ವರು ಗುರುಗಳಿಂದ ಸುಮಾರು ಹನ್ನೊಂದು ವರ್ಷಗಳ ಕಾಲ ಸಂಗೀತ, ವಯೋಲಿನ್ ವಾದನ ಪಾಠ. ಅನಂತರ ಮೈಸೂರಿನಲ್ಲಿ ಶ್ರೀ



For More Job News Visit: www.kpscvaani.com



ರಾಳ್ಳಪಲ್ಲಿ ಅನಂತಕೃಷ್ಣ ಶರ್ಮರಂತ ಗುರುಗಳ ಸನ್ನಿಧಿಯಲ್ಲಿ ಪ್ರತಿದಿನ ಸುಮಾರು ಆರು ಗಂಟೆಗಳಂತೆ ಹನ್ನೆರಡು ವರ್ಷಗಳ ಕಾಲ ಸತತ ಸಂಗೀತಾಭ್ಯಾಸ ನಡೆಸಿದ್ದು ಸುಲಭದ ಮಾತೇನಲ್ಲ. ಗುರುಕುಲಾಭ್ಯಾಸದಂತೆ ಗುರುಗಳ ಸೇವೆ, ಕಠಿಣ ಶ್ರಮದಾನ, ವಿದ್ಯೆಗಳಿಕೆ ಇವರ ಸಾಧನೆಯ ಮಜಲುಗಳು.

ಶ್ರೀ ರಾಳ್ಳಪಲ್ಲಿ ಅನಂತಕೃಷ್ಣ ಶರ್ಮರಿಂದ ಸಂಗೀತ, ಸಾಹಿತ್ಯ, ಲಕ್ಷ್ಯ-ಲಕ್ಷಣಗಳನ್ನು ಶಿಷ್ಟ ಸಂಪ್ರದಾಯವನ್ನು ಆಳವಾಗಿ ಅಭ್ಯಾಸಿಸುವುದರೊಂದಿಗೆ ಭಾತ್‌ಖಂಡೆಯವರ ಪುಸ್ತಕಗಳಿಂದ ಹಿಂದೂಸ್ತಾನೀ ಸಂಗೀತ ಪದ್ಧತಿಯ ಪರಿಚಯ ಮಾಡಿಕೊಂಡು, ಗುರುಗಳಾದ ಶರ್ಮರಿಂದಲೇ ಕೆಲವು ಗತ್ತುಗಳ ಕಲಿಕೆ, ಮುಂದೆ ಮೈಸೂರು ಅರಮನೆಯ ಸಿಂಫೋನಿ ವಾದ್ಯ ಮೇಳದಲ್ಲಿದ್ದ ದಿವ್ಯನಾಥನ್ ಎಂಬುವರಿಂದ ಸ್ವಲ್ಪ ಸಮಯ ಪಾಶ್ಚಿಮಾತ್ಯ ಸಂಗೀತ ಕಲಿತರು. ಹೀಗೆ ಪದ್ಮಚರಣರಿಗೆ ಈ ಆರು ಜನ ಗುರುಗಳಿಂದ ಇಪ್ಪತ್ತನಾಲ್ಕು ವರ್ಷಗಳ ದೀರ್ಘಾವಧಿಯಲ್ಲಿ ದಕ್ಷಿಣಾದಿ, ಉತ್ತರಾದಿ, ಪಶ್ಚಿಮಾದಿ ಶಾಸ್ತ್ರೀಯ ಸಂಗೀತಗಳ ಕರಾರುವಾಕ್ಕು ಪಾಠ-ಅನವರತ ಅಭ್ಯಾಸ. ಛಲಬಿಡದ ತ್ರಿವಿಕ್ರಮರವರು. ಕನ್ನಡ ಮತ್ತು ತೆಲುಗು ಭಾಷೆಗಳನ್ನು ಚೆನ್ನಾಗಿ ಬಲ್ಲ ಇವರಿಗೆ ಸಂಸ್ಕೃತ ಭಾಷೆಯಲ್ಲೂ ಪಾಂಡಿತ್ಯವಿತ್ತು. ಕ್ರಿಯಾಶೀಲತೆ, ಪ್ರಯೋಗಶೀಲತೆ ಗುರುಗಳಿಂದ ಅವರಿಗೆ ಬಂದ ಬಳುವಳಿ.

ಆಕಾಶವಾಣಿಯಲ್ಲಿ ಮೂವತ್ತೊಂದು ವರ್ಷಗಳಷ್ಟು ಸುದೀರ್ಘಕಾಲ ಪಿಟೀಲು ವಾದಕರಾಗಿ ಸೇವೆ ಸಲ್ಲಿಸಿದ ಪದ್ಮಚರಣರು ನೂರಾರು 'ಸೋಲೋ' ಕಛೇರಿ, ನೂರಾರು ಸಂಗೀತ ಕಛೇರಿಗಳಿಗೆ ಪಕ್ಕವಾದ್ಯಗಾರರಾಗಿ ಖ್ಯಾತಿ ಪಡೆದಿದ್ದಾರೆ. ಇವರು ಪಕ್ಕವಾದ್ಯ ನುಡಿಸಿದ ಸಂಗೀತಗಾರರಲ್ಲಿ ಸರ್ವಶ್ರೀ ಮೈಸೂರು ವಾಸುದೇವಾಚಾರ್ಯರು, ತಿರುಪ್ಪಾಂಬರಂ ಸ್ವಾಮಿನಾಥ ಪಿಳ್ಳೈ, ಟಿ.ಆರ್. ಮಹಾಲಿಂಗಂ, ಚಿತ್ತೂರು ಸುಬ್ರಹ್ಮಣ್ಯ ಪಿಳ್ಳೈ, ಮಧುರೈ ಮಣಿ, ಜಿ.ಎಸ್.ಬಿ. ಚಂಬೈ ವೈದ್ಯನಾಥ ಭಾಗವತರ್, ಎಂ.ಬಾಲಮುರಳಿಕೃಷ್ಣ, ಎಂ.ಎಲ್. ವಸಂತಕುಮಾರಿ, ಟಿ. ಬೃಂದಾ, ಮುಕ್ತಾ, ಆರ್.ಕೆ. ಶ್ರೀಕಂಠನ್ ಮುಂತಾದವರು ಮುಖ್ಯರು. ಹಾಗೆಯೇ ಉತ್ತರಾದಿ ಸಂಗೀತದಲ್ಲಿ ಭೀಮಸೇನಜೋಶಿ, ಜಿ.ವಿ. ಭಾವೆ, ಲಕ್ಷ್ಮೀಭಾವೆ, ಡಿ.ವಿ.ಹರೀಂದ್ರ ಮುಂತಾದವರಿಗೆ ಇವರು ಪಕ್ಕವಾದ್ಯ ನೀಡಿದ್ದಾರೆ. ಪ್ರಧಾನ ಕಲಾವಿದನಲ್ಲಿ ಪರಕಾಯ ಪ್ರವೇಶ ಮಾಡಿ, ಆತನ ಇಂಗಿತಕ್ಕೆ ಹೊಂದಿಕೊಳ್ಳುವ ಚಾತುರ್ಯ ಅವರಿಗೆ ಅಂತರ್ಗತವಾಗಿತ್ತು.

ಪದ್ಮಚರಣರ ಒಲವು ಕ್ರಮೇಣ ಶಾಸ್ತ್ರೀಯ ಸಂಗೀತದಿಂದ ಸುಗಮ ಸಂಗೀತದತ್ತ ಒಲಿಯಿತು. ಪ್ರಾಯಶಃ ಅವರು ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲೇ ಉಳಿದಿದ್ದರೆ ಅವರು ಇನ್ನೊಬ್ಬ ಚೌಡಯ್ಯ ನಾಗುತ್ತಿದ್ದರೋ ಏನೋ. ಅಂಥಾ ಮೇರು ಪ್ರತಿಭೆ ಅವರದು. ಅನನ್ಯ ಶೈಲಿ, ಪಳಗಿದ ಕೈ. ಆದರೆ ಶಾಸ್ತ್ರೀಯ ಸಂಗೀತ ಕ್ಷೇತ್ರಕ್ಕೆ ಉಂಟಾದ ನಷ್ಟ ಸುಗಮ ಸಂಗೀತ ಕ್ಷೇತ್ರಕ್ಕೆ ಲಾಭವಾಗಿ ಪರಿಣಮಿಸಿದ್ದಂತೂ ನಿರ್ವಿವಾದ. ಸುಗಮ ಸಂಗೀತವನ್ನು ಒಂದು ಸಂಗೀತ ಪ್ರಕಾರವಾಗಿಸಿ ಅದಕ್ಕೆ ಗೌರವ ಸ್ಥಾನಮಾನಗಳನ್ನು ದೊರಕಿಸಿಕೊಟ್ಟ ಸಂಗೀತ ಶಿಲ್ಪಿಗಳಲ್ಲಿ ಕಾಳಿಂಗರಾಯರಂತೆ ಪದ್ಮಚರಣರೂ ಪ್ರಮುಖರು ಎನ್ನಬಹುದು. ಇವರ ಸುಗಮ ಸಂಗೀತ ನಿರ್ಮಾಣಕ್ಕೆ ಶಾಸ್ತ್ರೀಯ ಸಂಗೀತ ಜ್ಞಾನ ಅಡಿಗಲ್ಲಾಯ್ತು. ಎಂತಲೇ ಅವರ ರಾಗರಚನೆಗಳಲ್ಲಿ ಶುದ್ಧ ಅಭಿರುಚಿ. ಮನೋಧರ್ಮದಲ್ಲಿ ಆವೇಶ ಆರ್ಭಟ ಅಬ್ಬರಗಳಿಲ್ಲ. ಅನಗತ್ಯ ವಾದ್ಯ ಮೇಳವಿಲ್ಲ. ಸಂಧ್ಯಾರಾಗದ ಸೊಬಗು, ತಂಪು ಅದರ ಪ್ರಮುಖ ಲಕ್ಷಣ.

ಆಳವಾದ ಶಾಸ್ತ್ರೀಯ ಸಂಗೀತದ ಪಾಂಡಿತ್ಯದಿಂದ ರೂಪುಗೊಂಡ ಪದ್ಮಚರಣರು ಕನ್ನಡ ಭಾವಗೀತೆ ಲೋಕಕ್ಕೆ ನೀಡಿದ ಕೊಡುಗೆ ಅಪಾರ. ತಮ್ಮದೇ ಆದ ವಿಶಿಷ್ಟ ಛಾಪನ್ನು ರಾಗ ಸಂಯೋಜನೆಯಲ್ಲಿ ಅಳವಡಿಸಿಕೊಂಡಿದ್ದರು. ಈ ಗೀತೆಗಳು ಸದಾಕಾಲ ಶ್ರೋತೃಗಳು ಗುನುಗುನಿಸುವಷ್ಟು ಜನಪ್ರಿಯ, ಎದೆಯೊಳಗೆ ಮಧುರ ನಾದ ನಿನಾದಿಸುವಷ್ಟು ರಸಸ್ಪರ್ಶಿ.

ಅವರು ಸೃಷ್ಟಿಸಿದ ಅದ್ಭುತ ಭಾವಗೀತೆಗಳು ಆ ಕಾಲದ ಹಿರಿ-ಕಿರಿಯ, ಕನ್ನಡ ಕವಿಗಳ ಸುಂದರ ಕವಿತೆಗಳು. 'ಉಡುಗಣವೇಷ್ಟಿತ' (ಡಾ.ಜಿ.ಎಸ್.ಶಿವರುದ್ರಪ್ಪನವರರಚನೆ), 'ವನಸುಮದೊಳೆನ್ನಜೀವನವು' (ಡಿ.ವಿ.ಜಿ.), 'ದೋಣಿ ಸಾಗಲಿ ಮುಂದೆ ಹೋಗಲಿ' ಮತ್ತು 'ನಾನೇ ವೀಣೆ ನೀನೇ ತಂತಿ' (ಕುವೆಂಪು), 'ನೀ ಬರುವದಾರಿಯಲ್ಲಿ (ಕೆ.ಎಸ್.ಎನ್)- ಇಂಥ ಸಾವಿರಾರು ಗೀತೆಗಳನ್ನು ಸುಮಧುರರಾಗದಲ್ಲಿ ಅರಳಿಸಿ, ಸುಗಮ ಸಂಗೀತ ಜಗತ್ತಿಗೆ ಸ್ಮರಣೀಯಕಾಣಿಕೆ ನೀಡಿ ಪದ್ಮಚರಣರು ಸುಗಮ ಸಂಗೀತ ಲೋಕದ ಆದ್ಯ ಪ್ರವರ್ತಕರೆನಿಸಿಕೊಂಡಿದ್ದಾರೆ.

**ಆಡುಮುಟ್ಟದ ಸೊಪ್ಪಿಲ್ಲ:**

ಪದ್ಮಚರಣರ ಸಂಗೀತ ಜ್ಞಾನ ವಿಸ್ತೃತವಾದುದಾಗಿತ್ತು. ಬಹುರೂಪಿಯಾಗಿತ್ತು. ಅವರು ಮುಟ್ಟದ ಸಂಗೀತ ಪ್ರಕಾರವಿಲ್ಲ.



For More Job News Visit: www.kpscvaani.com

ಶಾಸ್ತ್ರೀಯ, ಸುಗಮ, ಜನಪದ, ರಂಗ ಸಂಗೀತ, ಯಕ್ಷಗಾನ ಸಂಗೀತ ಅಲ್ಲದೆ ಅವರಿಗೆ ಘಜಲ್, ವಿದೇಶಿ ಸಂಗೀತಗಳ ಪರಿಚಯವೂ ಇತ್ತು. ಅವರು ಹಾಡಿಕೆಗೆ ಆರಿಸಿಕೊಳ್ಳುವ ಕವನಗಳನ್ನು ಪರಿಶೀಲಿಸಿದರೆ ಅವರ ಉತ್ತಮ ಸಾಹಿತ್ಯ ಪ್ರಜ್ಞೆ, ಅಭಿರುಚಿಗಳ ಮಟ್ಟ ಹಾಗೂ ಪರಿಣತಿಗಳು ಸುವ್ಯಕ್ತ. ಸಾಹಿತ್ಯವನ್ನು ಅನುಭವ-ದ್ರವ್ಯವನ್ನಾಗಿಸುವ ಕಲೆ ಅವರಿಗೆ ಕರಗತವಾಗಿತ್ತು.

ಸಾಹಿತ್ಯಕ್ಕೆ ತಕ್ಕರಾಗ ಸಂಯೋಜಿಸುವ ಅವರ ರಸಾಭಿಜ್ಞತೆ, ಭಾವಾಭಿಜ್ಞತೆ, ಕಲಾಭಿಜ್ಞತೆಗೆ ಎಂತಹವರೂ ತಲೆದೂಗಬೇಕು. ಅವರು ಕವನಗಳಿಗೆ ರಾಗ ಹಾಕಲು ಯಾವುದೇ ಪೂರ್ವಸಿದ್ಧತೆ ಮಾಡಿಕೊಳ್ಳುತ್ತಿರಲಿಲ್ಲ. "Music happens with me". ರಾಗ ಹಾಕಲು ತಿಣುಕುವ, ತಲೆಕೆಡಿಸಿಕೊಳ್ಳುವ ಪ್ರಮೇಯವೇ ಇಲ್ಲ. ಆಯಾ, ಪದ್ಯಗಳಲ್ಲೇ ಇರುವ ನಾದ ಲಯಗಳನ್ನೇ ಹೆಕ್ಕಿ ತೆಗೆದು, ಅದು ರಾಗವನ್ನು ಆರಿಸಿಕೊಳ್ಳಲು ಬಿಟ್ಟರೆ ರಾಗ ತಾನೇ ತಾನಾಗಿ ಹೊರಹೊಮ್ಮುತ್ತದೆ. ಹಿಸುಹಿಸುಕಿ ಹಣ್ಣು ಮಾಡಿದ್ದು ಕಾವ್ಯವೂ ಅಲ್ಲ, ಸಂಗೀತವೂ ಅಲ್ಲ" ಎಂಬುದು ಅವರ ದೃಢ ನಂಬಿಕೆಯಾಗಿತ್ತು.

ಪ್ರತಿ ಕ್ಷಣದಲ್ಲೂ ಪ್ರಯೋಗಶೀಲತೆ ಅವರ ಯಶಸ್ಸಿನ ಗುಟ್ಟು. ಕೀರ್ತಿ, ಪ್ರಶಸ್ತಿ, ಪದಕ, ಹಾರ, ತುರಾಯಿ, ಹಣಗಳಿಕೆ, ಪ್ರಚಾರ ಮುಂತಾದ ಯಾವುದಕ್ಕೂ ಹಪಹಪಿಸದ ಅಪರೂಪದ ಒಂದು ವ್ಯಕ್ತಿತ್ವವೇ ಅವರ ವಿಭಿನ್ನತೆಗೆ ಕನ್ನಡಿ.

ಪದ್ಮಚರಣರ ವ್ಯಕ್ತಿತ್ವಕ್ಕೆ ಈ ಖಚಿತತೆ, ಸ್ಪಷ್ಟ ನಿಲುವು, ನಿಷ್ಠುರ ಅಭಿಪ್ರಾಯ ಮಂಡನೆ, ದಾಸ್ಯಾತೀತ ಮನೋಭಾವ ಬೆಳೆದು ಬಂದ ಬಗೆಗೆ ಅವರು ಹೀಗೆ ಉತ್ತರಿಸುತ್ತಿದ್ದರು...

"ಮಹಾದಾರ್ಶನಿಕ ಜಿಡ್ಡುಕೃಷ್ಣಮೂರ್ತಿಯವರ ನಲವತ್ತು ವರ್ಷಗಳಿಗೂ ಮೀರಿದ ಪ್ರಭಾವ ಅವರ 'Choiceless awareness' ಎಂಬ ಮೂಲತತ್ವ-ಬಾಳಿನ ಆದರ್ಶ ಹಾಗೂ ಡಾ॥ ಕೋಟಾ ಶಿವರಾಮ ಕಾರಂತರ ಐವತ್ತು ವರ್ಷಗಳ ಒಡನಾಟ. ಅವರಿಂದ ಕಲಿತದ್ದು ಬಹಳ. ಬದುಕಬೇಕು, ಬದುಕುತ್ತ ಬೆಳೆಯಬೇಕು, ಬೆಳೆಯುತ್ತ ಕಲಿಯಬೇಕು, ಕಲಿಯುತ್ತ ತಿಳಿಯಬೇಕು. ಅವರು ನನ್ನ ಕಣ್ಣ ಮುಂದಿನ ದೊಡ್ಡ ಆದರ್ಶ, ವಿಚಾರಗಳಿಗೆ ಸ್ಫೂರ್ತಿ"- ಎನ್ನುತ್ತಿದ್ದ ಪದ್ಮಚರಣರು ಚೀನಾ ದೇಶದ ದಾರ್ಶನಿಕ, ಚಿಂತಕಜೆನ್ ತಾವೋ, ಸೂಫಿ ಮುಂತಾದವರ ಚಿಂತನೆಗಳನ್ನು ಮೈಗೂಡಿಸಿಕೊಂಡು, ರಜನೀಶರ ವಿಚಾರಧಾರೆಗಳನ್ನು ಮೆಚ್ಚುತ್ತಿದ್ದರು. ಎಲ್ಲದರಲ್ಲೂ ಹಂಸ-ಕ್ಷೀರ ನ್ಯಾಯದ ಆಯ್ಕೆ.

ಶಿವರಾಮಕಾರಂತರ ನೇತೃತ್ವದಲ್ಲಿ ಪದ್ಮಚರಣರು 1956 ರಿಂದ ಯಕ್ಷಗಾನ ಕುರಿತಾದ ರಾಗ ಸಂಶೋಧನೆ ನಡೆಸಿದ್ದರು. ಯಕ್ಷಗಾನದೊಡನೆ ಅವರದು ಅವಿರತ ಸಂಬಂಧ. ಕಾರಂತರ ಹೊಸ ಯಕ್ಷರಂಗದ ಪ್ರದರ್ಶನಗಳಲ್ಲಿ ಇವರು ಪಿಟೀಲು ವಾದಕರಾಗಿ, ಸಂಗೀತ ಸಂಯೋಜಕರಾಗಿ ಸೇವೆ ಸಲ್ಲಿಸಿದ್ದರು. ರಷ್ಯಾದಲ್ಲಿ ನಡೆದ ಭಾರತದ ಉತ್ಸವದಲ್ಲಿ ಹಾಗೂ ಕೊಲ್ಲಿ ರಾಷ್ಟ್ರಗಳು, ಗ್ರೇಟ್ ಬ್ರಿಟನ್, ಅಮೆರಿಕಾಗಳಲ್ಲಿ ನಡೆದ ಯಕ್ಷರಂಗ ಪ್ರದರ್ಶನಗಳಲ್ಲೂ ಇವರು ಪಾಲ್ಗೊಂಡಿದ್ದರು.

ಪದ್ಮಚರಣರಿಗೆ ರಂಗಭೂಮಿಯ ನಂಟು ಬಹು ಹಿಂದಿನದು. ಎಂ.ಸಿ. ಮಹದೇವಸ್ವಾಮಿಯವರ ಕನ್ನಡ ಥಿಯೇಟರ್ಸ್‌ನವರು, ಅಭಿನಯಿಸುತ್ತಿದ್ದ ಬಿ. ಪುಟ್ಟಸ್ವಾಮಯ್ಯನವರ 'ಚಿರಕುಮಾರ ಸಭಾ' ನಾಟಕಕ್ಕೆ ಇವರದೇ ಸಂಗೀತ. ಈ ಸಂದರ್ಭದಲ್ಲಿರಂಗಸ್ಥಳದ ಬಗೆಗೆ, ರಂಗ ನಾಟಕಗಳ ಬಗೆಗೆ ಆಳವಾದ ಅಧ್ಯಯನ ನಡೆಸಿದ್ದರು. ರಂಗಭೂಮಿಯ ಈ ನಂಟು ಬೆಂಗಳೂರಿನ ಸಂಧ್ಯಾಕಲಾವಿದರು ಪ್ರದರ್ಶಿಸಿದ 'ಪೌಲಸ್ತ್ಯನ ಪ್ರಣಯಕಥೆ', 'ನಾಗಾನಂದ', ಎಂದುರೋ ಮಹಾನುಭಾವುಲು' ನಾಟಕಗಳಿಗಲ್ಲದೆ, ಬ್ರೆಕ್ ನಾಟಕಗಳಿಗೂ ಕೂಡಾ ಸಂಗೀತ ಒದಗಿಸುವವರೆಗೆ ಮುಂದುವರೆದಿತ್ತು. ಆಕಾಶವಾಣಿಯ ಅನೇಕ ಶ್ರವ್ಯ ನಾಟಕಗಳಿಗೆ ಸಂಗೀತ ನಿರ್ದೇಶಿಸಿದ ಖ್ಯಾತಿ ಅವರದಾಗಿತ್ತು.

ಚಲನಚಿತ್ರರಂಗಕ್ಕೂ ಇವರ ಸೇವೆ ಸಾಕಷ್ಟು ಲಭ್ಯ. ಎಂ.ವಿ.ಕೃಷ್ಣಸ್ವಾಮಿ ನಿರ್ದೇಶನದ 'ಪಾಪ-ಪುಣ್ಯ', ಶಿವರಾಮಕಾರಂತರ 'ಕುಡಿಯರ ಕೂಸು' ಆಧರಿಸಿದ 'ಮಲೆಯ ಮಕ್ಕಳು' ಚಿತ್ರಗಳಿಗೆ ಇವರ ಸಂಗೀತ ನಿರ್ದೇಶನ.

ಪದ್ಮಚರಣರ ಸಂಗೀತವೇ ಜೀವಾಳವಾದ' Nector in Stone ' ಎಂಬ ದೂರದರ್ಶನ ಸಾಕ್ಷ್ಯಚಿತ್ರ ಮಾಲಿಕೆಯಲ್ಲಿ 'ಬೇಲೂರು' ಎಂಬ ಸಾಕ್ಷ್ಯಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ, 'ಸೋಮನಾಥಪುರ' ಎಂಬ ಚಿತ್ರಕ್ಕೆ ಅಂತರರಾಷ್ಟ್ರೀಯ ಪ್ರಶಸ್ತಿಗಳು ಸಂದಿವೆ.

ಪದ್ಮಚರಣರು ಉತ್ತಮ ಕವಿಯೂ ಹೌದು. ಅವರು ರಚಿಸಿದ ಹಲವಾರು ಸುಂದರ ಭಾವಗೀತೆಗಳು, ಭಕ್ತಿಗೀತೆ, ಕೀರ್ತನೆಗಳು ಇಂದಿಗೂ ಜನಮನದಲ್ಲಿ, ಚಿರಸ್ಥಾಯಿಯಾಗಿ ಉಳಿದಿವೆ. 'ಮನಯೇ ಮಂತ್ರಾಲಯ', 'ತಿರುಪತಿ ಗಿರಿವಾಸ', 'ಶೃಂಗಪುರಾಧೀಶ್ವರಿ', 'ಕೈಹಿಡಿದು ನಡೆಸೆನ್ನಕೊಲ್ಲಾಪುರವಾಸಿನೀ', 'ಪಾಹಿಮಹೇಶ ಪಾಪ ವಿನಾಶ' ಮುಂತಾದ ತಮ್ಮ ರಚನೆಯ ಕೀರ್ತನೆ ಭಾವಗೀತೆಗಳಿಗೆ ರಾಗದ ಜೀವತುಂಬಿ ತಮ್ಮ ಶಿಷ್ಯರ ಗಾನಕಂಠದಲ್ಲಿ, ಧಾರೆ ಎರೆದಿದ್ದಾರೆ.

ಉತ್ತಮ ಲೇಖಕರೂ ಆಗಿದ್ದ ಪದ್ಮಚರಣರು ಎಪ್ಪತ್ತರ ದಶಕದಲ್ಲಿ ವಾರಪತ್ರಿಕೆಯೊಂದಕ್ಕೆ ಅಂಕಣಕಾರರು ಆಗಿದ್ದರು. ಸಂಗೀತ ಪ್ರಪಂಚದ ಘನ ವಿದ್ವಾಂಸರುಗಳ ಬಗೆಗೆ ಲೇಖನ ಮಾಲಿಕೆ ಬರೆಯುತ್ತಿದ್ದರು. ಈ ಕ್ಯಾಸೆಟ್ ಯುಗದಲ್ಲಂತೂ ಅವರು ಸಂಗೀತ ನಿರ್ದೇಶಿಸಿದ ನೂರಾರು ಕ್ಯಾಸೆಟ್‌ಗಳು ಹೊರ ಬಂದಿವೆ.

1980-87ರಲ್ಲಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅವರನ್ನು "ಕರ್ನಾಟಕ ಕಲಾತಿಲಕ" ಎಂಬ ಬಿರುದಿನೊಂದಿಗೆ ಗೌರವಿಸಿತು. 1994ರಲ್ಲಿ ಕರ್ನಾಟಕ ಸರ್ಕಾರ ಅವರಿಗೆ 'ರಾಜ್ಯೋತ್ಸವ' ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಅಭಿಮಾನಿಗಳು ಅವರನ್ನು ಸನ್ಮಾನಿಸಿ 'ಪದ್ಮ ಪಲ್ಲವ' ಎಂಬ ಸಂಸ್ಮರಣ ಗ್ರಂಥವನ್ನು ಅರ್ಪಿಸಿ ಗೌರವಿಸಿದರು. ಆದರೂ ಅವರ ಮೇರು ಪ್ರತಿಭೆಯನ್ನು ಸರಿಯಾಗಿ ಗುರುತಿಸುವ, ಮೌಲ್ಯೀಕರಿಸುವ ಪ್ರಯತ್ನಗಳು ಪ್ರಾಮಾಣಿಕವಾಗಿ ನಡೆಯಲಿಲ್ಲವೆಂದೇ ಹೇಳಬೇಕು. ಇದು ಬಹುಮುಖ ವ್ಯಕ್ತಿತ್ವದ ಪದ್ಮಚರಣರಿಗಾದ ವೈಯಕ್ತಿಕ ನಷ್ಟವಲ್ಲ. ನಿಜಕ್ಕೂ ಇದು ಇಡೀ ಕಲಾರಂಗಕ್ಕಾದ ಅಪಾರ ನಷ್ಟ.



For More Job News Visit: www.kpscvaani.com

# ಪರಂಪರೆಯ ಹುಂಡಿ: ಲಕ್ಕುಂಡಿ

**ಹಂಪಿಯನ್ನೇನೋ ವಿಶ್ವ ಪಾರಂಪರಿಕ ತಾಣ ಮಾಡಿದರು. ಅದಕ್ಕೆ ಸಲ್ಲಬೇಕಾಗಿದ್ದ ಗೌರವ ಸಂದಂತಾಯಿತು. ಆದರೆ, ಅದರಷ್ಟೇ ಮುಖ್ಯವಾದ, ಹಂಪಿಗಿಂತ ಮಿಗಿಲಾದ ಇನ್ನೊಂದು ಊರಿದೆ. ಅದುವೇ ಗದಗದಿಂದ ಕೇವಲ 11 ಕಿ.ಮೀ ದೂರದಲ್ಲಿ ರಾಷ್ಟ್ರೀಯ ಹೆದ್ದಾರಿ 63 ರ ಪಕ್ಕದಲ್ಲಿ ಇರುವ ಲಕ್ಕುಂಡಿ.**

ಬಿ. ಆರ್. ಮಮತಾ

**ಹಂ**ಪಿಯನ್ನು ನೋಡಿ ಪ್ರಭಾವಿತರಾದವರು ಲಕ್ಕುಂಡಿಯನ್ನು ನೋಡಿ ಗರಬಡಿದಂತಾಗುತ್ತಾರೆ. ಲೊಕ್ಕಿಗುಂಡಿ ಎಂದೇ ಹೆಸರಾದ ಈ ಊರು ಸಾವಿರಾರು ವರ್ಷಗಳ ಹಿಂದೆ, ವೈಭವದಿಂದ ಮೆರೆದ ಊರಾಗಿತ್ತು. ಚಾಲುಕ್ಯರು, ಕಳಚೂರ್ಯರು, ಸೇವುಣರು ಮತ್ತು ಹೊಯ್ಸಳ ರಾಜ ಮನೆತನಗಳ ಎಲ್ಲ ಆಗು ಹೋಗುಗಳಿಗೆ ಸಾಕ್ಷಿಯಾಗಿ, ರಾಜಕೀಯ ಮೇಲಾಟ ಬೀಳಾಟಗಳಿಗೆ ಆಡುಂಬೊಲವಾಗಿ ಇಂದು ಪುಟ್ಟದೊಂದು ಹಳ್ಳಿಯಾಗಿ ರೂಪಾಂತರಗೊಂಡಿರುವ ಲಕ್ಕುಂಡಿ, ಚರಿತ್ರಾಸಕ್ತರು, ವಾಸ್ತುಶಿಲ್ಪದಲ್ಲಿ ಆಸಕ್ತಿ ಇರುವವರು, ಹಳೆಯ ಕಥೆಗಳ ಕುರಿತು ಕುತೂಹಲ ಇಟ್ಟುಕೊಂಡವರು, ವಿದ್ಯಾರ್ಥಿಗಳು, ಪಂಡಿತರು, ಪಾಮರರಿಗೆಲ್ಲಾ, ಬೊಗಸೆ ತುಂಬ ಮಾಹಿತಿ ಅಗೆದಗೆದು ನೀಡುವ ಆಗರವಾಗಿದೆ.



For More Job News Visit: www.kpscvaani.com



ಚಿನ್ನದ ಠಂಕಸಾಲೆಯೂ ಇಲ್ಲಿತ್ತೆಂದು ಪ್ರಾಚ್ಯವಸ್ತು ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಅವರ ಮಾತನ್ನು ಗಟ್ಟಿಗೊಳಿಸುವಂತೆ ಜೋರಾಗಿ ಮಳೆಬಿದ್ದ ಮರುದಿನ ಚಿನ್ನದ ನಾಣ್ಯಗಳು ಸಿಕ್ಕ ಉದಾಹರಣೆಯಿದೆ ಎಂದು ಸ್ಥಳೀಯರು ಹೇಳುತ್ತಾರೆ.

ಒಂದಾನೊಂದು ಕಾಲದಲ್ಲಿ ನೂರಕ್ಕಿಂತ ಹೆಚ್ಚು ದೇವಾಲಯಗಳಿದ್ದವು ಎನ್ನಲಾದ ಲಕ್ಕುಂಡಿಯಲ್ಲಿ ಕಾಲನ ಕಾಲ್ತುಳಿತವನ್ನೂ ತಡೆದು ನಿಂತಿರುವುದೀಗ ಸರಿಸುಮಾರು 50 ದೇವಾಲಯಗಳು ಮತ್ತು ಕಟ್ಟಡಗಳು. ಮೆಟ್ಟಿಲುಗಳ ಜಾಲದಲ್ಲಿ ತುಂಬಿ ನಿಂತ ಕಲ್ಯಾಣಿಗಳು, ಶಾಂತಿಯ ಸಂದೇಶ ಬೀರುತ್ತಾ ತಲೆಎತ್ತಿ ನಿಂತ ಜೈನ ಬಸದಿಗಳು, ಅದ್ಭುತ ವಾಸ್ತು ವೈಭವದ ದೇವಾಲಯಗಳು, ಶಾಸನಗಳು ಮತ್ತು ವಸ್ತುಸಂಗ್ರಹಾಲಯಗಳನ್ನು ಒಡಲಲ್ಲಿಟ್ಟುಕೊಂಡ ಲಕ್ಕುಂಡಿಯಲ್ಲಿ ಕೈಚಾಚಿದೆಡೆ, ಇತಿಹಾಸದ ತುಣುಕೊಂದು ಸಿಗುತ್ತದೆ. ಕಾಲಿಟ್ಟೆಡೆ ಕಥೆಯೊಂದು ಮೈತೆರೆದುಕೊಳ್ಳುತ್ತದೆ. ಇಲ್ಲಿ 29 ಶಾಸನಗಳಿವೆ, ಇತಿಹಾಸದ ಪುಟಗಳನ್ನು ನಮ್ಮ ಮುಂದೆ ತೆರೆದಿಡುತ್ತಾ. . . .

ಚಿನ್ನದ ಠಂಕಸಾಲೆಯೂ ಇಲ್ಲಿತ್ತೆಂದು ಪ್ರಾಚ್ಯವಸ್ತು ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಅವರ ಮಾತನ್ನು ಗಟ್ಟಿಗೊಳಿಸುವಂತೆ ಜೋರಾಗಿ ಮಳೆಬಿದ್ದ ಮರುದಿನ ಚಿನ್ನದ ನಾಣ್ಯಗಳು ಸಿಕ್ಕ ಉದಾಹರಣೆಯಿದೆ ಎಂದು ಸ್ಥಳೀಯರು ಹೇಳುತ್ತಾರೆ.

ಇಲ್ಲಿಗೆ ಸಮೀಪವಿರುವ ಮನಗುಂದಿಯಲ್ಲಿರುವ ಶಾಸನವೊಂದು ಕೂಡ ಠಂಕಸಾಲೆಯ ಕುರಿತು ಹೇಳುತ್ತದೆ. ಈ ಠಂಕಸಾಲೆಯ ಉಸ್ತುವಾರಿಯನ್ನು ಅಮಜಶೆಟ್ಟಿ ಎಂಬವ ನೋಡಿಕೊಳ್ಳುತ್ತಿದ್ದ ಎನ್ನುವುದಕ್ಕೆ ಪುರಾವೆಯೂ ಇದೆ. ಸರಿಸುಮಾರು ದಕ್ಷಿಣ ಭಾರತದಲ್ಲೆಲ್ಲಾ ಈ ನಾಣ್ಯಗಳ ಚಲಾವಣೆಯಿತ್ತು ಎಂದು ಚರಿತ್ರಜ್ಞರೂ ಹೇಳುತ್ತಾರೆ.

ಇಷ್ಟೆಲ್ಲಾ ವಿವರ ತೆಗೆಯುವ ಹೊತ್ತಿಗೆ ಹೊಟ್ಟೆ ಚುರುಗುಡುತ್ತಿತ್ತು. ಅಲ್ಲಿಯೇ ಇದ್ದ ಚಿಕ್ಕ ಹೋಟೆಲೊಂದರಲ್ಲಿ, ಪೂರಿ ಭಾಜಿ ತಿಂದು ಹೊರಬಿದ್ದಾಗ, ಪ್ರಶ್ನೆಯೊಂದು ಮುಂದೆ ನಿಂತಿತು. ಲಕ್ಕುಂಡಿಯ ದರ್ಶನವನ್ನು ಎಲ್ಲಿಂದ ಪ್ರಾರಂಭಿಸುವುದು ಎಂದು.

ಇಲ್ಲಿ ಬ್ರಹ್ಮ ಜಿನಾಲಯ, ನಾಗನಾಥ ದೇವಾಲಯ, ಜ್ಞಾನೇಶ್ವರ ದೇವಾಲಯ, ವಿಶ್ವನಾಥ, ಮಣಿಕೇಶ್ವರ, ಕುಂಬಾರೇಶ್ವರ, ದೊಡ್ಡಬಸಪ್ಪ ಮೊದಲಾದ ದೇವಾಲಯಗಳು ಪ್ರಮುಖ ದೇವಸ್ಥಾನಗಳಾಗಿದ್ದು, ಎಲ್ಲವೂ ನೋಡತಕ್ಕಂತವೇ. ಎಲ್ಲವೂ ತಮ್ಮದೇ ಕಥೆಗಳನ್ನು ತಮ್ಮ ಹಿಂದೆ ಬಚ್ಚಿಟ್ಟುಕೊಂಡಿವೆ.

ಇಲ್ಲಿನ ಅತಿಪ್ರಮುಖ ದೇವಾಲಯವಾದ ಬ್ರಹ್ಮ ಜಿನಾಲಯದತ್ತ ಹೆಜ್ಜೆ ಹಾಕಿದೆ. 11 ನೇ ಶತಮಾನದ ಉತ್ತರಾರ್ಧದಲ್ಲಿ ಕಟ್ಟಿರಬಹುದಾದ ಈ ದೇವಾಲಯ ಅತ್ಯಂತ ಸುಂದರವಾಗಿದೆ. ದೇವಾಲಯದ ಸೂಕ್ಷ್ಮ ಕೆತ್ತನೆಗಳು ಅದ್ಭುತ ಎನಿಸುವಂತದ್ದು.

ಕಲ್ಯಾಣ ಚಾಲುಕ್ಯ ಚಕ್ರವರ್ತಿ ಇರಿವಬೆಡಂಗ ಸತ್ಯಾಶ್ರಯ ಖ್ಯಾತ ಚಕ್ರವರ್ತಿಗಳಲ್ಲೊಬ್ಬ. ಅವನ ಪಾಳೇಗಾರರಲ್ಲೊಬ್ಬ, ನಾಗದೇವ. ಈತನ ಹೆಂಡತಿ ಅತ್ತಿಮಬ್ಬೆ. ಈಕೆ ದಾನಚಿಂತಾಮಣಿ ಎಂದೇ ಹೆಸರಾದವಳು. ಲೇಖಕಿ, ಸಾಹಿತ್ಯ ಪೋಷಕಿ. ಇವಳಿಂದಲೇ ಈ ಬ್ರಹ್ಮ ಜಿನಾಲಯ ಕಟ್ಟಲ್ಪಟ್ಟಿರುವುದು. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ವಿಕಸನಗೊಂಡು, ಖ್ಯಾತವಾಗಿದ್ದ, ಕರ್ನಾಟಕ ದ್ರಾವಿಡ ಶೈಲಿಯ ಸುಂದರ ದೇವಾಲಯಗಳಲ್ಲಿ ಒಂದು, ಈ ಬ್ರಹ್ಮ ಜಿನಾಲಯ.

5 ಅಂತಸ್ತುಗಳ ಚೌಕಾಕೃತಿಯ ವಿಮಾನಗೋಪುರ ಹೊಂದಿದ ಈ ದೇವಾಲಯದ ನವರಂಗ ಮತ್ತು ಮುಖಮಂಟಪಗಳು ಹಾಗೂ ಈ ಮುಖಮಂಟಪ ತೆರೆದುಕೊಳ್ಳುವ ಮುಖ್ಯಮಂಟಪವೊಂದು, ಶಿಲ್ಪಕಲೆಯ ತವರು. ಈ ಮುಖ್ಯಮಂಟಪವನ್ನು ಆಧರಿಸಿರುವ 28 ಸ್ತಂಭಗಳ ಮೇಲೆ ಮಾಡಿರುವ ಅಪರೂಪದ ಕಲೆ ನೋಡುಗರ, ಕಣ್ಮನ ಸೆಳೆಯುತ್ತದೆ.

ಗೋಪುರದ ಎರಡನೆ ಅಂತಸ್ತು ಅಷ್ಟೇನು ಮಹತ್ವದ ಕೆತ್ತನೆಗಳನ್ನು ಒಳಗೊಳ್ಳದಿದ್ದರೂ, ಮೇಲಿನ ಮೂರು ಅಂತಸ್ತುಗಳು, ಅತಿ ಸೂಕ್ಷ್ಮ ಕೆತ್ತನೆಗಳುಳ್ಳ ಚೌಕಾಕಾರದ ಸ್ತಂಭಗಳು ಮತ್ತು ಸಿಂಹದ ಮುಖವಾಡವನ್ನು ಹೊಂದಿವೆ. ಈ ಕೆತ್ತನೆಗಳು ಅತ್ಯಂತ ಸೂಕ್ಷ್ಮ ಕುಸುರಿ ಕೆಲಸವನ್ನು ಒಳಗೊಂಡಿದ್ದು, ಅಚ್ಚುಕಟ್ಟಾಗಿ ಅಲಂಕೃತಗೊಂಡಿದೆ. ಈ ಸ್ತಂಭಗಳಿಂದಾಗಿ ವಿಮಾನದ ಒಟ್ಟು ಎತ್ತರವು ಗಣನೀಯವಾಗಿ ಹೆಚ್ಚಾಗಿದೆ. ದೇವಾಲಯದ ಹೊರ ಗೋಡೆಯ ಮೇಲಿನ ತೀರ್ಥಂಕರರು, ಯಕ್ಷ ಮತ್ತು ಯಕಿಣ್ಣಿಯರುಗೋಡೆಯ ಅಂದವನ್ನಷ್ಟೇ ಹೆಚ್ಚಿಸದೆ, ದೇವಾಲಯದ ಒಟ್ಟಾರೆ ಸೌಂದರ್ಯಕ್ಕೆ ಚಂದದ ಕುಂದಣವನ್ನು ಒದಗಿಸಿದೆ. ದ್ವಾರದ ಇಕ್ಕೆಲಗಳಲ್ಲಿ ಬಳ್ಳಿಯನ್ನು ಕೆತ್ತಲಾಗಿದೆ.

ಇದರೊಂದಿಗೆ ನೃತ್ಯಗಾರರು, ಸಂಗೀತಗಾರರು, ಮಗು ಮತ್ತು



For More Job News Visit: www.kpscvaani.com

ತಾಯಿ ಹಾಗೂ ಗಜಲಕ್ಷ್ಮಿಯನ್ನೂ ಭಾವಣಿಯ ಮೇಲೆ ಕೆತ್ತಲಾಗಿದೆ. ಈ ದೇವಾಲಯದಲ್ಲಿನ ಬ್ರಹ್ಮದೇವನ ವಿಗ್ರಹವಂತೂ ವರ್ಣನೆಗೆ ಸಿಗಲಾರದಷ್ಟು ಸುಂದರವೂ, ವಿಶಿಷ್ಟವೂ ಆಗಿದೆ. ಚತುರ್ಮುಖ ವಿಗ್ರಹವನ್ನು ದೇವಾಲಯವನ್ನು ನಿರ್ಮಿಸಲು ಬಳಸಲಾಗಿರುವ ಅದೇ ಶೀಯಿಸ್ಟ್ ಕಲ್ಲಿನಿಂದ ಕಡೆದು ನಿಲ್ಲಿಸಲಾಗಿದೆ. ಬ್ರಹ್ಮದೇವನ ಮುಖಗಳನ್ನು ಚೆನ್ನಾಗಿ ಮಿರುಗುವಂತೆ ಮಾಡಿರುವುದರಿಂದ, ವಿಗ್ರಹದ ಉಳಿದ ಭಾಗಕ್ಕೆ ಸ್ಪಷ್ಟವಾದ ಭಿನ್ನತೆಯನ್ನು ಎತ್ತಿ ತೋರಿಸುತ್ತದೆ. ಆತನ ಮುಂಗೈಗಳು ರುದ್ರಾಕ್ಷಿಯನ್ನೂ ಹಾಗೂ ಕಮಲವನ್ನು ಹಿಡಿದಿದ್ದರೆ, ಆತನ ಉಳಿದೆರಡು ಕೈಗಳು ಮುರಿದು ಹೋಗಿವೆ. ಬ್ರಹ್ಮನ ಮಡದಿಯರಾದ ಸಾವಿತ್ರಿ ಮತ್ತು ಗಾಯತ್ರಿ, ಆತನ ಪಾದದ ಬಳಿ ನಿಂತಿದ್ದಾರೆ.

ದೇವಾಲಯದ ಗರ್ಭಗುಡಿಯಲ್ಲಿ ವರ್ಧಮಾನ ಮಹಾವೀರ ತೀರ್ಥಂಕರನ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಇದನ್ನು ಕಪ್ಪುಕಲ್ಲಿನಿಂದ ಕೆತ್ತಲಾಗಿದ್ದು, ಆತನ ಎರಡೂ ಪಕ್ಕದಲ್ಲಿ ಚಾಮರ ಬೀಸುವವರು ಹಾಗೂ ಮೇಲೆ ಮೂರು ಕೊಡೆಗಳನ್ನು ಕೆತ್ತಲಾಗಿದೆ. ಆದರೆ, ದೇವಾಲಯಕ್ಕೆ ಯಾರ ಹೆಸರನ್ನು ಇಡಲ್ಪಟ್ಟಿದೆಯೋ ಅದೇ ಚತುರ್ಮುಖ ಬ್ರಹ್ಮನ ವಿಗ್ರಹ ಎಲ್ಲಕ್ಕಿಂತ ವಿಶಿಷ್ಟವಾಗಿ ಕಂಗೊಳಿಸುತ್ತದೆ.

ದೇವಾಲಯದ ಆವರಣದಲ್ಲಿರುವ ಭಾರತೀಯ ಪ್ರಾಚ್ಯವಸ್ತು ನಿರ್ದೇಶನಾಲಯ ನಿರ್ವಹಣೆ ಮಾಡುತ್ತಿರುವ ವಸ್ತುಸಂಗ್ರಹಾಲಯದಲ್ಲಿ ಲಕ್ಕುಂಡಿಯ ಅನೇಕ ಕಲಾಕೃತಿಗಳನ್ನು ಸಂಗ್ರಹಿಸಲಾಗಿದೆ. ಛಾಯಾಗ್ರಹಣವನ್ನು ಇಲ್ಲಿ ನಿಷೇಧಿಸಲಾಗಿದೆ. ಇತಿಹಾಸದ ಪ್ರಾಧ್ಯಾಪಕರಾದ ಡಾ: ಸರ್ವೇಶ್ ಅವರು ಹೇಳುವ ಪ್ರಕಾರ, ಕಲ್ಯಾಣ ಚಾಲುಕ್ಯರ ವಾಸ್ತುಶಿಲ್ಪವು ಬಾದಾಮಿಯ ಚಾಲುಕ್ಯರು ಮತ್ತು ಅವರ ನಂತರ ಪ್ರಬಲರಾದ ಹೊಯ್ಸಳರ ವಾಸ್ತುಶಿಲ್ಪ ಶೈಲಿಗೂ ಒಂದು ಬಲವಾದ ಕೊಂಡಿಯನ್ನು ಬೆಸೆದಂತಿದೆ.

ಈ ವಸ್ತುಸಂಗ್ರಹಾಲಯದ ನಿರ್ವಾಹಕರ ಪ್ರಕಾರ, ಬ್ರಹ್ಮ ಜಿನಾಲಯ ಸಂಕೀರ್ಣ 250 ಕ್ಕೂ ಹೆಚ್ಚು ಶಾಸನಗಳ, ಪ್ರತಿಮೆಗಳ ಮತ್ತು ಕೆತ್ತನೆಗಳ ಆಗರ. ಈ ಆಸ್ತಿಯ ಬಹುತೇಕ ಭಾಗ ಛಿದ್ರಗೊಂಡಿದ್ದರೂ, ಅವು ಈಗಲೂ ನೋಡಲು ಮೋಹಕವಾಗಿವೆ. ಹಾಗಾಗಿ ಲಕ್ಕುಂಡಿಯ ಸೌಂದರ್ಯಗರ್ಭದಲ್ಲಿನ ಪಯಣ, ಅಷ್ಟು ಬೇಗ ಮುಗಿಯುವಂತಹುದಲ್ಲ.

**ಲಕ್ಕುಂಡಿಯನ್ನು ಹೀಗೆ ತಲುಪಬಹುದು:**

ರಸ್ತೆ ಸಂಪರ್ಕ ಲಕ್ಕುಂಡಿಗೆ ಚೆನ್ನಾಗಿದೆ. ಗದಗ ಅಥವಾ ಕೊಪ್ಪಳಕ್ಕೆ ಬಂದರೆ, ಲಕ್ಕುಂಡಿಯನ್ನು ಸುಲಭವಾಗಿ ತಲುಪಬಹುದು. ಗದಗದಿಂದ 11 ಕಿ.ಮೀ ಮತ್ತು ಕೊಪ್ಪಳದಿಂದ 50 ಕಿ.ಮೀಗಳ ದೂರದಲ್ಲಿದೆ ಲಕ್ಕುಂಡಿ. ಸಾರ್ವಜನಿಕ ಸಾರಿಗೆಯೂ ಲಭ್ಯ. ಸ್ವಂತ ವಾಹನವಿದ್ದರೆ ಒಂದಿಷ್ಟು ಬಿಡುವಾಗಿ ಬಂದಲ್ಲಿ, ಆಸಕ್ತಿಯಿಂದ ಲಕ್ಕುಂಡಿಯನ್ನು ನೋಡಬಹುದು.

ಛಾಯಾಗ್ರಾಹಕರಾದರೆ ಅದ್ಭುತ ಚಿತ್ರಗಳನ್ನು ತೆಗೆಯಬಹುದು. ಕಲಾವಿದರಾದರೆ ಕುಂಚಕ್ಕೆ ಬಿಡುವಿಲ್ಲದೆ ಕೆಲಸ ನೀಡಬಹುದು. ಇತಿಹಾಸಾಸಕ್ತರಾದರೆ ಪುಟಗಟ್ಟಲೆ ಇತಿಹಾಸವನ್ನು ಓದಬಹುದು. ಸಾಮಾನ್ಯರಾದರಂತೂ ಅತ್ಯುತ್ತಮ ಔಟಿಂಗ್ ಮಾಡಬಹುದು. ಆಯ್ಕೆ ನಿಮ್ಮದು.

**ಲಕ್ಕುಂಡಿಯ ಮುಕುಟ**

ಹಂಪಿ ಮತ್ತು ಪಟ್ಟದಕಲ್ಲಿಗೆ ಹರಕೆ ಹೊತ್ತಂತೆ ಭೇಟಿ ನೀಡುವ ಪ್ರವಾಸಿಗರು, ಹೆದ್ದಾರಿಯಲ್ಲಿಯೇ ಇರುವ ಲಕ್ಕುಂಡಿಯನ್ನು ನೋಡಲು ಮರೆಯುತ್ತಾರೆ. ಇದು ಲಕ್ಕುಂಡಿಯ ದುರಾದೃಷ್ಟವೇ ಇರಬೇಕು. ಲಕ್ಕುಂಡಿಗೆ ಭೇಟಿ ನೀಡುವ ಸಲುವಾಗಿ ಸ್ವಲ್ಪ ಹೆಚ್ಚಿನ ಶ್ರಮ ತೆಗೆದುಕೊಳ್ಳುವ ಪ್ರವಾಸಿಗರಿಗೆ ಲಕ್ಕುಂಡಿ ಎಂದೂ ನಿರಾಸೆಯುಂಟು ಮಾಡಿಲ್ಲ, ಮಾಡುವುದೂ ಇಲ್ಲ.

ಕಲ್ಯಾಣ ಚಾಲುಕ್ಯ ಅಥವಾ ಬಾದಾಮಿಯ ಚಾಲುಕ್ಯರ ಕಾಲದ ಐಹೊಳೆ, ಬಾದಾಮಿ ಮತ್ತು ಪಟ್ಟದಕಲ್ಲಿನ ವಾಸ್ತುಶಿಲ್ಪವು ನಿಮ್ಮನ್ನು ಸಮ್ಮೋಹನಗೊಳಿಸಿದರೆ, ವೇಸರ ವಾಸ್ತುಶಿಲ್ಪ ಮತ್ತು ಕಲ್ಯಾಣ ಚಾಲುಕ್ಯ ವಾಸ್ತು ಶೈಲಿಯ ತೊಟ್ಟಿಲಾದ ಲಕ್ಕುಂಡಿ ನಿಮ್ಮಲ್ಲಿ ಬೆರಗು ಹುಟ್ಟಿಸುತ್ತದೆ. ಮತ್ತೊಮ್ಮೆ, ಮಗದೊಮ್ಮೆ ನೋಡಬೇಕು, ಅನುಭವಿಸಬೇಕು ಎನ್ನುವ ಭಾವ ಮೂಡಿಸುತ್ತದೆ.

ಭಾರತೀಯ ಪ್ರಾಚ್ಯವಸ್ತು ನಿರ್ದೇಶನಾಲಯ ಅಧಿಕಾರಿಗಳ ಪ್ರಕಾರ, ಪಟ್ಟದಕಲ್ಲಿನಲ್ಲಿರುವ 8ನೆ ಶತಮಾನದ ದೇವಾಲಯಗಳು ದ್ರಾವಿಡ (ದಕ್ಷಿಣ) ಮತ್ತು ನಗರ (ಉತ್ತರ, ಇಂಡೋ–ಆರ್ಯನ್) ಶೈಲಿಯ ದೇವಾಲಯ ವಾಸ್ತುಶಿಲ್ಪವನ್ನು ಹೊಂದಿದ್ದರೆ, ಲಕ್ಕುಂಡಿ ವೇಸರ ಎಂಬ ಹೊಸ ಶೈಲಿಯ ವಾಸ್ತುಶಿಲ್ಪದ ಬಹುದೊಡ್ಡ ಕೇಂದ್ರವಾಗಿದೆ. ಉತ್ತರ ಭಾರತ (ನಗರ) ಹಾಗೂ ದಕ್ಷಿಣ ಭಾರತ (ದ್ರಾವಿಡ) ಶೈಲಿಗಳ ಸಮ್ಮೋಹಕ ಸಮ್ಮಿಶ್ರಿತ ಶೈಲಿ ಇದು. ಇಲ್ಲಿ ಪರಿಚಯಿಸಲ್ಪಟ್ಟ ಹಲವಾರು ಅದ್ವಿತೀಯ ವಿನ್ಯಾಸಗಳನ್ನು, ಹೊಯ್ಸಳರು ಮುಂದೆ ತಮ್ಮ ದೇವಾಲಯಗಳಲ್ಲಿ ಬಳಸಿಕೊಂಡಿದ್ದಾರೆ.

11 ನೆ ಶತಮಾನದ ಕಾಶಿವಿಶ್ವೇಶ್ವರ ದೇವಾಲಯ ಚಾಲುಕ್ಯ ಶೈಲಿಯ ಉನ್ನತ ಮಟ್ಟದ ವಾಸ್ತುಶಿಲ್ಪಕ್ಕೆ ಅತ್ಯಂತ ಪ್ರಸಿದ್ಧ ದೇವಾಲಯ. ಉತ್ತರ ಮತ್ತು ದಕ್ಷಿಣ ಭಾರತ ಶೈಲಿಯ ದೇವಾಲಯ ಶೈಲಿಯ ಪ್ರಬುದ್ಧ ಸಮ್ಮಿಶ್ರಣವನ್ನು ಇಲ್ಲಿ ಕಾಣಬಹುದಾಗಿದೆ.

ನೈಜ ವೇಸರ ಶೈಲಿಯಲ್ಲಿರುವ ಈ ದೇವಾಲಯವು ಚೌಕಾಕಾರದಲ್ಲಿದ್ದು, ಪ್ರತಿ ಭಾಗದ ಮಧ್ಯದಿಂದ ಅನೇಕ ಹೊರಚಾಚುಗಳು ಬಂದು ಒಂದು ಶಿಲುಬೆಯಾಕಾರ ಪಡೆದು, ಪ್ರತಿ ಭಾಗದಿಂದ ಪುನರ್– ಪ್ರವೇಶಿಸುವ ಕೋನಗಳನ್ನು ಹೊಂದಿರುವುದು ನಿಜವಾಗಿ ಕುತೂಹಲಕಾರಿ.

ನಾನು ನೋಡಿರುವ ಕಟ್ಟಡಗಳ ಪೈಕಿ ಅತ್ಯಂತ ಅದ್ಭುತ ರಚನೆಗಳಲ್ಲಿ ಈ ದ್ವಿಕೂಟ ದೇವಾಲಯ (ಎದುರು ಬದರಾಗಿರುವ ಎರಡು ದೇವಾಲಯಗಳು) ಒಂದು. ಮುಖ್ಯ ದೇಗುಲವು ಪೂರ್ವ ದಿಕ್ಕಿಗೆ ಮುಖಮಾಡಿದ್ದು, ಕಾಶಿವಿಶ್ವೇಶ್ವರನ ಮಂದಿರವಾಗಿದೆ. ಮತ್ತೊಂದು ದೇವಾಲಯವು ಪಶ್ಚಿಮ ದಿಕ್ಕಿಗಿದ್ದು, ಸೂರ್ಯ ದೇವನಿಗೆಂದು ನಿರ್ಮಿಸಲಾಗಿದೆ.

ನಾನು ಸೂರ್ಯ ದೇಗುಲಗಳನ್ನು ನೋಡಿದ್ದೆ. ಸಾಮಾನ್ಯವಾಗಿ ಅವು ಪೂರ್ವ ದಿಕ್ಕಿಗೆ ಇರುತ್ತವೆ ಎಂದು ಗೊತ್ತಿತ್ತು. ಇಲ್ಲಿನ ಸೂರ್ಯ ದೇವಾಲಯವೋ ಪಶ್ಚಿಮ ದಿಕ್ಕಿಗಿದೆ. ಆದರೂ ಇದನ್ನು ಸೂರ್ಯನಾರಾಯಣ ದೇಗುಲವೆಂದು ಕರೆಯುತ್ತಾರೆ. ಹೀಗಾಗಿ ಇದು ಅನನ್ಯ ಎನಿಸಿತು. ಕುತೂಹಲ ಹುಟ್ಟಿಸಿತು.

ದೇವಾಲಯದ ಪ್ರಾಕಾರ, ಅಂದರೆ ದೇವಾಲಯ ನಿಂತಿರುವ



For More Job News Visit: www.kpscvaani.com



ಪೀಠ ಕಮಲದಳಗಳು ಮತ್ತು ಆನೆಗಳ ಭಿತ್ತಿಯಿಂದ ಅಲಂಕೃತವಾಗಿದೆ. ಈ ಮಾದರಿಯು ಗುಜರಾತಿನಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ.

ನಗರ ಶೈಲಿಯಲ್ಲಿರುವ ಶಿಲ್ಪವಂತೂ ಅಪೂರ್ವವಾದದ್ದು. ಈ ಶಿಖರದ ಪ್ರತಿ ಅಂತಸ್ತುಗಳನ್ನು ಸಾಲಂಕೃತ ತ್ರಿಕೋನ ಕಮಾನುಗಳು ಮತ್ತು ಶಾರ್ದೂಲ ವಿಗ್ರಹಗಳಿಂದ ಕಲಾತ್ಮಕವಾಗಿ ಬೆಸೆಯಲಾಗಿದೆ. ಈ ಎರಡು ದೇವಾಲಯಗಳ ಮಧ್ಯೆ ಒಂದು ಸಾಮಾನ್ಯ ವೇದಿಕೆಯಿದ್ದು, ಇದು ಎರಡು ದೇವಾಲಯಗಳ ತೆರೆದ ಮಂಟಪ ಇದ್ದಿರಬಹುದು ಎಂದು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ.

ದೇವಾಲಯದ ಹೊರಗೋಡೆಗಳಂತೂ ಸಂಕೀರ್ಣ ಮತ್ತು ಸೂಕ್ಷ್ಮ ಕೆತ್ತನೆಗಳ ಚಿತ್ತಾರ. ದಂತ, ಬೆಳ್ಳಿಯಲ್ಲಿ ಮೂಡಿಸುವ ಫಿಲಿಗ್ರಿ ಕೆಲಸದಂತೆ ಭಾಸವಾಗುವ ಅತಿ ಸೂಕ್ಷ್ಮ ಎಳೆಕೆತ್ತನೆಗಳನ್ನು ಒಳಗೊಂಡ ದೇವಾಲಯದ ಹೊರ ಮತ್ತು ಒಳಗೋಡೆಗಳು ನಿಮ್ಮನ್ನು ಬೇರೊಂದು ಲೋಕಕ್ಕೇ ಕರೆದೊಯ್ಯುತ್ತದೆ. ಬಳಪದ ಕಲ್ಲಿನ ಮೇಲೆ ಮೂಡಬಹುದಾದ ಎಲ್ಲ ಸಾಧ್ಯತೆಗಳನ್ನು ಇಲ್ಲಿ ಒಡಮೂಡಿದೆ.

ಅಂದಿನ ರಾಜರುಗಳ ಲಾಂಛನವಾಗಿದ್ದ ಕೀರ್ತಿಮುಖವನ್ನು ದೇವಾಲಯದ ಹೊರ ಪ್ರಾಕಾರದಲ್ಲಿ ಕೆತ್ತಲಾಗಿದೆ. ಬಾಗಿಲ ಚೌಕಟ್ಟಿನ ಮೇಲೆ ನವಿಲಿನ ಬಾಲ, ಮೊಸಳೆಯ ದೇಹ ಆನೆಯ ಸೊಂಡಿಲನ್ನು ಹೊಂದಿದ ಪೌರಾಣಿಕ ಪ್ರಾಣಿ ಮಕರವಿದೆ. ವರುಣ ಮತ್ತು ಗಂಗೆಯರ ವಾಹನವಿದು ಎಂದು ಹೇಳಲಾಗುತ್ತದೆ.

ಬಾಗಿಲಿನ ಸುತ್ತಲಿನ ಪ್ರಭಾವಳಿಯಲ್ಲಿ ಗಜಲಕ್ಷ್ಮಿ ಕೆತ್ತನೆಯೊಂದಿದೆ. ಬಾಗಿಲುಗಳ ಮೇಲೆ ಪಕ್ಕಿಗಳು, ಪ್ರಾಣಿಗಳು ಮತ್ತು ಹೂಗಳ ಚಿತ್ತಾರವಿದೆ. ಬಾಗಿಲಿನ ಮೇಲ್ಭಾಗದಲ್ಲಿ ಮನುಷ್ಯರು ಮತ್ತು ಪ್ರಾಣಿಗಳ ಮೆರವಣಿಗೆಯ ಚಿತ್ರವಿದೆ. ಆರು ಇಂಚು ಎತ್ತರವಿರುವ ಈ ಚಿತ್ರಗಳು ಪರಿಪೂರ್ಣಪ್ರಮಾಣದಲ್ಲಿವೆ.

ದೇವಾಲಯದ ಆರಾಧ್ಯದೈವ ಶಿವಲಿಂಗ. ಈ ದೇವಾಲಯವೋ ಛಾಯಾಗ್ರಾಹಕರಿಗೆ ರಸದೌತಣ ನೀಡುವಂಥದ್ದು. ಅಲ್ಲಿದ್ದ ಗೈಡ್ ನನಗೆ ಫೋಟೋ ತೆಗೆಯಕೂಡದು ಎಂದಾಗ ನಿಜವಾಗಿಯೂ ನಿರಾಸೆಯಾಗಿತ್ತು.

ದೇವಾಲಯದ ಛಾವಣಿಯಲ್ಲಿರುವ ತೊಲೆಯೊಂದರ ಮೇಲೆ ನಾಲ್ಕನೇ ವಿಕ್ರಮಾದಿತ್ಯನದು ಎಂದು ಹೇಳಲಾಗುವ ಕ್ರಿ.ಶ.1087 ರ ಶಾಸನವೊಂದಿದೆ. ಈ ತೊಲೆಯ ಸುತ್ತಣ ಜಾಗವನ್ನು ಮತ್ತು ಶಾಸನವನ್ನು ಗಮನಿಸಿದಾಗ ಸಾಮಾನ್ಯ ರೀತಿಯಲ್ಲಿ ಕಟ್ಟಲ್ಪಟ್ಟ ಮೂಲ ದೇವಾಲಯವನ್ನು ಚೋಳರು ಆಕ್ರಮಿಸಿಕೊಂಡ ನಂತರದ ಕಾಲಾವಧಿಯಲ್ಲಿ ಶಿಲ್ಪಕಲಾ ಶ್ರೀಮಂತಿಕೆಯಿಂದ ಸಿಂಗರಿಸಲಾಗಿರಬಹುದು ಎಂದೆನಿಸುತ್ತದೆ. ಏಕೆಂದರೆ, ಲಕ್ಕುಂಡಿಯ ಎಲ್ಲ ಶಾಸನಗಳು ಸಾಮಾನ್ಯವಾಗಿ 1170 ಮತ್ತು ನಂತರದವು.

ಹೆನ್ರಿ ಕೂಸೆನ್ ರ ಪ್ರಕಾರ ಹೊಯ್ಸಳರ ಎರಡನೇ ವೀರ ಬಲ್ಲಾಳನು ಲಕ್ಕುಂಡಿಯನ್ನು ದೇವಗಿರಿಯ ಸೇವುಣರಿಂದ 1193 ರಲ್ಲಿ ಗೆದ್ದು ಅದನ್ನು ತನ್ನ ರಾಜಧಾನಿಯಾಗಿಸಿಕೊಂಡ. ಹೀಗಾಗಿ ಇವನು ದೇವಾಲಯದ ಪುನರುಜ್ಜೀವನ ಮಾಡಿರುವ ಸಾಧ್ಯತೆಗಳು ಇವೆ.

ಇಲ್ಲಿಂದ ಹೊರಬಂದು ನಾವು ಕಾಶಿ ವಿಶ್ವೇಶ್ವರ ದೇವಾಲಯದ ಉತ್ತರ ದಿಕ್ಕಿನಲ್ಲಿರುವ ನನ್ನೇಶ್ವರಕ್ಕೆ ಭೇಟಿ ನೀಡಿದೆವು. ನನ್ನೇಶ್ವರ ದೇವಾಲಯ ಕಾಶಿ ವಿಶ್ವನಾಥ ದೇವಾಲಯದ ಪುಟ್ಟ ಪ್ರತಿರೂಪದಂತಿದೆ. ಬಹುಶ: ಕಾಶಿ ವಿಶ್ವೇಶ್ವರ ದೇವಾಲಯವನ್ನು ಕಟ್ಟುವ ಮುನ್ನ ಮಾಡಿಕೊಂಡಿರಬಹುದಾದ ಮಾದರಿ ಇದಾಗಿರಬಹುದು.


ದೇವಾಲಯ ಸಂಕೀರ್ಣವನ್ನು ನೋಡಿ ಬಂದ ಮೇಲೆ, ಹೆನ್ರಿ ಕೂಸೆನ್ ಇದನ್ನು ಕನ್ನಡ ನಾಡಿನ ಅತ್ಯಂತ ಸುಂದರ ದೇವಾಲಯ ಎಂದೇಕೆ ಹೇಳಿದರು ಎನ್ನುವುದು ನನಗೆ ಅರ್ಥವಾಯಿತು. ಅತಿ ಸುಂದರ ಶಿಲ್ಪ ಕಾವ್ಯವನ್ನು ರೂಢಿಸಿದ ಚಾಲುಕ್ಯ ಶಿಲ್ಪಕಲಾ ಶೈಲಿಯ ಅತ್ಯುನ್ನತ ಮಾದರಿಗಳನ್ನು ನೋಡಬೇಕಾದರೆ ನೀವು ಲಕ್ಕುಂಡಿಗೆ ಭೇಟಿ ನೀಡಲೇ ಬೇಕು.

**(ಕನ್ನಡಕ್ಕೆ ಅನುವಾದ : ರಮೇಶ್ ಕೆಂಗೇರಿ)**



For More Job News Visit: www.kpscvaani.com

# ಪದಬಂಧ-12



ವಿದ್ಯಾ ವಿ. ಹಾಲಭಾವಿ

### ಎಡದಿಂದ ಬಲಕ್ಕೆ

1. ಅನಿರೀಕ್ಷಿತವಾಗಿ ಬಂದ ಅತಿಥಿ (4)
4. ಸುದ್ದಿಯ ವರದಿಗಾರ (4)
5. ಉಣ್ಣೆಯ ಉತ್ತರೀಯವಿಲ್ಲಿ ಉಲ್ಟಾ ಆಗಿದೆ (3)
7. ನಾಲ್ಕು ಉಪಾಯಗಳಲ್ಲಿ ಒಂದು!ಶಿಕ್ಷೆಯೂ ಆದೀತು! (2)
9. ಈ ಬಾರಿ ದಸರ ಉದ್ಘಾಟನೆ ಇವರಿಂದ ನೆರವೇರಿತು (7)
11. ಯೌವ್ವನದಲ್ಲಿ ನೋಡಿದ ಕಾಡು! (2)
12. ಕಸ್ತೂರಿ ಕಂಪಿನ ಭಾಷೆ (3)
14. ಉತ್ತರಕನ್ನಡ ಜಿಲ್ಲೆಯ ಈ ಊರನ್ನು 'ಕರ್ನಾಟಕದ ಕಾಶ್ಮೀರ' ಎಂದು ರವೀಂದ್ರನಾಥ್ ಠಾಗೂರ್ ಹೊಗಳಿದ್ದಾರೆ (4)
16. ಮೂರು ಮೈಲುಗಳ ಒಂದು ಅಳತೆ (4)

### ಮೇಲಿಂದ ಕೆಳಕ್ಕೆ

1. ಕದವನ್ನು ತೆಗೆಯಲಾಗದಂತೆ ತಡೆಯುವ ಅಡ್ಡಮರ (3)
2. ತರಲೆಯ ಶಿರ! (2)
3. ಬೀಳ್ಕೊಡುವಿಕೆಯನ್ನು ಹೀಗೆನ್ನಿ (3)
4. ಕನಕದಾಸರು ಹುಟ್ಟಿದ್ದು ಈ ಗ್ರಾಮದಲ್ಲಿ (2)
6. ನಿರ್ವಾಹಕ ಇಲ್ಲಿದ್ದಾನೆ! (4)
7. ಹಲ್ಲುಗಳನ್ನು ತೊಳೆಯುವುದು (5)
8. ಗಣಪತಿಯ ಇನ್ನೊಂದು ಹೆಸರು (4)
10. ಹರನ ಮುಂದಿರಿಸಿದ ಮಣ್ಣಿನ ಬಾನಿ (3)
11. ವಠಾರದಲ್ಲಿರುವ ಮದುವೆ ಗಂಡು! (2)
13. ಅನ್ನ ಮಾಡುವ ಪಾತ್ರೆ (3)
15. ಬಾಯಾರಿಕೆ ಈ ರೀತಿ ಬಂದಿದೆ (2)

### ಉತ್ತರ

**ಮೇಲಿಂದ ಕೆಳಕ್ಕೆ**

1. ಅಗಳಿ 2. ತಲೆ 3. ವಿದಾಯ 4. ಬಾಡ 6. ಕಂಡಕ್ಟರ್ 7. ದಂತಮಂಜನ 8. ವಿನಾಯಕ 10. ಹರವಿ 11. ವರ 13. ಡಬರಿ 15. ದಾಹ

**ಎಡದಿಂದ ಬಲಕ್ಕೆ**

1. ಅಭ್ಯಾಗತ 4. ಬಾತ್ಮೀದಾರ 5. ಳಿಬಕಂ 7. ದಂಡ 9. ಡಾಕ್ಟರ್ ಮಂಜುನಾಥ್ 11. ವನ 12. ಕನ್ನಡ 14. ಕಾರವಾರ 16. ಹರಿದಾರಿ

**-: ಸೂಚನೆ :-**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಟ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ-ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Dr P S Harsha, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Abhimaani Publications Pvt. Ltd.,, Dr Rajkumar Road, Rajajinagar, Bangalore - 560 010

For More Job News Visit: www.kpscvaani.com

# ಕೋವಿಡ್-19

## ಭಯ ಬೇಡ-ಎಚ್ಚರವಿರಲಿ



**ಮಾಸ್ಕ್ ಧರಿಸಿ - ಕುಟುಂಬವನ್ನು ರಕ್ಷಿಸಿ**




## ರೋಗ ಲಕ್ಷಣಗಳು






### ಒಬ್ಬರಿಂದ ಮತ್ತೊಬ್ಬರಿಗೆ ಹರಡುವ ರೀತಿ

- ಸೋಂಕಿತ ವ್ಯಕ್ತಿಯು ಸೀನಿದಾಗ ಮತ್ತು ಕೆಮ್ಮಿದಾಗ
- ಸೋಂಕಿತ ವ್ಯಕ್ತಿಯ ಜೊತೆ ನಿಕಟ ಸಂಪರ್ಕದಲ್ಲಿರುವಾಗ
- ಸೋಂಕಿತ ವ್ಯಕ್ತಿಯ ಹಸ್ತ ಲಾಘವ ಮತ್ತು ಮುಟ್ಟುವಾಗ
- ಸೋಂಕಿತ ವ್ಯಕ್ತಿಯು ಬಳಸಿದ ವಸ್ತುಗಳನ್ನು ಯಾವುದೇ ರಕ್ಷಣೆ ಇಲ್ಲದೆ ಬಳಸಿದಾಗ
- ಸ್ವಚ್ಛಗೊಳಿಸದ/ಸುರಕ್ಷಿತವಲ್ಲದ ಕೈಗಳಿಂದ ಕಣ್ಣು, ಮೂಗು, ಬಾಯಿಯನ್ನು ಮುಟ್ಟುವುದರಿಂದ.

### ಸಾರ್ವಜನಿಕರು ಅನುಸರಿಸಬೇಕಾಗಿರುವ ಮುಂಜಾಗ್ರತ ಕ್ರಮಗಳು

- ಸೋಂಕು ಪೀಡಿತರ ಸಂಪರ್ಕದಿಂದ ದೂರವಿರುವುದು.
- ಶಂಕಿತ ರೋಗಿಯು ಮನೆಯಲ್ಲಿಯೇ ಪ್ರತ್ಯೇಕವಾಗಿರುವುದು ಮತ್ತು ಟ್ರಿಪಲ್ ಲೇಯರ್ ಮಾಸ್ಕ್ ಬಳಸುವುದು
- ವೈಯಕ್ತಿಕ ಸ್ವಚ್ಛತೆ ಕಾಪಾಡಿಕೊಳ್ಳುವುದು, ವಿಶೇಷವಾಗಿ ಆಗಾಗ್ಗೆ ಸಾಬೂನಿನಿಂದ ಕೈ ತೊಳೆದುಕೊಳ್ಳುವುದು
- ಕೆಮ್ಮುವಾಗ ಮತ್ತು ಸೀನುವಾಗ ಮಾಸ್ಕ್/ಕೈವಸ್ತ್ರ ಉಪಯೋಗಿಸುವುದು
- ಸಾರ್ವಜನಿಕ ಸ್ಥಳಗಳಲ್ಲಿ ಉಗುಳಬಾರದು
- ಉಸಿರಾಟದ ತೊಂದರೆಯಾದಲ್ಲಿ ತಕ್ಷಣ ವೈದ್ಯರ ಸಲಹೆ ಪಡೆಯುವುದು

**ಚಿಕಿತ್ಸೆ :**
ಈ ರೋಗಕ್ಕೆ ಯಾವುದೇ ನಿಖರವಾದ ಚಿಕಿತ್ಸೆ ಇರುವುದಿಲ್ಲ. ರೋಗದ ಲಕ್ಷಣಗಳಿಗೆ ಅನುಗುಣವಾಗಿ ಚಿಕಿತ್ಸೆ ನೀಡಲಾಗುತ್ತದೆ. ಯಾವುದೇ ಲಸಿಕೆ ಲಭ್ಯವಿಲ್ಲ.



For More Job News Visit: www.kpscvaani.com

"VARTHA JANAPADA" Monthly - November 2020
"ವಾರ್ತಾ ಜನಪದ" ಮಾಸಿಕ – ನವೆಂಬರ್ 2020



RNI No. KAR/KAN/2017/75029

Regd No.KA/BGGPO/2583/2018-20 Licensed to post without prepayment Licence No. PMG/BG/ WPP-365/2018-20
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26




For More Job News Visit: www.kpscvaani.com